ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಮೇ 30 ಶುಕ್ರವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 44 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಪಂಜಾಬ್ ಮಣಿಸಿ ಆರ್‌ಸಿಬಿ 4ನೇ ಬಾರಿಗೆ ಫೈನಲ್ ಪ್ರವೇಶ

• ಅಭಿಮಾನಿಗಳ 18 ವರ್ಷಗಳ ಕನಸು ನನಸಾಗಲು ಇನ್ನೊಂದು ಹೆಜ್ಜೆ ಬಾಕಿ • ಜೂ.3ರಂದು ಫೈನಲ್

ಚಂಡೀಗಢ, ಮೇ 29– ರಾಯಲ್ ಚಾಲೆಂಜರ್ಸ್ ಬೆಂಗಳೂರು ಅಭಿಮಾನಿಗಳ 18 ವರ್ಷಗಳ ಕನಸು ನನಸಾಗುವ ಸುವರ್ಣ ಕಾಲ ಬಂದಿದ್ದು, ಬ್ಯಾಟಿಂಗ್ ಹಾಗೂ ಬೌಲಿಂಗ್‌ನಲ್ಲಿ ಸಂಘಟಿತ ಪ್ರದರ್ಶನ ನೀಡಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು, ಪಂಜಾಬ್ ಕಿಂಗ್ಸ್ ವಿರುದ್ಧ 8 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿ ಪ್ರಸಕ್ತ ಸಾಲಿನ ಫೈನಲ್‌ಗೆ ಲಗ್ಗೆ ಹಾಕಿದೆ.

ಆ ಮೂಲಕ ಬರೋಬ್ಬರಿ 9 ವರ್ಷಗಳ ಬಳಿಕ ಆರ್‌ಸಿಬಿ ಫೈನಲ್ ಪ್ರವೇಶಿಸಿದ್ದು, ಅಭಿಮಾನಿಗಳಲ್ಲಿ ಸಂತಸ ಮನೆ ಮಾಡಿದೆ. ಅಲ್ಲದೇ ಬೆಂಗಳೂರು ತಂಡ 4ನೇ ಬಾರಿಗೆ (2009, 2011, 2016, 2025) ಫೈನಲ್ ಪ್ರವೇಶಿಸಿದೆ. ಮತ್ತೊಂದೆಡೆ ಪಂದ್ಯ ಸೋತ ಪಂಜಾಬ್ ಕಿಂಗ್ಸ್ ಜೂ.1 ರಂದು ನಡೆಯಲಿರುವ ಕ್ವಾಲಿಫೈಯರ್–2 ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ಮತ್ತು ಗುಜರಾತ್ ಟೈಟಾನ್ಸ್ ನಡುವಿನ ಎಲಿಮಿನೇಟರ್ ಪಂದ್ಯದ ವಿಜೇತರೊಂದಿಗೆ ಆಡುವ ಮೂಲಕ ಫೈನಲ್ ಪ್ರವೇಶಿಸಲು ಮತ್ತೊಂದು ಅವಕಾಶ ಪಡೆಯುತ್ತದೆ.

ಚಂಡೀಗಢದ ಮುಲ್ಲನ್‌ಪುರ ಮಹಾರಾಜ ಯಾದವೀಂದ್ರ ಸಿಂಗ್ ಅಂತರಾಷ್ಟ್ರೀಯ ಮೈದಾನದಲ್ಲಿ ಗುರುವಾರ ನಡೆದ ಕ್ವಾಲಿಫೈಯರ್ 1 ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಪಂಜಾಬ್ 14.1 ಓವರ್‌ಗಳಲ್ಲಿ 101 ರನ್‌ಗಳಿಗೆ ಆಲೌಟಾಯಿತು. ಈ ಗುರಿ ಬೆನ್ನತ್ತಿದ ಆರ್‌ಸಿಬಿ 10 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ ಇನ್ನೂ 10 ಓವರ್‌ಗಳು ಬಾಕಿ ಇರುವಂತೆಯೇ 106 ರನ್ ಗಳಿಸಿ ಜಯದ ನಗೆ ಬೀರಿತು.

ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ವಿರಾಟ್ ಕೊಹ್ಲಿ 2 ಬೌಂಡರಿ ಒಳಗೊಂಡ 12 ರನ್ ಗಳಿಸಿ ಬಹುಬೇಗ ನಿರ್ಗಮಿಸಿದರು. ನಂತರ ಬಂದ ಮಯಾಂಕ್ ಅಗರ್ವಾಲ್ 13 ಎಸೆತಗಳಲ್ಲಿ 1 ಸಿಕ್ಸರ್, 2 ಬೌಂಡರಿ ಒಳಗೊಂಡ 19 ರನ್ ಗಳಿಸಿ ಔಟಾದರೇ, ಮತ್ತೊಂದೆಡೆ ಉತ್ತಮ ಬ್ಯಾಟಿಂಗ್ ಪ್ರದರ್ಶನ ನೀಡಿದ ಫಿಲ್ ಸಾಲ್ಟ್ ಸ್ಫೋಟಕ ಅರ್ಧಶತಕದೊಂದಿಗೆ ತಂಡಕ್ಕೆ ಗೆಲುವು ತಂದುಕೊಟ್ಟರು. 27 ಎಸೆತಗಳಲ್ಲಿ 6 ಬೌಂಡರಿ, 3 ಸಿಕ್ಸರ್ ಒಳಗೊಂಡ ಅಜೇಯ 56 ರನ್ ಗಳಿಸಿ ಮಿಂಚಿದರು. ಉಳಿದಂತೆ ನಾಯಕ ರಜತ್ ಪಾಟೀದಾರ್ 15 ರನ್ ಗಳಿಸಿದರು. ಪಂಜಾಬ್ ಪರ ಕೈಲ್ ಜಾಮಿಸನ್ ಮತ್ತು ಮುಶೀರ್ ಖಾನ್ ತಲಾ ಒಂದೊಂದು ವಿಕೆಟ್ ಗಳಿಸಿದರು.

ಇದಕ್ಕೂ ಮುನ್ನಾ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಪಂಜಾಬ್ ಕಿಂಗ್ಸ್ ಆರ್‌ಸಿಬಿಯ ಬಿಗು ಬೌಲಿಂಗ್ ಎದುರು ರನ್ ಗಳಿಸಲು ತಿಣುಕಾಡಿತು. ಪರಿಣಾಮ ಪ್ರಭ್ ಸಿಮ್ರಾನ್ ಸಿಂಗ್ 18, ಮಾರ್ಕಸ್ ಸ್ಟೋಯಿನಿಸ್ 26, ಅಜ್ಮತುಲ್ಲಾ

▸ 6ನೇ ಪುಟಕ್ಕೆ



ಗಣ್ಯರ ಅಭಿನಂದನೆ

ರಾಯಲ್ ಚಾಲೆಂಜರ್ಸ್ ಬೆಂಗಳೂರು 18ನೇ ಆವೃತ್ತಿಯ ಐಪಿಎಲ್ ಫೈನಲ್ ಪ್ರವೇಶಿಸಿದ ಹಿನ್ನೆಲೆಯಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವ ಸಂತೋಷ್ ಲಾಡ್, ಚಿತ್ರರಂಗದ ಅನೇಕ ನಟ ನಟಿಯರು ಸೇರಿದಂತೆ ಇತರರು ತಂಡಕ್ಕೆ ಅಭಿನಂದನೆ ಸಲ್ಲಿಸಿದರು.

ಆರ್‌ಸಿಬಿ ಮತ್ತು ಅಭಿಮಾನಿಗಳಿಗೆ ತುಂಬು ಹೃದಯದ ಅಭಿನಂದನೆಗಳು. 18 ವರ್ಷಗಳ ಕನಸು ನನಸಾಗುವ ಕಾಲ ಬಂದಿದೆ. 'ಈ ಸಲ ಕಪ್ ನಮ್ದೆ' ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಟ್ವೀಟ್ ಮಾಡಿದ್ದಾರೆ.

ನಮ್ಮ ಹೆಮ್ಮೆಯ ಆರ್‌ಸಿಬಿ ಫೈನಲ್‌ಗೆ 'ಕೊಹ್ಲಿಫೈ' ಆಗಿದೆ ಎಂದು ಸಂತೋಷ್ ಲಾಡ್ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಸದ್ಯಕ್ಕೆ ಸರ್ಕಾರ ನಿರಾಳ

ಬೆಂಗಳೂರು ಅರಮನೆ ಆವರಣಕ್ಕೆ ಸಂಬಂಧಿಸಿದ ಟಿಡಿಆರ್ ನೀಡುವ ಆದೇಶಕ್ಕೆ ಸುಪ್ರೀಂಕೋರ್ಟ್ ತಡೆ!

ಬೆಂಗಳೂರು, ಮೇ 29– ಬೆಂಗಳೂರು ಅರಮನೆ ಮೈದಾನದ ಭೂವಿವಾದದಲ್ಲಿ ಕರ್ನಾಟಕ ಸರ್ಕಾರಕ್ಕೆ ಸುಪ್ರೀಂಕೋರ್ಟ್‌ನಲ್ಲಿ ತಾತ್ಕಾಲಿಕ ರಿಲೀಫ್ ದೊರೆತಿದ್ದು,



ಸುಮಾರು 3400 ಕೋಟಿ ರೂ. ಟಿಡಿಆರ್ ಪಾವತಿಗೆ ತಡೆಯಾಜ್ಞೆ ನೀಡಲಾಗಿದೆ.

ಬೆಂಗಳೂರು ಅರಮನೆ ಮೈದಾನದ ಭೂ ವಿವಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ನಾಟಕ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಗುರುವಾರ ತಾತ್ಕಾಲಿಕ ರಿಲೀಫ್ ನೀಡಿದೆ.

ಸುಮಾರು 3,400 ಕೋಟಿ ರೂ. ಅಭಿವೃದ್ಧಿ ಹಕ್ಕು ಪ್ರಮಾಣಪತ್ರ ಅಥವಾ ಟಿಡಿಆರ್ ಸರ್ಟಿಫಿಕೇಟ್ ಅನ್ನು ರಾಜಮನೆತನಕ್ಕೆ ಹಸ್ತಾಂತರ ಮಾಡಬೇಕೆಂದು ಈ ಹಿಂದೆ ನೀಡಿದ್ದ ಆದೇಶಕ್ಕೆ ಸರ್ವೋಚ್ಚ ನ್ಯಾಯಾಲಯ ತಡೆಯಾಜ್ಞೆ ನೀಡಿದೆ.

ನ್ಯಾ.ಸೂರ್ಯಕಾಂತ್ ನೇತೃತ್ವದ ತ್ರಿಸದಸ್ಯ ಪೀಠ ಈ ಆದೇಶ ನೀಡಿದ್ದು, ಮರುಪರಿಶೀಲನಾ ಅರ್ಜಿಯ ಮುಂದಿನ ವಿಚಾರಣೆಯನ್ನು ಜುಲೈ 21ಕ್ಕೆ ಹಾಗೂ ಮುಖ್ಯ ಸಿವಿಲ್ ಅರ್ಜಿಯ ವಿಚಾರಣೆಯನ್ನು ಆಗಸ್ಟ್ 18ಕ್ಕೆ

▸ 6ನೇ ಪುಟಕ್ಕೆ

ಕೆಲ ಆಂತರಿಕ ರಾಜಕೀಯ ಬೆಳವಣಿಗೆ ಹಿನ್ನೆಲೆ

ಸಿಎಂಗೆ ಹೈಕಮಾಂಡ್ ಬುಲಾವ್



• ನಾಳೆ ಇಲ್ಲವೆ ಜೂ.5ರಂದು ಬಿಡುವು ಮಾಡಿಕೊಂಡು ಬರುವಂತೆ ಎಐಸಿಸಿ ಸೂಚನೆ • ಸರ್ಕಾರ, ಪಕ್ಷಕ್ಕೆ ಸಂಬಂಧಿಸಿದಂತೆ ಪಕ್ಷದ ಅಧಿನಾಯಕಿ ಸೋನಿಯಾ ಗಾಂಧಿ ಸಮಾಲೋಚನೆ • ಜಲ ಸಂಪನ್ಮೂಲ ಇಲಾಖೆ ಮುಖ್ಯ ಇಂಜಿನಿಯರ್‌ಗಳ ವರ್ಗಾವಣೆ ವಿಚಾರದಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್ ಗರಂ; ವರ್ಗಾವಣೆ ತಡೆಗೆ ಮುಖ್ಯ ಕಾರ್ಯದರ್ಶಿಗೆ ಪತ್ರ • ಈ ವಿಷಯವೂ ಸೇರಿದಂತೆ ಹಲವು ಬೆಳವಣಿಗೆ ಹಿನ್ನೆಲೆಯಲ್ಲಿ ಮಧ್ಯ ಪ್ರವೇಶಿಸಿದ ಕಾಂಗ್ರೆಸ್ ವರಿಷ್ಠರು

ಬೆಂಗಳೂರು, ಮೇ 29(ಕೆಎಂಶಿ)–ಕಾಂಗ್ರೆಸ್ ಸರ್ಕಾರಕ್ಕೆ ಎರಡು ವರ್ಷ ತುಂಬಿದ ಬೆನ್ನಲ್ಲೇ ಕೆಲವು ಆಂತರಿಕ ರಾಜಕೀಯ ಬೆಳವಣಿಗೆ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪಕ್ಷದ ವರಿಷ್ಠರು ದೆಹಲಿಗೆ ಬುಲಾವ್ ಮಾಡಿದ್ದಾರೆ.

ದೆಹಲಿಗೆ ಕರೆಸಿಕೊಂಡು ಸರ್ಕಾರ ಮತ್ತು ಪಕ್ಷಕ್ಕೆ ಸಂಬಂಧಿಸಿದಂತೆ ಸಮಾಲೋಚನೆ ನಡೆಸಲು ಪಕ್ಷದ ಅಧಿನಾಯಕಿ ಸೋನಿಯಾ ಗಾಂಧಿ ಮುಂದಾಗಿದ್ದಾರೆ.

ಮೇ 31 ಇಲ್ಲವೇ ಜೂನ್ 5ರಂದು ಬಿಡುವು ಮಾಡಿಕೊಂಡು ದೆಹಲಿಗೆ ಬರುವಂತೆ ಸಿದ್ದರಾಮಯ್ಯ ಅವರಿಗೆ ಎಐಸಿಸಿ ಸೂಚಿಸಿದೆ. ವಿಧಾನಪರಿಷತ್‌ನಲ್ಲಿ ತೆರವಾಗಿರುವ ಸ್ಥಾನಗಳ ಭರ್ತಿ ಹಾಗೂ ಪರಿಷತ್‌ನಲ್ಲಿ ಪಕ್ಷಕ್ಕೆ ಬಹುಮತ ಸಿಕ್ಕಿದ್ದು, ಸಭಾಪತಿ ಮತ್ತು ಉಪಸಭಾಪತಿ ಆಯ್ಕೆಗೆ ಸಂಬಂಧಿಸಿದಂತೆ ವರಿಷ್ಠರೊಂದಿಗೆ ಚರ್ಚೆ ನಡೆಸಿ, ಹೆಸರು ಅಂತಿಮಗೊಳಿಸಲು ಮುಂದಾಗಿದ್ದಾರೆ.

ಇದೂ ಸೇರಿದಂತೆ ಕೆಲವು ರಾಜಕೀಯ ನೇಮಕಾತಿಗೆ ಸಂಬಂಧಿಸಿದಂತೆಯೂ ವರಿಷ್ಠರೊಂದಿಗೆ ಮಾತುಕತೆ ನಡೆಸಲು ಮುಖ್ಯಮಂತ್ರಿ ದೆಹಲಿಗೆ ತೆರಳಲು ಈಗಾಗಲೇ ನಿರ್ಧರಿಸಿದ್ದರು. ಈ ಮಧ್ಯೆ ಸೋನಿಯಾ ಗಾಂಧಿ ಅವರೇ ಮುಖ್ಯಮಂತ್ರಿ ಭೇಟಿ ಮಾಡಲು ಆಸಕ್ತಿ ತೋರಿದ್ದರಿಂದ ಎಐಸಿಸಿ ಕಚೇರಿ, ಮುಖ್ಯಮಂತ್ರಿ ಅವರಿಗೆ ದೆಹಲಿಗೆ ಬರುವಂತೆ ಹೇಳಿದೆ.

ಸಿಎಂ ಹಸ್ತಕ್ಷೇಪಕ್ಕೆ ಡಿಸಿಎಂ ಆಕ್ಷೇಪ: ಪ್ರದೇಶ ಕಾಂಗ್ರೆಸ್ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಮ್ಮ ಇಲಾಖಾ ವರ್ಗಾವಣೆಯಲ್ಲಿ ಮುಖ್ಯಮಂತ್ರಿ ಹಸ್ತಕ್ಷೇಪ ಮಾಡಿರುವುದನ್ನು ಆಕ್ಷೇಪಿಸಿ, ಮುಖ್ಯ ಕಾರ್ಯದರ್ಶಿ ಅವರಿಗೆ ಮೇ 13 ರಂದು ಪತ್ರ ಬರೆದಿರುವುದು ಪಕ್ಷದಲ್ಲಿ ಸಂಚಲನ ಉಂಟು ಮಾಡಿದೆ.

ಇದರ ಬೆನ್ನಲ್ಲೇ ಎಐಸಿಸಿ ಪ್ರಧಾನಕಾರ್ಯದರ್ಶಿಗಳಾದ ಕೆ.ಸಿ.ವೇಣುಗೋಪಾಲ್ ಹಾಗೂ ರಣದೀಪ್ ಸಿಂಗ್ ಸುರ್ಜೇವಾಲ, ಕಾರ್ಯಕ್ರಮವೊಂದನ್ನು ನೆಪವಾಗಿಟ್ಟುಕೊಂಡು ಕರ್ನಾಟಕಕ್ಕೆ ದೌಡಾಯಿಸಿ ಶಿವಕುಮಾರ್ ಅವರನ್ನು ಕರೆಸಿಕೊಂಡು ಚರ್ಚೆ ನಡೆಸಿದರು.

ನಂತರ ಬೆಂಗಳೂರಿನಲ್ಲೇ ಇದ್ದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನಿವಾಸಕ್ಕೆ ಶಿವಕುಮಾರ್ ಅವರನ್ನು ಜೊತೆಯಲ್ಲಿ ಕರೆದೊಯ್ದ ವೇಣುಗೋಪಾಲ್ ಹಾಗೂ ರಣದೀಪ್ ಸಿಂಗ್ ಸುರ್ಜೇವಾಲ, ಎರಡು ಗಂಟೆಗಳ ಕಾಲ ರಹಸ್ಯ ಮಾತುಕತೆ ನಡೆದಿದೆ.

ಈ ಮಾತುಕತೆ ನಂತರ ಸಿದ್ದರಾಮಯ್ಯ ಅವರಿಗೆ ದೆಹಲಿಗೆ ಬರುವಂತೆ ಎಐಸಿಸಿಯಿಂದ ಸಂದೇಶ ತಲುಪಿತು ಎಂದು ಉನ್ನತ ಮೂಲಗಳು ತಿಳಿಸಿವೆ.

ಮುಖ್ಯಮಂತ್ರಿ ಅವರ ಅಧೀನದಲ್ಲಿ ಬರುವ ಡಿಪಿಎಆರ್ ಮೂಲಕ ಮುಖ್ಯ ಇಂಜಿನಿಯರ್‌ಗಳ ವರ್ಗಾವಣೆ ನಡೆಯಲಿದೆ. ತಮ್ಮ ಗಮನಕ್ಕೆ ತಾರದೆ ಆರು ಮುಖ್ಯ ಇಂಜಿನಿಯರ್‌ಗಳನ್ನು ವರ್ಗಾವಣೆ ಮಾಡಿದ್ದು ಶಿವಕುಮಾರ್ ಕೋಪಕ್ಕೆ ಕಾರಣವಾಗಿದೆ. ಶಿವಕುಮಾರ್ ತಮ್ಮ ಕೋಪವನ್ನು ಮುಖ್ಯಮಂತ್ರಿ ಮೇಲೆ ತೋರಿಸದೆ, ಮುಖ್ಯಕಾರ್ಯದರ್ಶಿ

▸ 6ನೇ ಪುಟಕ್ಕೆ

ರಾಜ್ಯ ರಾಜಕಾರಣದಲ್ಲಿ ಮಹತ್ತರ ತಿರುವು

ಬೆಂಗಳೂರು, ಮೇ 29(ಕೆಎಂಶಿ)–ರಾಜ್ಯ ರಾಜಕಾರಣವು ಮುಂದಿನ ದಿನಗಳಲ್ಲಿ ಮಹತ್ತರ ತಿರುವು ಪಡೆಯಲಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಇಂದಿಲ್ಲಿ ಮಾರ್ಮಿಕವಾಗಿ ನುಡಿದಿದ್ದಾರೆ.




ಇಲಾಖಾ ಮುಖ್ಯ ಇಂಜಿನಿಯರ್‌ಗಳ ವರ್ಗಾವಣೆಗೆ ಆಕ್ಷೇಪಿಸಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸರ್ಕಾರದ ಮುಖ್ಯಕಾರ್ಯದರ್ಶಿ ಅವರಿಗೆ ಪತ್ರ ಬರೆದಿರುವುದು ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ದಿಢೀರನೆ ವಿಧಾನಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಮನೆಗೆ ಭೇಟಿ ನೀಡಿರುವುದೇ ಮಹತ್ತರ ರಾಜಕೀಯ ಬೆಳವಣಿಗೆ ನಡೆಯಲಿದೆ ಎಂಬುದಕ್ಕೆ ಸಾಕ್ಷಿ ಎಂದಿದ್ದಾರೆ.

ಪಕ್ಷದ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ವರಿಷ್ಠರು ರಾತ್ರೋರಾತ್ರಿ ಬೆಂಗಳೂರಿಗೆ ಧಾವಿಸಿ ಗೌಪ್ಯ ಸಭೆಗಳನ್ನು ನಡೆಸುತ್ತಾರೆಂದರೆ, ಸರ್ಕಾರ ಮತ್ತು ಆಡಳಿತ ಪಕ್ಷದಲ್ಲಿ ಎಲ್ಲವೂ ಸರಿಯಿಲ್ಲ ಎಂಬುದನ್ನು ತೋರಿಸುತ್ತದೆ. ನಾನು ಈ ಹಿಂದೆ ಹೇಳಿದಂತೆ ಕಾಂಗ್ರೆಸ್ ಆಡಳಿತದಲ್ಲಿ ರಹಸ್ಯ ಬೆಳವಣಿಗೆಗಳು ನಡೆಯುತ್ತಿದ್ದು, ಮುಂದಿನ ದಿನಗಳಲ್ಲಿ ರಾಜ್ಯ ರಾಜಕೀಯದಲ್ಲಿ ಭಾರಿ ತಿರುವು ನೀಡಲಿದೆ ಎಂದರು.

ರಾಜ್ಯ ಸರ್ಕಾರಕ್ಕೆ ಭಾರೀ ಹಿನ್ನಡೆ

ಹುಬ್ಬಳ್ಳಿ ಗಲಭೆ ಸೇರಿ 43 ಕೇಸ್ ವಾಪಸ್ ಆದೇಶ ರದ್ದುಗೊಳಿಸಿದ ಹೈಕೋರ್ಟ್

ಬೆಂಗಳೂರು, ಮೇ 29– 2022ರಲ್ಲಿ ಹಳೇ ಹುಬ್ಬಳ್ಳಿಯಲ್ಲಿ ನಡೆದಿದ್ದ ಗಲಭೆ ಪ್ರಕರಣ ಸೇರಿದಂತೆ 43 ಕ್ರಿಮಿನಲ್



ಪ್ರಕರಣಗಳನ್ನು ಹಿಂಪಡೆದಿದ್ದ ರಾಜ್ಯ ಸರ್ಕಾರದ ಆದೇಶವನ್ನು ಕರ್ನಾಟಕ ಹೈಕೋರ್ಟ್ ಗುರುವಾರ ರದ್ದುಗೊಳಿಸಿದೆ. ಇದರಿಂದ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರಕ್ಕೆ ತೀವ್ರ ಹಿನ್ನಡೆಯಾಗಿದೆ.

ಹುಬ್ಬಳ್ಳಿ ಗಲಭೆ ಸೇರಿದಂತೆ 43 ಪ್ರಕರಣಗಳನ್ನು ವಾಪಸ್ ಪಡೆಯಲು ರಾಜ್ಯ ಸಚಿವ ಸಂಪುಟದಲ್ಲಿ ತೀರ್ಮಾನ ತೆಗೆದುಕೊಳ್ಳಲಾಗಿತ್ತು. ಅದರಂತೆ ಅಕ್ಟೋಬರ್ 2024 ರಲ್ಲಿ ಮಾಜಿ ಸಚಿವರು, ಮಾಜಿ ಶಾಸಕರು, ವಿವಿಧ ಸಂಘಟನೆಗಳ ಹೋರಾಟಗಾರರು ಮತ್ತು ಪ್ರಭಾವಿ ಸಂಸ್ಥೆಗಳಿಗೆ ಸೇರಿದ ವ್ಯಕ್ತಿಗಳ ವಿರುದ್ಧದ 43 ಕ್ರಿಮಿನಲ್ ಪ್ರಕರಣಗಳನ್ನು ಹಿಂಪಡೆಯಲು ಆದೇಶ ಹೊರಡಿಸಲಾಗಿತ್ತು.

ಸರ್ಕಾರದ ಈ ಆದೇಶವನ್ನು ಪ್ರಶ್ನಿಸಿ ಗಿರೀಶ್ ಭಾರದ್ವಾಜ್ ಎಂಬುವರು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು. ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್ ಸಿಜೆ ಎನ್.ವಿ.ಅಂಜಾರಿಯಾ,

▸ 6ನೇ ಪುಟಕ್ಕೆ

ಟ್ರಂಪ್ ವಿಧಿಸಿದ್ದ ಹೊಸ ಸುಂಕಗಳಿಗೆ ಅಮೆರಿಕಾ ಕೋರ್ಟ್ ತಡೆ



ವಾಷಿಂಗ್ಟನ್, ಮೇ 29– ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಹೇರಿದ್ದ ಸುಂಕಗಳಿಗೆ ಇಲ್ಲಿನ ಅಂತರರಾಷ್ಟ್ರೀಯ ವಾಣಿಜ್ಯ ನ್ಯಾಯಾಲಯ ತಡೆ ನೀಡಿ ಬುಧವಾರ ಆದೇಶಿಸಿದೆ. ಟ್ರಂಪ್ ಅವರು ತಮ್ಮ ಅಧಿಕಾರ ವ್ಯಾಪ್ತಿ ಮೀರಿ ಈ ನಿರ್ಧಾರ ಕೈಗೊಂಡಿದ್ದಾರೆ ಎಂದು ಹೇಳಿರುವ ಮೂವರು ನ್ಯಾಯಮೂರ್ತಿಗಳು, ಟ್ರಂಪ್ ಅವರು ಜನವರಿಯಲ್ಲಿ ಅಧಿಕಾರ ವಹಿಸಿಕೊಂಡ ನಂತರ ಹೇರಿದ್ದ ಬಹುತೇಕ ಎಲ್ಲ ಸುಂಕಗಳಿಗೆ ತಡೆ ನೀಡಿದ್ದಾರೆ. ಸುಂಕ ವಿಧಿಸುವುದನ್ನು ಸ್ಥಗಿತಗೊಳಿಸುವ ಪ್ರಕ್ರಿಯೆ ಪೂರ್ಣಗೊಳಿಸುವುದಕ್ಕಾಗಿ ನ್ಯಾಯಾಲಯವು ಶ್ವೇತಭವನಕ್ಕೆ 10 ದಿನಗಳ ಕಾಲಾವಕಾಶ ನೀಡಿದೆ.

ಅಂತರರಾಷ್ಟ್ರೀಯ ತುರ್ತು ಆರ್ಥಿಕ ಅಧಿಕಾರ ಕಾಯ್ದೆಯಡಿಯಲ್ಲಿ ತುರ್ತು ಸಂದರ್ಭಗಳಲ್ಲಿ ಮಾತ್ರ ಅಧ್ಯಕ್ಷರು ಜಾಗತಿಕ ರಾಷ್ಟ್ರಗಳ ಮೇಲೆ ಆರ್ಥಿಕ ನಿರ್ಬಂಧಗಳನ್ನು ವಿಧಿಸಬಹುದು ಎಂದು ನ್ಯಾಯಾಲಯವು ತೀರ್ಪಿನಲ್ಲಿ ತಿಳಿಸಿದೆ. ವಿಶೇಷ ಅಧಿಕಾರಗಳೊಂದಿಗೆ ಸುಂಕಗಳನ್ನು ವಿಧಿಸುವುದು ಸರಿಯಲ್ಲ. ಇದು ಸಾಂವಿಧಾನಿಕ ಸಂಸ್ಥೆಗಳನ್ನು ದುರ್ಬಲಗೊಳಿಸುತ್ತದೆ ಎಂದು ಪೀಠವು ಒತ್ತಿ ಹೇಳಿದೆ ಟ್ರಂಪ್ ಅಂತರರಾಷ್ಟ್ರೀಯ

▸ 6ನೇ ಪುಟಕ್ಕೆ

ಸಾಮೂಹಿಕ ಅತ್ಯಾಚಾರವೆಸಗಿ ಮಹಿಳೆ ಸಾವಿಗೆ ಕಾರಣರಾಗಿದ್ದ ಐವರಿಗೆ 20 ವರ್ಷ ಕಠಿಣ ಶಿಕ್ಷೆ

ಮೈಸೂರು, ಮೇ 29(ಆರ್‌ಕೆ)– ಸಾಮೂಹಿಕವಾಗಿ ಮಹಿಳೆ ಮೇಲೆ ಅತ್ಯಾಚಾರವೆಸಗಿ ಆಕೆ ಸಾವಿಗೆ ಕಾರಣರಾಗಿದ್ದ ಐವರು ಕಾಮುಕರಿಗೆ ಮೈಸೂರಿನ 7ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶ ಎಂ.ರಮೇಶ್ ಅವರು 20 ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ ವಿಧಿಸಿದ್ದಾರೆ.

ಮೈಸೂರಿನ ಶಾಂತಿನಗರದ ನಜೀರ್ ಅಹಮದ್ ಅವರ ಮಗ ರಫೀಕ್ ಅಹಮದ್ ಅಲಿಯಾಸ್ ತಲ್ಲಾ(26), ಮಂಡಿ ಮೊಹಲ್ಲಾ ನಿವಾಸಿ ಮಂಜ ಅಲಿಯಾಸ್ ಆರ್.ಮಂಜುನಾಥ(25), ಲಷ್ಕರ್ ಮೊಹಲ್ಲಾ, ಅಕ್ಕಿ ಚೌಕ ಬಳಿ ನಿವಾಸಿ ಮನು ಅಲಿಯಾಸ್ ಲೇಡೀಸ್(23),

ಮೈಸೂರು ನ್ಯಾಯಾಲಯದ ಮಹತ್ವದ ತೀರ್ಪು



ರೇವಣ್ಣ ಅಲಿಯಾಸ್ ರೇವ(27) ಹಾಗೂ ಕೃಷ್ಣ(40) ಶಿಕ್ಷೆಗೆ ಗುರಿಯಾದ ಆರೋಪಿಗಳು.

ವಿವರ: 2021ರ ಫೆಬ್ರವರಿ 15ರಂದು ರಾತ್ರಿ ರಫೀಕ್ ಅಹಮದ್, ಎಲ್ಲಿಂದಲೋ ಅಪರಿಚಿತ ಮಹಿಳೆಯನ್ನು ಕರೆತಂದು ಬಿ.ಎನ್.ರಸ್ತೆಯ ಸ್ನೇಹ ಮೆನ್ಸ್‌ವೇರ್ ಮುಂದೆ ಕುಳಿತು ಮಾತನಾಡುತ್ತಿದ್ದು, ನಂತರ ಅಲ್ಲಿಯೇ ಫುಟ್‌ಪಾತ್ ಮೇಲೆ ಆಕೆ ಜೊತೆ ಲೈಂಗಿಕ ಕ್ರಿಯೆ ನಡೆಸಿದ್ದ. ಈ ವೇಳೆ ನಿತ್ರಾಣಗೊಂಡಿದ್ದ ಆಕೆಯನ್ನು ತಾವಿಬ್ಬರು ಮಲಗಿದ್ದ ಗೋಣಿಚೀಲ ಸಮೇತ ಎತ್ತಿಕೊಂಡು ಹೋಗಿ ಎದುರುಗಡೆ ಇರುವ ನ್ಯೂ ಶ್ರೀ ಪದಮ್ ಬ್ಯಾಂಗಲ್ ಸ್ಟೋರ್ ಎದುರು ಮಲಗಿಸಿ ಮತ್ತೆ ಆಕೆ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ್ದಾನೆ.

ತದ ನಂತರ ಅಲ್ಲಿಗೆ ಬಂದ ಆರ್. ಮಂಜುನಾಥ್, ಮನು ಹಾಗೂ ಕೃಷ್ಣ ಸಹ ಆಕೆ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ್ದಾರೆ. ಇವರಿಗೆ ರೇವಣ್ಣ ಸಹಕಾರ ನೀಡಿದ್ದಾನೆ. ಮೊದಲೇ ನಿತ್ರಾಣಳಾಗಿದ್ದ ಮಹಿಳೆ ಐವರೂ ನಡೆಸಿದ ಅತ್ಯಾಚಾರದಿಂದಾಗಿ ಉಸಿರುಗಟ್ಟಿ ಸಾವನ್ನಪ್ಪಿದ್ದಾಳೆ.

▸ 6ನೇ ಪುಟಕ್ಕೆ

ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಮುಡಾ ಪ್ರಕರಣ

ಅಂತಿಮ ವರದಿ ಸಲ್ಲಿಕೆಗೆ ಆರು ತಿಂಗಳ ಕಾಲಾವಕಾಶ ಕೇಳಿದ ಲೋಕಾಯುಕ್ತ ಎಸ್ಪಿ

ಮೈಸೂರು, ಮೇ29(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಮುಡಾ ಪ್ರಕರಣದಲ್ಲಿ ಅಂತಿಮ ವರದಿ ಸಲ್ಲಿಸಲು ಇನ್ನು ಆರು ತಿಂಗಳು ಕಾಲಾವಕಾಶ ನೀಡಬೇಕೆಂದು ಮೈಸೂರು ಲೋಕಾಯುಕ್ತರು ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಇಂದು ಮನವಿ ಮಾಡಿದರು.

ನ್ಯಾಯಾಧೀಶರಾದ ಸಂತೋಷ್ ಗಜಾನನ ಭಟ್ ಅವರು ಇಂದು ಮುಡಾ ಪ್ರಕರಣ ಸಂಬಂಧ ವಿಚಾರಣೆ ನಡೆಸಿದರು. ವಿಚಾರಣೆ ಆರಂಭವಾಗುತ್ತಿದ್ದಂತೆ ಲೋಕಾಯುಕ್ತ ಪರ ವಕೀಲ ವೆಂಕಟೇಶ್ ಅರಬಟ್ಟಿ, ಈ ಪ್ರಕರಣ ಸಂಬಂಧ ಮೂವರು ಅಧಿಕಾರಿಗಳನ್ನು ವಿಚಾರಣೆ ಮಾಡಲು ಸರ್ಕಾರದ ಅನುಮತಿ ಅತ್ಯಗತ್ಯ. ಆದರೆ ವಿಚಾರಣೆ ನಡೆಸಲು ಸರ್ಕಾರದಿಂದ ಇನ್ನು ಅನುಮತಿ ದೊರೆತಿಲ್ಲ. ಈ ಹಿನ್ನೆಲೆಯಲ್ಲಿ ಅಂತಿಮ ವರದಿ ಸಲ್ಲಿಕೆಗೆ ಇನ್ನು ಆರು ತಿಂಗಳು ಕಾಲಾವಕಾಶ

▸ 6ನೇ ಪುಟಕ್ಕೆ

ಎಂಎಲ್ಸಿ ಬಿ.ಕೆ.ಹರಿಪ್ರಸಾದ್ ನಿವಾಸಕ್ಕೆ ಸಿಎಂ ಸಿದ್ದರಾಮಯ್ಯ ದಿಢೀರ್ ಭೇಟಿ

ಕೆಲ ಹೊತ್ತು ಮಹತ್ವದ ಚರ್ಚೆ; ಮಂಗಳೂರಲ್ಲಿ ಸಾಲು ಸಾಲು ಹತ್ಯೆ ವಿಚಾರ ಪ್ರಸ್ತಾಪ

ಬೆಂಗಳೂರು, ಮೇ 29– ತಮ್ಮ ವಿರುದ್ಧ ಆಕ್ರೋಶಭರಿತ ಹೇಳಿಕೆಗಳನ್ನು ನೀಡುತ್ತಿದ್ದ ಕಾಂಗ್ರೆಸ್ ಹಿರಿಯ ಮುಖಂಡ ಹಾಗೂ ವಿಧಾನಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ದಿಢೀರ್ ಭೇಟಿ ಮಾಡಿರುವುದು ತೀವ್ರ ಕುತೂಹಲಕ್ಕೆ ಕಾರಣವಾಗಿದೆ.

ಗುರುವಾರ ಸದಾಶಿವನಗರದಲಿರುವ ಬಿ.ಕೆ.ಹರಿಪ್ರಸಾದ್ ನಿವಾಸಕ್ಕೆ ಭೇಟಿ ಕೊಟ್ಟ ಮುಖ್ಯಮಂತ್ರಿಗಳು, ಕೆಲ ಹೊತ್ತು ಮಹತ್ವದ ಚರ್ಚೆ ನಡೆಸಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸರಣಿ ಕೊಲೆಗಳು ನಡೆಯುತ್ತಿರುವ ಹಿನ್ನೆಲೆಯಲ್ಲಿ ಬಿ.ಕೆ ಹರಿಪ್ರಸಾದ್ ಅವರನ್ನು ಸಿದ್ದರಾಮಯ್ಯ ಭೇಟಿ ಮಾಡಿದ್ದಲ್ಲದೇ, ದಕ್ಷಿಣ ಕನ್ನಡ ಜಿಲ್ಲೆಗೆ ಭೇಟಿ ನೀಡಿ ಪರಿಶೀಲನೆ ನಡೆಸುವಂತೆ ಜವಾಬ್ದಾರಿ ನೀಡಿದ್ದಾರೆ.

ಭೇಟಿ ಬಳಿಕ ಮಾತನಾಡಿದ ಸಿದ್ದರಾಮಯ್ಯ, ಹರಿಪ್ರಸಾದ್ ಅವರು ಬ್ರೇಕ್‌ಫಾಸ್ಟ್‌ಗೆ ಕರೆದಿದ್ದರು. ಹಾಗಾಗಿ ಬರುತ್ತೇನೆ ಎಂದಿದ್ದೆ. ಅದರಂತೆ ಇಲ್ಲಿಗೆ ಬಂದಿದ್ದೆ. ರಾಜಕೀಯ ಚರ್ಚೆ ಸೇರಿ ಮಂಗಳೂರಿನ ವಿಚಾರ ಚರ್ಚೆ ಮಾಡಿದ್ದೇವೆ ಎಂದು ತಿಳಿಸಿದರು.

ಭೇಟಿ ಸಂದರ್ಭದಲ್ಲಿ ರಾಜಕೀಯ ಚರ್ಚೆ ಅಂತ ಮಾಡಿಲ್ಲ. ಬದಲಾಗಿ ಕೆಲವೊಂದು ವಿಚಾರಗಳ ಬಗ್ಗೆ ಚರ್ಚೆ ಮಾಡಿದ್ದೇವೆ. ಅದರಲ್ಲಿ ಮಂಗಳೂರು ವಿಚಾರ ಚರ್ಚೆಯಾಗಿದೆ. ಅಲ್ಲಿ ಸೌಹಾರ್ದತೆ ಸೃಷ್ಟಿ ಆಗಬೇಕು. ಹಿಂದುಗಳು, ಮುಸ್ಲಿಮರ ನಡುವೆ ಯಾವುದೇ ದ್ವೇಷ ಇರಬಾರದು. ಈ ನಿಟ್ಟಿನಲ್ಲಿ ಮಾತುಕತೆ ನಡೆಸಿದ್ದೇವೆ ಎಂದರು. ಬಿಕೆ ಹರಿಪ್ರಸಾದ್ ಅವರನ್ನು ಮಂಗಳೂರಿಗೆ ಹೋಗಿ ಅಲ್ಲಿನ ಪರಿಸ್ಥಿತಿ ಬಗ್ಗೆ ಅವಲೋಕಿಸಿ ಬನ್ನಿ ಎಂದಿದ್ದೇನೆ ಎಂದರು.

ಈ ಭೇಟಿ ಬಗ್ಗೆ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಮುಖ್ಯಮಂತ್ರಿಗಳು, 'ಬಿ.ಕೆ. ಹರಿಪ್ರಸಾದ್ ಕರಾವಳಿ ಜಿಲ್ಲೆಯವರು, ಅಲ್ಲಿನ ರಾಜಕೀಯ ಮತ್ತು ಸಾಮಾಜಿಕ ಸೂಕ್ಷ್ಮತೆಗಳನ್ನು ಅರಿತವರು. ಕಳೆದ ಕೆಲವು ದಿನಗಳಿಂದ ಕರಾವಳಿ ಜಿಲ್ಲೆಗಳಲ್ಲಿ ಕೋಮು ವೈಷಮ್ಯ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಇಂದು ಅವರ ಜೊತೆ ಉಪಾಹಾರ ಸೇವಿಸುತ್ತಾ, ಕೆಲವು ಸಾಮಾನ್ಯ ವಿಷಯಗಳ ಜೊತೆಗೆ ಕರಾವಳಿ ಜಿಲ್ಲೆಗಳಲ್ಲಿ ದ್ವೇಷ ತೊಡೆದುಹಾಕಿ

▸ 6ನೇ ಪುಟಕ್ಕೆ



ಮುಖ್ಯಮಂತ್ರಿ ಸಿದ್ದರಾಮಯ್ಯ–ಕಾಂಗ್ರೆಸ್ ಹಿರಿಯ ನಾಯಕ ಬಿ.ಕೆ. ಹರಿಪ್ರಸಾದ್ ಚರ್ಚೆ ನಡೆಸಿದರು.

ಕಮಲಹಾಸನ್ ಹೇಳಿಕೆ ಖಂಡಿಸಿ ಮೈಸೂರಲ್ಲಿ
ಕರ್ನಾಟಕ ಹಿತರಕ್ಷಣಾ ವೇದಿಕೆ ಪ್ರತಿಭಟನೆ



ನಟ ಕಮಲ ಹಾಸನ್ ವಿರುದ್ಧ ಕರ್ನಾಟಕ ಹಿತರಕ್ಷಣಾ ವೇದಿಕೆ ಕಾರ್ಯಕರ್ತರು ಮೈಸೂರಿನ ದೇವರಾಜ ಅರಸು ರಸ್ತೆಯಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು.

ಮೈಸೂರು, ಮೇ 29– ಕನ್ನಡ, ತಮಿಳಿನಿಂದ ಹುಟ್ಟಿರುವ ಭಾಷೆ ಎಂದು ವಿವಾದಾತ್ಮಕ ಹೇಳಿಕೆ ನೀಡಿರುವ ಚಿತ್ರ ನಟ ಕಮಲಹಾಸನ್ ವಿರುದ್ಧ ಕರ್ನಾಟಕ ಹಿತರಕ್ಷಣಾ ವೇದಿಕೆ ಕಾರ್ಯಕರ್ತರು ದೇವರಾಜ ಅರಸು ರಸ್ತೆಯಲ್ಲಿ ಅವರ ಭಾವಚಿತ್ರಕ್ಕೆ ಮಸಿ ಬಳಿದು, ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಕಮಲಹಾಸನ್ ಅವರು ಈ ಕೂಡಲೇ ಕ್ಷಮೆಯಾಚಿಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಕರ್ನಾಟಕ ಹಿತರಕ್ಷಣಾ ವೇದಿಕೆ ಅಧ್ಯಕ್ಷ ವಿನಯ್ ಕುಮಾರ್ ಮಾತನಾಡಿ, ಕಮಲಹಾಸನ್ ಅನೇಕ ಕನ್ನಡ ಚಿತ್ರಗಳಲ್ಲೂ ನಟಿಸಿದ್ದಾರೆ. ಆದರೆ, ಅವರ ಹೇಳಿಕೆ ಕನ್ನಡಿಗರ ಅವಮಾನಿಸಿದಂತೆ. ಅಲ್ಲದೇ, ಕನ್ನಡಿಗರು ಹಾಗೂ ತಮಿಳರ ನಡುವೆ ದ್ವೇಷ ಹುಟ್ಟುವಂತೆ ಮಾಡಿದ್ದಾರೆ. ಕನ್ನಡ ಭಾಷೆಯ ಬಗ್ಗೆ ಹಗುರವಾಗಿ ಮಾತನಾಡಿದ್ದು ಸರಿಯಲ್ಲ ಎಂದು ಹೇಳಿದರು.

ಕೋಟ್ಯಾಂತರ ಕರುನಾಡಿಗರ ಜೀವನಾಡಿಯಾಗಿರುವ ಹೆಮ್ಮೆಯ ಕನ್ನಡ ಭಾಷೆಗೆ ಕಮಲ್‌ಹಾಸನ್ ಅವಮಾನಿಸಿದ್ದಾರೆ. ಶೀಘ್ರವೇ ಕನ್ನಡಿಗರ ಕ್ಷಮೆ ಕೇಳಬೇಕು. ಇಲ್ಲವಾದರೆ ಅವರ ಚಿತ್ರಗಳ ಪ್ರದರ್ಶನಕ್ಕೆ ಅವಕಾಶ ಕೊಡುವುದಿಲ್ಲ ಎಂದು ಎಚ್ಚರಿಸಿದರು. ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ಮುಡಾ ಮಾಜಿ ಸದಸ್ಯ ನವೀನ್ ಕುಮಾರ್, ಮಂಜುನಾಥ್, ರವಿಕುಮಾರ್, ಸಂಗಮ್, ಉಮೇಶ್, ರವಿಚಂದ್ರ ಪ್ರಶಾಂತ್, ನಿತಿನ್, ಹರೀಶ್‌ಗೌಡ, ರವಿ, ಶ್ರೀನಿವಾಸ್, ಕಣ್ಣಣ್ಣ ಶ್ರೀನಿವಾಸ್‌ಶೆಟ್ಟಿ, ಕುಮಾರ್, ಬಾಬು, ಚಂದ್ರು, ಆನಂದ, ಗುರುರಾಜ್‌ಶೆಟ್ಟಿ, ಪ್ರಮೋದ್‌ಗೌಡ ಈ ವೇಳೆ ಇದ್ದರು.

ಕಮಲಹಾಸನ್ ಹೇಳಿಕೆಗೆ ಜಯ ಕರ್ನಾಟಕ ಸಂಘಟನೆ ಖಂಡನೆ
ಗೂಗಲ್‌ನಲ್ಲಿ ಓದಿ ವಿವಾದಾತ್ಮಕ ಹೇಳಿಕೆ ನೀಡಿರುವುದು ಸರಿಯಲ್ಲ

ಮೈಸೂರು, ಮೇ29(ಜಿಎ)–ನಟ ಕಮಲಹಾಸನ್ ಪ್ರತಿಭಾವಂತ ನಟರಾದರೂ ಚೆನ್ನೈನಲ್ಲಿ ನಡೆದ ಕಾರ್ಯಕ್ರಮವೊಂದರ ವೇಳೆ ಕನ್ನಡವು ತಮಿಳು ಭಾಷೆಯಿಂದ ಬಂದಿದೆ ಎಂದು ನೀಡಿರುವ ವಿವಾದಾತ್ಮಕ ಹೇಳಿಕೆಯನ್ನು ಜಯ ಕರ್ನಾಟಕ ಸಂಘಟನೆಯ ಜಿಲ್ಲಾಧ್ಯಕ್ಷ ಲಾರಿ ಶ್ರೀನಿವಾಸ್ ಖಂಡಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕನ್ನಡ ಭಾಷೆಗೆ ಸುಮಾರು 2,500 ಸಾವಿರ ವರ್ಷಗಳ ಇತಿಹಾಸವಿದೆ. ಸಂಸ್ಕೃತದ ಪ್ರಭಾವವಿದೆ. ಇತಿಹಾಸದ ಪುಟಗಳಲ್ಲಿ ಸಾಕಷ್ಟು ರಾಜ ಮಹಾರಾಜರ ಸಂಸ್ಥಾನದ ವೈಭವದಲ್ಲಿ ಜನಪ್ರಿಯತೆ ಗಳಿಸಿದೆ. ಇದನ್ನು ಅರಿಯದೇ ಕೇವಲ ನಾಲ್ಕಾರು ತಮಿಳು ಪದಗಳು ಹೊಂದಾಣಿಕೆ ಆಗಿರುವುದನ್ನೇ ಗಮನದಲ್ಲಿರಿಸಿಕೊಂಡು ಗೂಗಲ್‌ನಲ್ಲಿ ಓದಿ ನಟ ವಿವಾದಾತ್ಮಕ ಹೇಳಿಕೆ ನೀಡಿರುವುದು ಸರಿಯಲ್ಲ ಎಂದರು.

ಕನ್ನಡಕ್ಕೆ ಜ್ಞಾನಪೀಠ ಪ್ರಶಸ್ತಿಗಳೂ ಬಂದಿವೆ. ಕರ್ನಾಟಕ ಮ್ಯೂಸಿಕ್ ಎಂದು ಕರೆಯಲ್ಪಡುವ ನಮ್ಮ ಸಂಗೀತಕ್ಕೆ ಮಹಾನ್ ದಾಸರು, ವ್ಯಾಸತೀರ್ಥರು ಕೂಡ ಕೊಡುಗೆ ನೀಡಿದ್ದಾರೆ. ಶಾಸ್ತ್ರೀಯ ಸ್ಥಾನಮಾನವಿದೆ. ಇಂತಹ ಕನ್ನಡದ ವೈಭೋಗ ಅರಿಯದ ಕಮಲಹಾಸನ್ ಮೊದಲು ಕನ್ನಡದ ಇತಿಹಾಸ ತಿಳಿಯಲಿ ಎಂದು ಆಗ್ರಹಿಸಿದರು.

ಬಿಡುಗಡೆಗೆ ಸಿದ್ಧಗೊಂಡಿರುವ 'ಥಗ್ ಲೈಫ್' ಸಿನಿಮಾಕ್ಕೆ ಯಾವುದೇ ಕಾರಣಕ್ಕೂ ರಾಜ್ಯದ ಚಿತ್ರಮಂದಿರಗಳಲ್ಲಿ ಪ್ರದರ್ಶನಕ್ಕೆ ಅವಕಾಶ ಕೊಡಬಾರದು. ರಾಜ್ಯ ಸರ್ಕಾರ ಸಹಾ ಕನ್ನಡದ ಅವಹೇಳನ ಮಾಡುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ವಿಜಯಾ ಗೌಡ, ಹರ್ಷ ಗೌಡ, ಸಂಜಯ್ ಸಿಂಗ್, ರಾಧಾ ಶಿವರಾಜ್ ಉಪಸ್ಥಿತರಿದ್ದರು.

ಆರ್.ಮಂಜುನಾಥ ಪ್ರಭಾರ ಉಪವಿಭಾಗಾಧಿಕಾರಿ



ಮೈಸೂರು, ಮೇ 29(ಆರ್‌ಕೆ)– ಮೈಸೂರು ಉಪವಿಭಾಗದ ಉಪವಿಭಾಗಾಧಿಕಾರಿಯನ್ನಾಗಿ ಕಬಿನಿ ಯೋಜನೆಯ ವಿಶೇಷ ಭೂಸ್ವಾಧೀನಕಾರಿ ಆರ್.ಮಂಜುನಾಥ್ ಅವರನ್ನು ನಿಯೋಜಿಸಲಾಗಿದೆ. ಈ ಹಿಂದೆ ಉಪವಿಭಾಗಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಕೆ.ಆರ್.ರಕ್ಷಿತ್ ಅವರು ಎಂಡಿಎ ಪ್ರಭಾರ ಆಯುಕ್ತರಾಗಿ ವರ್ಗಾವಣೆಗೊಂಡಿದ್ದರಿಂದ ತೆರವಾದ ಸ್ಥಾನಕ್ಕೆ ಮುಂದಿನ ಸರ್ಕಾರದ ಆದೇಶದವರೆಗೆ ಮಂಜುನಾಥ ಅವರಿಗೆ ಹೆಚ್ಚುವರಿ ಜವಾಬ್ದಾರಿ ವಹಿಸಿ, ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತರೆಡ್ಡಿ ಅವರು ಆದೇಶ ಹೊರಡಿಸಿದ್ದಾರೆ.

ನಿಧನ

ಅಲ್‌ಹಾಜ್ ಮನ್ಸೂರ್ ಮಜೀದ್ ಸೇಠ್ ಕುಶಾಲಿ



ಮೈಸೂರು, ಮೇ 29–ಮೈಸೂರಿನ ಶಿವರಾಂಪೇಟೆಯ ಮಸೀದಿ ಹಾಲಿ ಮೆಮೂನ್ ಜಮಾತ್ ವ್ಯವಸ್ಥಾಪಕ ಸಮಿತಿ ಅಧ್ಯಕ್ಷರು ಹಾಗೂ ಬನ್ನಿಮಂಟಪ ಸಿ ಲೇಔಟ್ ನಿವಾಸಿ ಅಲ್‌ಹಾಜ್ ಮನ್ಸೂರ್ ಮಜೀದ್ ಸೇಠ್ ಕುಶಾಲಿ (70) ಬುಧವಾರ (ಮೇ 28) ರಾತ್ರಿ 8.45ರ ವೇಳೆಗೆ ಶಿವರಾಂಪೇಟೆಯ ಮಸೀದಿ ಹಾಲಿ ಮೆಮೂನ್ ಜಮಾತ್‌ನಲ್ಲಿ ಇಶಾ ಪ್ರಾರ್ಥನೆ ವೇಳೆ ಹೃದಯಾಘಾತದಿಂದ ನಿಧನರಾದರು.

ಮೃತರು ಪತ್ನಿ, ಇಬ್ಬರು ಪುತ್ರರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುವರ್ಗ ಅಗಲಿದ್ದಾರೆ. ಗುರುವಾರ ಸಂಜೆ 5.15 ಗಂಟೆಗೆ ಅಸರ್ ಪ್ರಾರ್ಥನೆ ನಂತರ ಅಶೋಕ ರಸ್ತೆಯಲ್ಲಿರುವ ಮಸೀದಿ ಆಜ್ಞಮ್ ಅಹಲೆ ಸುನ್ನತ್–ವಲ್–ಜಮಾತ್‌ನಲ್ಲಿ ನಮಾಜ್–ಎ–ಜನಾಜ ನಡೆದು, ನಂತರ ಮೈಸೂರಿನ ಟಿಪ್ಪು ಸರ್ಕಲ್ ಬಳಿಯಿರುವ ಮುಸ್ಲಿಮರ ರುದ್ರಭೂಮಿ ಗೇಟ್ ನಂ.2ರಲ್ಲಿ ಮೃತರ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶತಾಯುಷಿ ಬಿ.ಎಲ್.ರಾಮಣ್ಣ



ಮೈಸೂರಿನ ಹಳ್ಳದಕೇರಿ ನಿವಾಸಿ ಹಾಗೂ ಪ್ರಭಾ ಟಾಕೀಸ್‌ನ ಮಾಜಿ ವ್ಯವಸ್ಥಾಪಕ ಶತಾಯುಷಿ ಬಿ.ಎಲ್.ರಾಮಣ್ಣ (100) ಗುರುವಾರ ರಾಮಕೃಷ್ಣನಗರದ ಇ ಅಂಡ್ ಎಫ್ ಬ್ಲಾಕ್‌ನಲ್ಲಿರುವ ತಮ್ಮ ಪುತ್ರನ ನಿವಾಸದಲ್ಲಿ ನಿಧನರಾದರು. ಮೃತರು ಪತ್ನಿ ಕಮಲಮ್ಮ, ಓರ್ವ ಪುತ್ರಿ, ನಾಲ್ವರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬದರಿನಾಥ್ ಬದರಿ



ಮೈಸೂರಿನ ರಾಮಕೃಷ್ಣನಗರದ ಐ ಬ್ಲಾಕ್ ನಿವಾಸಿಯಾಗಿದ್ದ ಬದರಿನಾಥ್ ಬದರಿ (73) ಅವರು ಬುಧವಾರ ನಿಧನರಾದರು. ಮೃತರು ಪತ್ನಿ ಮಂಜುಳಾಬಾಯಿ, ಮೂವರು ಮಕ್ಕಳಾದ ರೇಖಾ, ವಾದಿರಾಜ್, ಶ್ರೀಪಾದರಾಜ್ ಸೇರಿದಂತೆ ಅಪಾರ ಬಂಧುಬಳಗವನ್ನು ಅಗಲಿದ್ದಾರೆ. ಮೃತರು, ಮೈಸೂರು ಬ್ರಾಹ್ಮಣ ಯುವ ವೇದಿಕೆ ಅಧ್ಯಕ್ಷ ಶ್ರೀಧರಮೂರ್ತಿ ಅವರ ಭಾವ. ಬದರಿನಾಥ್ ಅವರು ಪೌರೋಹಿತ್ಯ, ಅಡುಗೆ ಕ್ಷೇತ್ರದಲ್ಲಿ ಐದು ದಶಕಗಳಿಗೂ ಅಧಿಕ ಕಾಲ ಸೇವೆ ಸಲ್ಲಿಸಿ ಸಾಕಷ್ಟು ಮಂದಿಗೆ ಪ್ರೇರಣೆಯಾಗಿದ್ದರು. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ಸತ್ಯಹರಿಶ್ಚಂದ್ರ ಘಾಟ್‌ನಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಂ.ಕೆ.ಶಿವಶಂಕರ್



ಮೈಸೂರು: ನಗರದ ರಾಮಾನುಜ ರಸ್ತೆಯ ನಿವಾಸಿ ಎಂ.ಕೆ. ಶಿವಶಂಕರ್ (42) ಅವರು ಅನಾರೋಗ್ಯ ಕಾರಣದಿಂದ ತಮ್ಮ ನಿವಾಸದಲ್ಲಿ ಬುಧವಾರ ರಾತ್ರಿ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರಿ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಗುರುವಾರ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಂಟುಬದ ಮೂಲಗಳು ತಿಳಿಸಿವೆ.

ಊಟ–ತಿಂಡಿ ಮಾಡುವಾಗ ಮೊಬೈಲ್ ಬಳಸದ ಗ್ರಾಹಕರಿಗೆ ಶೇ.5 ರಿಯಾಯಿತಿ ನೀಡಿ!

ಹೋಟೆಲ್ ಮಾಲೀಕರಿಗೆ ಕೇಂದ್ರೀಯ ವಿಶ್ವವಿದ್ಯಾನಿಲಯದ ಶೈಕ್ಷಣಿಕ ಡೀನ್ ಪ್ರೊ.ಅಂಗಡಿ ಸಲಹೆ

- ಮೊಬೈಲ್ ಇಲ್ಲದೆ ಮಕ್ಕಳು ಊಟವನ್ನೇ ಮಾಡಲ್ಲ
- ಆರೋಗ್ಯದ ಮೇಲೆ ಮೊಬೈಲ್ ದುಷ್ಪರಿಣಾಮ ಬೀರುತ್ತಿದೆ
- ಮೊಬೈಲ್‌ನಿಂದ ಎಷ್ಟು ಉಪಯೋಗವೋ ಅಷ್ಟೆ ಸಮಸ್ಯೆ ಇದೆ
- ಮೊಬೈಲ್‌ನಿಂದ ಅಗತ್ಯ ಮಾಹಿತಿ ಮಾತ್ರ ಪಡೆಯಬೇಕು

ಮೈಸೂರು, ಮೇ29(ಬಿಎಲ್‌ಯು)– ಹೋಟೆಲ್‌ಗಳಲ್ಲಿ ಊಟ, ತಿಂಡಿ ಮಾಡುವಾಗ ಮೊಬೈಲ್ ಬಳಸದ ಗ್ರಾಹಕರಿಗೆ ಬಿಲ್‌ನಲ್ಲಿ ಶೇಕಡ 5ರಷ್ಟು ರಿಯಾಯಿತಿ ನೀಡುವ ದಿಟ್ಟ ಕ್ರಮವನ್ನು ಎಲ್ಲಾ ಹೋಟೆಲ್‌ನವರು ಅನುಸರಿಸಬೇಕು. ಇದರಿಂದಲಾದರೂ ಜನರನ್ನು ಮೊಬೈಲ್ ವ್ಯಸನದಿಂದ ದೂರ ಮಾಡಬಹುದಾಗಿದೆ ಎಂದು ಕಲ್ಬುರ್ಗಿಯ ಕೇಂದ್ರೀಯ ವಿಶ್ವವಿದ್ಯಾನಿಲಯದ ಶೈಕ್ಷಣಿಕ ವಿಭಾಗದ ಮುಖ್ಯಸ್ಥ ಪ್ರೊ.ಜಿ.ಆರ್.ಅಂಗಡಿ ಅಭಿಪ್ರಾಯಪಟ್ಟರು.

ಮೈಸೂರಿನ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಇಂದು ಡಿಜಿಟಲ್ ಯುಗದಲ್ಲಿ ಮಕ್ಕಳು ಮತ್ತು ಯುವಕರ ಜೀವನ ಕೌಶಲ ಹಾಗೂ ಯೋಗಕ್ಷೇಮ ಕುರಿತು ಆಯೋಜಿಸಿದ್ದ ಸಮ್ಮೇಳನದಲ್ಲಿ ಮಾತನಾಡಿದ ಅವರು, ಹೋಟೆಲ್‌ಗಳಲ್ಲಿ ಊಟ ತಿಂಡಿ ಮಾಡುವಾಗ ಕೂಡ ಬಹಳಷ್ಟು ಜನರು ಮೊಬೈಲ್‌ನಲ್ಲಿ ತಲ್ಲೀನರಾಗಿರುತ್ತಾರೆ. ತಾವು ಊಟ ತಿಂಡಿ ಸೇವಿಸುತ್ತಿರುವ ಪರಿಜ್ಞಾನವೇ ಅವರಿಗಿರುವುದಿಲ್ಲ. ಕೆಲವೊಮ್ಮೆ ಊಟ–ತಿಂಡಿ ಮಾಡಿದ್ದೇವೆಯೇ ಎಂಬ ಕುತೂಹಲದ ಪ್ರಶ್ನೆ ಅವರಿಗೇ ಎದುರಾಗುತ್ತದೆ ಎಂದರು.

ಈ ಹಿನ್ನೆಲೆಯಲ್ಲಿ ಊಟ–ತಿಂಡಿ ಸಮಯದಲ್ಲಿ ಮೊಬೈಲ್ ಬಳಸದ ಗ್ರಾಹಕರಿಗೆ ಕೆಲವು ನಗರಗಳ ಹೋಟೆಲ್‌ಗಳಲ್ಲಿ ಬಿಲ್‌ನಲ್ಲಿ ಶೇಕಡ 5 ರಷ್ಟು ರಿಯಾಯಿತಿ ನೀಡಲಾಗುತ್ತದೆ. ಇದು ಆರೋಗ್ಯಕರ ಬೆಳವಣಿಗೆಯಾಗಿದ್ದು, ಪ್ರತಿಯೊಂದು ನಗರದಲ್ಲಿ ಇದನ್ನು ಅನುಸರಿಸಿದರೆ ಮೊಬೈಲ್‌ನಿಂದ ಜನರನ್ನು ಸ್ವಲ್ಪ ಮಟ್ಟಿಗೆ ದೂರ ಮಾಡಬಹುದು ಎಂದು ಪ್ರೊ.ಅಂಗಡಿ ಅಭಿಪ್ರಾಯಪಟ್ಟರು.

ಮೊಬೈಲ್ ನಮ್ಮ ಮನಸು ಹಾಗೂ ಆರೋಗ್ಯವನ್ನು ಹಾಳು ಮಾಡುತ್ತಿದ್ದು, ಮೊಬೈಲ್ ಇಲ್ಲದೆ ಮಕ್ಕಳು ಕೂಡ ಊಟ ಮಾಡದ ಪರಿಸ್ಥಿತಿ ನಿರ್ಮಾಣವಾಗಿದೆ. ಸಾಕಷ್ಟು ಜನರು ಮೊಬೈಲ್‌ನಲ್ಲೇ ಹೆಚ್ಚಿನ ಸಮಯ ಕಳೆಯುತ್ತಾರೆ ಎಂದು ಆತಂಕ ವ್ಯಕ್ತಪಡಿಸಿದರು.

ಆರೋಗ್ಯದ ದೃಷ್ಟಿಯಿಂದ ಮೊಬೈಲ್ ಬಳಕೆ ಒಳ್ಳೆಯದಲ್ಲ. ಅತಿಯಾದ ಮೊಬೈಲ್ ಬಳಕೆ ಮಾನಸಿಕ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ. ಈ ಬಗ್ಗೆ ಪರಿಣಾಮಕಾರಿ ಜಾಗೃತಿ ಮೂಡಿಸಬೇಕು. ಮಕ್ಕಳು ಅತಿಯಾಗಿ ಮೊಬೈಲ್ ಬಳಸುವುದರಿಂದ ಏನೇನು ದುಷ್ಪರಿಣಾಮ ಬೀರುತ್ತದೆ ಎಂದು ಪೋಷಕರು ಅರಿತುಕೊಳ್ಳಬೇಕು. ಈ ಮೂಲಕ ಆ ವ್ಯಸನದಿಂದ ಮಕ್ಕಳನ್ನು ಮುಕ್ತ ಮಾಡಬೇಕು ಎಂದು ಸಲಹೆ ನೀಡಿದರು.

ನಾವು ಡಿಜಿಟಲ್ ಯುಗದಲ್ಲಿ ಬದುಕುತ್ತಿದ್ದು, ಪ್ರತಿಯೊಬ್ಬರ ದಿನಚರಿ ಮೊಬೈಲ್ ಮೂಲಕವೇ ಆರಂಭವಾಗಿ ಅದರಿಂದಲೇ ಅಂತ್ಯಗೊಳ್ಳುತ್ತಿದೆ. ಇದರಿಂದ ಮೊಬೈಲ್ ದೂರ ಮಾಡಿ ಬದುಕುವುದು ಕಷ್ಟದ ಸಂಗತಿಯಾಗಿದೆ. ಪ್ರತಿಯೊಬ್ಬರ ಜೀವನದಲ್ಲಿ ಹಾಸುಹೊಕ್ಕಾಗಿದೆ. ಇದರಿಂದ ಎಷ್ಟು ಉಪಯೋಗವಾಗುತ್ತಿದೆಯೊ ಅಷ್ಟೆ ಸಮಸ್ಯೆಗಳು ಬಾಧಿಸುತ್ತಿವೆ. ಈ ಹಿನ್ನೆಲೆಯಲ್ಲಿ ಪ್ರತಿಯೊಬ್ಬರು ಕೌಶಲವನ್ನು ಮೈಗೂಡಿಸಿಕೊಳ್ಳುವ ಮೂಲಕ ಸಮಸ್ಯೆಗಳನ್ನು ಪರಿಹಾರ ಮಾಡಬೇಕು ಎಂದು ಸಲಹೆ ನೀಡಿದರು.

ಡಿಜಿಟಲ್ ಕ್ರಾಂತಿಯ ಪರಿಣಾಮ ಮೊಬೈಲ್ ಬಳಕೆಯಿಂದ ವಿಶ್ವದ ಯಾವುದೇ ವಿಚಾರಗಳನ್ನು ಕೇವಲ ಬೆರಳ ತುದಿಯಿಂದ ತಿಳಿಯಬಹುದು. ಕೆಲವೇ ಕ್ಷಣದಲ್ಲಿ ಜಗತ್ತಿನ ವಿಚಾರಗಳನ್ನು ಅರಿತುಕೊಳ್ಳಬಹುದು. ಆದರೆ ಯಾವ ರೀತಿಯ ಮಾಹಿತಿ ನಮಗೆ ಅಗತ್ಯ ಎಂಬುದನ್ನು ಮೊದಲು ಅರಿತುಕೊಳ್ಳಬೇಕು. ಈ ಮೂಲಕ ಡಿಜಿಟಲ್ ಕ್ರಾಂತಿಯ ಸದುಪಯೋಗ ಮಾಡಿಕೊಂಡು ಜಗತ್ತಿನ ಪೈಪೋಟಿಯಲ್ಲಿ ವೇಗವಾಗಿ ಸಾಗಬೇಕು ಎಂದು ಕಿವಿಮಾತು ಹೇಳಿದರು.

ಪ್ರತಿಯೊಬ್ಬರಿಗೂ ಒಂದಲ್ಲ ಒಂದು ಕೌಶಲ ಇದ್ದೆ ಇರುತ್ತದೆ. ಪ್ರಮುಖವಾಗಿ ವಿದ್ಯಾರ್ಥಿಗಳು ತಮಗಿರುವ ಕೌಶಲವನ್ನು ತಮ್ಮ ಉತ್ತಮ ಭವಿಷ್ಯಕ್ಕಾಗಿ ಬಳಕೆ ಮಾಡಿಕೊಳ್ಳಬೇಕು. ಇದರಿಂದ ಮುಂದಿನ ಗುರಿ ಮುಟ್ಟಬಹುದು ಎಂದು ತಿಳಿಸಿದರು.

ಇದೇ ವೇಳೆ ಮಾತನಾಡಿದ ಮುಕ್ತ ವಿಶ್ವವಿದ್ಯಾನಿಲಯದ ಶೈಕ್ಷಣಿಕ ಡೀನ್ ಪ್ರೊ.ಎನ್.ಲಕ್ಷ್ಮಿ, ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಸೃಜನಶೀಲ ಚಿಂತನೆ, ಉತ್ತಮ ಸಂಹವನ, ತಾರ್ಕಿಕ ಚಿಂತನೆ, ಕೌಶಲ ಮೈಗೂಡಿಸಿಕೊಳ್ಳುವ ಬಹಳಷ್ಟು ಅಂಶಗಳಿಗೆ ಒತ್ತು ನೀಡಿದ್ದು, ಇದನ್ನು ಅನುಸರಿಸಬೇಕು ಎಂದು ಸಲಹೆ ನೀಡಿದರು.

ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ, ರಿಜಿಸ್ಟ್ರಾರ್ ಪ್ರೊ.ಎಸ್.ಕೆ.ನವೀನ್‌ಕುಮಾರ್, ಪರೀಕ್ಷಾಂಗ ವಿಭಾಗದ ಕುಲಸಚಿವ ಆನಂದ್‌ಕುಮಾರ್ ಹಾಗೂ ಅಧ್ಯಯನ ವಿಭಾಗದ ಡೀನ್ ಪ್ರೊ.ರಾಮನಾಥ್ ನಾಯ್ಡು ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಡಿಜಿಟಲ್ ಯುಗದಲ್ಲಿ ಮಕ್ಕಳು ಮತ್ತು ಯುವಕರ ಜೀವನ ಕೌಶಲ ಹಾಗೂ ಯೋಗಕ್ಷೇಮ ಕುರಿತು ಆಯೋಜಿಸಿದ್ದ ಸಮ್ಮೇಳನವನ್ನು ಕಲ್ಬುರ್ಗಿಯ ಕೇಂದ್ರೀಯ ವಿಶ್ವವಿದ್ಯಾನಿಲಯದ ಶೈಕ್ಷಣಿಕ ಡೀನ್ ಪ್ರೊ.ಜಿ.ಆರ್.ಅಂಗಡಿ ಉದ್ಘಾಟಿಸಿದರು.

'ದಿವ್ಯ ದರ್ಶನ' ವೀಕೆಂಡ್ ಟೂರ್ ಪ್ಯಾಕೇಜ್ ಆರಂಭ



ಎಂಟು ಪ್ರಸಿದ್ದ ದೇವಾಲಯಗಳ ವೀಕ್ಷಣೆಯ ಒನ್ ಡೇ ಟೆಂಪಲ್ ಟೂರ್ ಯೋಜನೆಗೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಚಾಲನೆ ನೀಡಿದರು.

ಪ್ರಸಿದ್ಧ ದೇವಾಲಯಗಳ ದರ್ಶನಕ್ಕೆ ಅವಕಾಶ

ಬೆಂಗಳೂರು, ಮೇ 29– ವರ್ಷದಲ್ಲಿ 50,000ಕ್ಕೂ ಹೆಚ್ಚು ಪ್ರಯಾಣಿಕರನ್ನು ಆಕರ್ಷಿಸಿದ 'ಬೆಂಗಳೂರು ದರ್ಶಿನಿ' ಮತ್ತು 'ಬೆಂಗಳೂರು ಇಶಾ ಫೌಂಡೇಶನ್' ಟೂರ್ಸ್ ಯಶಸ್ಸಿನೊಂದಿಗೆ ಬೆಂಗಳೂರು ಮಹಾನಗರ ಪಾಲಿಕೆ ಸಂಸ್ಥೆ ಮತ್ತೊಂದು ಟೂರ್ ಪ್ಯಾಕೇಜ್ 'ದಿವ್ಯ ದರ್ಶನ'ವನ್ನು ಆರಂಭಿಸಿದೆ.

ಎಂಟು ಪ್ರಸಿದ್ಧ ದೇವಾಲಯಗಳ ವೀಕ್ಷಣೆಯ ಒನ್ ಡೇ ಟೆಂಪಲ್ ಟೂರ್ ಯೋಜನೆಗೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಚಾಲನೆ ನೀಡಿದ್ದಾರೆ.

ನಗರದ ವ್ಯಾಪ್ತಿಯ ಎಂಟು ದೇವಸ್ಥಾನಗಳ ದರ್ಶನ ಪಡೆಯಲು ಸಾಧ್ಯವಾಗುವಂತ ಪ್ಯಾಕೇಜ್ ಮಾಡಿದ್ದೇವೆ. ಕನಿಷ್ಠ ದರದಲ್ಲಿ ಎಸಿ ಬಸ್‌ನಲ್ಲಿ ದೇವಸ್ಥಾನ ದರ್ಶನ ಪಡೆಯಲು ಇದರಿಂದ ಸಾಧ್ಯವಾಗಲಿದೆ. ಈ ಪ್ಯಾಕೇಜ್‌ನಲ್ಲಿ ಬೆಂಗಳೂರಿನ ಪ್ರಮುಖ 8 ದೇವಾಲಯಗಳ ದರ್ಶನ ಮಾಡಿಸಲಾಗುತ್ತದೆ. ಬೆಂಗಳೂರಿನ ಪ್ರಮುಖ ದೇವಾಲಯಗಳಿಗೆ ಒಂದೇ ದಿನದಲ್ಲಿ ಭೇಟಿಮಾಡಬೇಕು ಎಂದುಕೊಂಡವರಿಗೆ ಅನುಕೂಲವಾಗಲಿದೆ ಎಂದು ತಿಳಿಸಿದ್ದಾರೆ.

2011ನೇ ಸಾಲಿನ ಪ್ರೊಬೆಷನರಿ ಹುದ್ದೆಗಳ ಆಯ್ಕೆಯಲ್ಲಿ ಅವ್ಯವಹಾರ ಆರೋಪ
ಕೆಪಿಎಸ್‌ಸಿಯ ಅಂದಿನ ಅಧ್ಯಕ್ಷರು, ಎಂಟು ಸದಸ್ಯರ ವಿರುದ್ಧ ಕಾನೂನು ಕ್ರಮ ಕೈಬಿಡಲು ಸಂಪುಟ ನಿರ್ಧಾರ

ಮೈಸೂರು, ಮೇ 29– ಕಳೆದ ಗುರುವಾರ(ಮೇ 22) ನಡೆದ ಸಂಪುಟ ಸಭೆಯಲ್ಲಿ 2011ನೇ ಸಾಲಿನ ಗೆಜೆಟೆಡ್ ಪ್ರೊಬೆಷನರಿ ಹುದ್ದೆಗಳ ಆಯ್ಕೆ ಪ್ರಕ್ರಿಯೆಯಲ್ಲಿ ನಡೆದಿದೆ ಎನ್ನಲಾದ ಹಗರಣಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಲೋಕಸೇವಾ ಆಯೋಗ(ಕೆಪಿಎಸ್‌ಸಿ)ದ ಅಂದಿನ ಅಧ್ಯಕ್ಷರೂ ಹಾಗೂ ಎಂಟು ಸದಸ್ಯರ ವಿರುದ್ಧದ ವಿಚಾರಣೆಯ ಪ್ರಸ್ತಾಪವನ್ನು ಕೈಬಿಡಲು ತೀರ್ಮಾನಿಸಲಾಗಿದೆ.

ವಿವಿಧ ಪ್ರಕರಣಗಳಿಗೆ ಸಂಬಂಧಿಸಿದಂತೆ ಕೆಲವು ಅಧಿಕಾರಿಗಳ ವಿರುದ್ಧವೂ ವಿಚಾರಣೆ, ಮತ್ತೆ ಕೆಲವು ಅಧಿಕಾರಿಗಳ ವಿರುದ್ಧದ ಆರೋಪ ಸಾಬೀತಾಗಿಲ್ಲ ಎಂದು ಲೋಕಾಯುಕ್ತ ಹೇಳಿತ್ತು. ಆದರೆ ವಿಚಾರಣೆ ನಡೆಸುವಂತೆ ಲೋಕಾಯುಕ್ತ ಮಾಡಿದ್ದ ಶಿಫಾರಸುಗಳನ್ನು ಸರ್ಕಾರ ಕೈಬಿಟ್ಟಿದೆ ಎಂದು ಸಂಪುಟ ಸಭೆ ನಂತರ ಕಾನೂನು ಸಚಿವ ಹೆಚ್.ಕೆ. ಪಾಟೀಲ್ ತಿಳಿಸಿದ್ದಾರೆ. ಅವರು, ಪ್ರೊಬೆಷನರಿ ಹುದ್ದೆಗಳ ಆಯ್ಕೆ ಪ್ರಕ್ರಿಯೆಯಲ್ಲಿ ಅವ್ಯವಹಾರದ ಬಗ್ಗೆ ತನಿಖೆ ನಡೆಸಿದ್ದ ಲೋಕಾಯುಕ್ತ ವರದಿ ಸಲ್ಲಿಸಿತ್ತು. ಈ ವೇಳೆ ಅಂದಿನ ಅಧ್ಯಕ್ಷರೂ ಮತ್ತು ಎಂಟು ಮಂದಿ ಸದಸ್ಯರ ವಿಚಾರಣೆಗೆ ರಾಷ್ಟ್ರಪತಿಗಳಿಂದ ಅನುಮತಿ ಪಡೆಯಲು ಶಿಫಾರಸು ಮಾಡಿತ್ತು. ಆ ಪ್ರಸ್ತಾವವನ್ನು ಕೈಬಿಡಲು ಸಚಿವ ಸಂಪುಟ ಸಭೆ ತೀರ್ಮಾನಿಸಿದೆ ಎಂದು ಅವರು ಹೇಳಿದ್ದಾರೆ.

ಆದರೆ, ಮೇ 23ರ 'ಮೈಸೂರು ಮಿತ್ರ' ಸಂಚಿಕೆಯಲ್ಲಿ '2011ನೇ ಸಾಲಿನ ಕೆಎಎಸ್ ಅಧಿಕಾರಿಗಳ ಆಯ್ಕೆ ಅವ್ಯವಹಾರ; ಕೆಪಿಎಸ್‌ಸಿಯ ಅಂದಿನ ಅಧ್ಯಕ್ಷರು, ಎಂಟು ಸದಸ್ಯರ ವಿರುದ್ಧ ಕಾನೂನು ಕ್ರಮಕ್ಕೆ ಸಂಪುಟ ಸಮ್ಮತಿ' ಎಂದು ವರದಿ ಪ್ರಕಟವಾಗಿತ್ತು. ಸಂಪರ್ಕ ಕೊರತೆಯಿಂದ ಉಂಟಾದ ಈ ಲೋಪಕ್ಕೆ ವಿಷಾಧಿಸುತ್ತೇವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

30.05.2025 ಶುಕ್ರವಾರ, ಮಳೆ ನಕ್ಷತ್ರ: ರೋಹಿಣಿ 25.05.2025 ರಿಂದ 07.06.2025 ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ, ತಿಥಿ: ಚೌತಿ, ನಕ್ಷತ್ರ: ಪುನರ್ವಸು, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಶಾಲಾಕ್ಯ ತಂತ್ರ ಸ್ನಾತಕೋತ್ತರ ವಿಭಾಗದಿಂದ ಕಣ್ಣಿನ ದೃಷ್ಟಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ವಿಶೇಷ ಬೇಸಿಗೆ ಆರೋಗ್ಯ ಶಿಬಿರ, ಬೊಜ್ಜು ನಿವಾರಣೆ, ಮೂತ್ರಪಿಂಡ (ಕಿಡ್ನಿ) ಕಾಯಿಲೆಗೆ, ಆರೋಗ್ಯಾಯುಷ್ಯ ಆರೋಗ್ಯವರ್ಧಕ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಭುಜ ನೋವು, ದುಷ್ಟವ್ರಣ/ಮಾಯದ ಗಾಯ, ಮಾನಸಿಕ ಒತ್ತಡ ನಿವಾರಣೆ ಕುರಿತು ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಬಳಿ, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಗೆ.

■ **ಸುಯೋಗ್ ಆಸ್ಪತ್ರೆ :** ಉಚಿತ ಕೀಲು, ಮೂಳೆ ತಪಾಸಣಾ ಶಿಬಿರ, ಸ್ಥಳ: ಸುಯೋಗ್ ಆಸ್ಪತ್ರೆ ಆವರಣ, ಬೆಳಗ್ಗೆ 10 ರಿಂದ.

■ **ಶ್ರೀ ದುರ್ಗಾ ಫೌಂಡೇಶನ್ :** 2025ರ ಸಾಲಿನ ಸರ್ಕಾರಿ ಶಾಲೆ ಮಕ್ಕಳನ್ನು ಆರತಿ ಬೆಳಗಿಸಿ ಸಿಹಿ ಹಂಚಿ ಮಕ್ಕಳಿಗೆ ಅಕ್ಷರಾಭ್ಯಾಸ ಮಾಡಿಸುವ ಮೂಲಕ ಸ್ವಾಗತ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮೇಲುಕೋಟೆ ವಂಗೀಪುರ ಮಠದ ಇಳೈ ಆಳ್ವಾರ್ ಸ್ವಾಮೀಜಿ, ಹಿರಿಯ ಸಮಾಜ ಸೇವಕ ಡಾ. ರಘುರಾಮ್ ವಾಜಪೇಯಿ, ನಗರಪಾಲಿಕೆ ಮಾಜಿ ಸದಸ್ಯ ಬಿ.ವಿ. ಮಂಜುನಾಥ್, ಅರ್ಚಕರ ಸಂಘದ ಅಧ್ಯಕ್ಷ ವಿದ್ವಾನ್ ಕೃಷ್ಣಮೂರ್ತಿ, ಸಮಾಜ ಸೇವಕಿ ಖುಷಿ ವಿನು, ಸ್ಥಳ: ಅಕ್ಕನ ಬಳಗ ಶಾಲೆ, ಬೆಳಗ್ಗೆ 10ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಆಂತರಿಕ ಗುಣಮಟ್ಟ ಖಾತರಿ ಘಟಕ, ಪರಿಸರ ವಿಜ್ಞಾನ ಅಧ್ಯಯನ ವಿಭಾಗ, ಸಮಾಜ ಕಾರ್ಯ ಅಧ್ಯಯನ ವಿಭಾಗ, ಸಮಾಗಮ ವೆಲ್‌ಫೇರ್ ಫೌಂಡೇಷನ್ :** ಅಂತರರಾಷ್ಟ್ರೀಯ ಜೀವವೈವಿಧ್ಯತೆ ದಿನಾಚರಣೆ, ಅಧ್ಯಕ್ಷತೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಉದ್ಘಾಟನೆ : ಅಂತರರಾಷ್ಟ್ರೀಯ ಪರಿಸರ ತಜ್ಞ ಪ್ರೊ. ರವೀಂದ್ರ ಕೆ.ಕೊಹ್ಲಿ, ಪ್ರೊ. ಆರ್. ರಾಘವೇಂದ್ರ ಅವರಿಂದ ಜೀವವೈವಿಧ್ಯತೆ ಮತ್ತು ಜೀವೋತ್ಪನ್ನಗಳ ಅನ್ವೇಷಣೆ ಕುರಿತು ಉಪನ್ಯಾಸ, ಮುಖ್ಯ ಅತಿಥಿಗಳು: ಮೈಸೂರು ವಿವಿ ಕುಲಸಚಿವ ಪ್ರೊ. ಎನ್. ನಾಗರಾಜ, ಉಪಸ್ಥಿತರು : ಮಾಧವ ಉಲ್ಲಾಳ್, ಡಾ. ಎನ್.ಎಸ್. ರಾಜು, ಡಾ. ಹೆಚ್.ಪಿ. ಜ್ಯೋತಿ, ಸ್ಥಳ: ವಿಜ್ಞಾನ ಭವನ, ಮಾನಸಗಂಗೋತ್ರಿ, ಬೆಳಗ್ಗೆ 10ಕ್ಕೆ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ಅವಧೂತ ದತ್ತ ಪೀಠ :** ಶ್ರೀ ದತ್ತ ವೆಂಕಟೇಶ್ವರ ಕ್ಷೇತ್ರದ 26ನೇ ಬ್ರಹ್ಮೋತ್ಸವ, ನಾದಮಂಟಪದ 27ನೇ ವಾರ್ಷಿಕೋತ್ಸವ ಹಾಗೂ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 83ನೇ ಜನ್ಮದಿನಾಚರಣೆ, ಬೆಳಗ್ಗೆ 9ಕ್ಕೆ, ಶ್ರೀ ದತ್ತ ವೆಂಕಟೇಶ್ವರ ಸ್ವಾಮಿಗೆ ಬ್ರಹ್ಮೋತ್ಸವ ಮಹಾ ಅಭಿಷೇಕ, ಮಧ್ಯಾಹ್ನ 3ಕ್ಕೆ ವಿದುಷಿ ಡಾ.ರಮಾಪ್ರಭಾ ಯರ್ರಮಿಲ್ಲಿ ಅವರಿಂದ ಕರ್ನಾಟಕ ಸಂಗೀತ ಕಾರ್ಯಕ್ರಮ, ಸಂಜೆ 7 ಕ್ಕೆ ಸಪ್ತರ್ಷಿ ಸರೋವರದಲ್ಲಿ ಶ್ರೀ ದತ್ತ ವೆಂಕಟೇಶ್ವರ ಸ್ವಾಮಿಗೆ ತೆಪ್ಪೋತ್ಸವ ಸ್ಥಳ: ಅವಧೂತ ದತ್ತಪೀಠ, ನಂಜನಗೂಡು ರಸ್ತೆ.

■ **ಶ್ರೀ ಸಪ್ತಮಾತೃಕಾ ಚೌಡೇಶ್ವರಿ ದೇವಸ್ಥಾನ – ಶ್ರೀ ಕ್ಷೇತ್ರ, ಮೈಸೂರು :** 20ನೇ ವಾರ್ಷಿಕ ಪ್ರತಿಷ್ಠಾ ವರ್ಧಂತ್ಯುತ್ಸವ–2025, ವಿಶೇಷ ಧಾರ್ಮಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಸೇವಾ ಕಾರ್ಯಕ್ರಮ, ಬೆಳಗ್ಗೆ 8 ರಿಂದ ನವಚಂಡಿಕಾ ಹೋಮ, ಮಧ್ಯಾಹ್ನ 12ಕ್ಕೆ ಪೂರ್ಣಾಹುತಿ, ತೀರ್ಥಪ್ರಸಾದ, ಸ್ಥಳ: ಶ್ರೀ ಸಪ್ತಮಾತೃಕಾ ಚೌಡೇಶ್ವರಿ ದೇವಸ್ಥಾನ, ವಿಜಯನಗರ 3ನೇ ಹಂತ.

■ **ಕದಂಬ ರಂಗ ವೇದಿಕೆ, ಕನ್ನಡ ಸಾಹಿತ್ಯ ಕಲಾಕೂಟ :** ಡಾ. ಡಿ. ಗುರುಮೂರ್ತಿ ಹಾರೋಹಳ್ಳಿ ಅವರ ಡಾ. ರಾಜ್‌ಕುಮಾರ್ ದಿ ಲೆಜೆಂಡ್ ಕೃತಿ ಬಿಡುಗಡೆ ಸಮಾರಂಭ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಕೃತಿ ಬಿಡುಗಡೆ : ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ. ಕೆ.ಎಸ್. ರಂಗಪ್ಪ, ಕೃತಿ ಕುರಿತು : ಸಾಹಿತಿ ಡಾ. ಸಿ. ನಾಗಣ್ಣ, ಅಧ್ಯಕ್ಷತೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಅತಿಥಿಗಳು : ಆರ್. ರಘು ಕೌಟಿಲ್ಯ, ಎಂ.ಕೆ. ಪೋತರಾಜು, ರಾಜಶೇಖರ ಕದಂಬ, ಎಂ. ಚಂದ್ರಶೇಖರ್, ಸ್ಥಳ: ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಸಂಜೆ 5.30ಕ್ಕೆ.

■ **ಶ್ರೀ ನಾದಬ್ರಹ್ಮ ಸಂಗೀತ ಸಭಾ :** ಟಿ.ಆರ್. ಮಹಾಲಿಂಗಂ ಸಂಸ್ಮರಣಾ ಕಾರ್ಯಕ್ರಮ, ವಿದ್ವಾನ್ ಹೇರಂಬ ಮತ್ತು ವಿದ್ವಾನ್ ಹೇಮಂತ್ ಅವರಿಂದ ಕರ್ನಾಟಕ ಶಾಸ್ತ್ರೀಯ ದ್ವಂದ್ವ ಕೊಳಲು ವಾದನ, ವಿದ್ವಾನ್ ಅರ್ಜುನ್ ಕುಮಾರ್–ಮೃದಂಗ, ವಿದ್ವಾನ್ ಶಮಿತ್‌ಗೌಡ–ಘಟಂ, ಸ್ಥಳ: ಶ್ರೀ ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

■ **ತರಳಬಾಳು ಸಮಾಗಮ :** ಶ್ರೀ 1008 ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರ ಮಾರ್ಗದರ್ಶನದಲ್ಲಿ ಶಿಕ್ಷಕರ ಬೇಸಿಗೆ ರಂಗ ತರಬೇತಿ ಶಿಬಿರದಲ್ಲಿ ಸಿದ್ಧಗೊಂಡ ಪ್ರಯೋಗ ಬೋಳುವಾರು ಮಹಮದ್ ಕುಂಞ ಅವರ ಕೃತಿಯಾಧಾರಿತ ನಾಟಕ ಸ್ವಾತಂತ್ರ್ಯದ ಓಟ (ಸಿರಿಗೆರೆ ತರಳಬಾಳು ಕಲಾಸಂಘದ ಕಲಾವಿದರಿಂದ), ಉದ್ಘಾಟನೆ : ಹಿರಿಯ ಪತ್ರಕರ್ತ ಅಂಶಿಪ್ರಸನ್ನಕುಮಾರ್, ಮುಖ್ಯ ಅತಿಥಿಗಳು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ನಿರ್ದೇಶನ : ಶಶಿಧರ್ ಭಾರಿಘಾಟ್, ಸ್ಥಳ: ಕಿರು ರಂಗಮಂದಿರ, ಕಲಾಮಂದಿರ ಆವರಣ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಾಧನ – ಶೋಧನ ಗ್ರಾಮೀಣ ಪರಿಸರದ ಉಪಕರಣಗಳು, ಲೇಖನ : ಡಾ. ಎಂ. ಎನ್. ಚಿಕ್ಕಮಾಧು, ಪ್ರಸ್ತುತಿ : ಡಾ. ಮೈಸೂರು ಉಮೇಶ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಸಿ. ವಿಶ್ವನಾಥ್ ಹಾಗೂ ಬಿ. ಶ್ರೀರಾಮ್ ಭಟ್, ವ್ಯಾಖ್ಯಾನ–ಡಾ. ಪ್ರದೀಪ್ ಕುಮಾರ್ ಹೆಬ್ರಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಯೋಗ ಕುರಿತ ವಿಶೇಷ ಸರಣಿ ಮಹಾ ಯೋಗ, 9.00 ನಮ್ಮ ಆರೋಗ್ಯ, ವಿಶ್ವ ಥೈರಾಯ್ಡ್ ದಿನಾಚರಣೆಯ ಸಂದರ್ಭದಲ್ಲಿ ಮಕ್ಕಳಲ್ಲಿ ಥೈರಾಯ್ಡ್ ತೊಂದರೆಗಳು ಲಕ್ಷಣಗಳು ಮತ್ತು ಚಿಕಿತ್ಸೆ ಕುರಿತು ಡಾ. ತೃಪ್ತಿ ಎಸ್. ಅವರೊಂದಿಗೆ ಮಾತುಕತೆ ಮತ್ತು ವಿಶ್ವ ತಂಬಾಕು ರಹಿತ ದಿನಾಚರಣೆಯ ಸಂಬಂಧವಾಗಿ ಧೂಮಪಾನ ಆರೋಗ್ಯಕ್ಕೆ ಹಾನಿಕರ ಕುರಿತು ಡಾ.ಆರ್. ಲಕ್ಷ್ಮೀನರಸಿಂಹನ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ– ಬೇದ್ರೆ ಮಂಜುನಾಥ್ ಮತ್ತು ದಿಗ್ವಿಜಯ್ ಬಿ., 9.30 ಗಾಂಧಿ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಮಹತಿ ಟಿ. ಭಾರ್ಗವಪುರಿ– ವೈಯೋಲಿನ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಕಾಮನಬಿಲ್ಲು ಬದುಕಿನ ಬಣ್ಣಗಳ ಚಿತ್ತಾರ, ಪ್ರಸ್ತುತಿ : ಜಿ.ಎನ್. ಮಂಜುನಾಥ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ–ಬಿ.ಕೆ. ರಮಪ್ರಭಾ, 12.45 ಕಾದಂಬರಿ ವಿಹಾರ – ಎಂ.ಆರ್. ಶ್ರೀನಿವಾಸಮೂರ್ತಿಯವರ ರಂಗಣ್ಣನ ಕನಸಿನ ದಿನಗಳು ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ : ಉಮೇಶ್. ಎಸ್.ಎಸ್, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು–ಪ್ರಥಮ್ ಭಟ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ –ಪ್ರಾಯೋಜಿತ ಕಾರ್ಯಕ್ರಮ. ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ : ಜಿ.ಕೆ. ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಎಂ.ಕೆ.ಸರಸ್ವತಿ–ವೀಣೆ, 4.00 ಮಹಿಳಾರಂಗ–ಜನಪ್ರಿಯ ವಿಜ್ಞಾನ ಬರಹಗಾರ್ತಿ ಶ್ರೀಮತಿ ಹರಿಪ್ರಸಾದ್ ಅವರೊಂದಿಗೆ ಸಂದರ್ಶನ, ಸಂದರ್ಶಕರು–ಮೀನಾ ಮೈಸೂರು, 4.30 ವೃತ್ತಿ ಮಾರ್ಗದರ್ಶನ, 6.50 ಕೃಷಿರಂಗ–ನಾಗನಹಳ್ಳಿಯ ಸಾವಯವ ಕೃಷಿ ಸಂಶೋಧನಾ ಕೇಂದ್ರದಲ್ಲಿ ನಡೆದ ಮತ್ಸತರಂ–ಮೀನು ಸಾಕಾಣಿಕೆ ಕುರಿತ ಬಾನುಲಿ ಸರಣಿಯ ಉದ್ಘಾಟನಾ ಸಮಾರಂಭದ ಬಾನುಲಿ ವರದಿ, ಪ್ರಸ್ತುತಿ: ಆರ್. ಲೋಕೇಶ್ವರಿ, 7.45 ಮಂಜು ಕೋಡಿಉಗನೆ ಅವರಿಂದ ಸಣ್ಣಕಥೆ ನೆಲದ ಜೀವ, 8.00 ಚರ್ಚೆ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ–ಜಿ.ಎಸ್.ಕಮಲ ಮತ್ತು ಜಿ. ಎಸ್. ರಾಜಲಕ್ಷ್ಮಿ – ದ್ವಂದ್ವಗಾಯನ, 10.00 ಜನಪದ ಸಂಗೀತ, 10.25 ಸವಿನೆನಪು–ಹಳೆಯ ಕನ್ನಡ ಚಿತ್ರಗೀತೆಗಳು

ಹಿಂದುತ್ವದ ಹಿತದೃಷ್ಟಿಯಿಂದ ವೀರ ಸಾವರ್ಕರ್ ವಿಚಾರಧಾರೆ ಪ್ರಸಾರವಾಗಬೇಕು

ಹಿಂದೂಗಳು ದೇಶದಲ್ಲಿ ಬಹುಸಂಖ್ಯಾತರಾಗಿದ್ದರೆ ಮಾತ್ರವೇ ಸಂವಿಧಾನ, ಪ್ರಜಾಪ್ರಭುತ್ವದ ಮೌಲ್ಯ ಉಳಿಯಲಿದೆ ; ವೀರ ಸಾವರ್ಕರ್ ಸಮ್ಮಾನ್ ಪ್ರಶಸ್ತಿ ಸ್ವೀಕರಿಸಿದ ವಿಮರ್ಶಕ ಡಾ.ಜಿ.ಬಿ.ಹರೀಶ ಅಭಿಮತ

ಮೈಸೂರು, ಮೇ 29(ಪಿಎಂ)– ಹಿಂದುತ್ವದ ಹಿತದೃಷ್ಟಿಯಿಂದ ವೀರ ಸಾವರ್ಕರ್ ಅವರ ವಿಚಾರಧಾರೆ ಪಸರಿಸಬೇಕು. ಹಿಂದೂಗಳು ಈ ದೇಶದಲ್ಲಿ ಬಹುಸಂಖ್ಯಾತರಾಗಿದ್ದರೆ ಮಾತ್ರವೇ ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಮೌಲ್ಯ ಉಳಿಯಲಿದೆ ಎಂದು ಬೆಂಗಳೂರಿನ ವಂದೇ ಮಾತರಂ ಪಾಠಶಾಲೆ ಸಂಸ್ಥಾಪಕರೂ ಆದ ಲೇಖಕ ಹಾಗೂ ವಿಮರ್ಶಕ ಡಾ.ಜಿ.ಬಿ.ಹರೀಶ ಹೇಳಿದರು.

ಮೈಸೂರಿನ ಕಲಾಮಂದಿರದಲ್ಲಿ ಸಾವರ್ಕರ್ ಪ್ರತಿಷ್ಠಾನ ಮೈಸೂರು ವತಿಯಿಂದ 142ನೇ ಸಾವರ್ಕರ್ ಜಯಂತಿ ಪ್ರಯುಕ್ತ ಗುರುವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ವೀರ ಸಾವರ್ಕರ್ ಸಮ್ಮಾನ್ ಪ್ರಶಸ್ತಿ 2025 ಸ್ವೀಕರಿಸಿ ಮಾತನಾಡಿದರು.

ನಮ್ಮ ದೇಶದಲ್ಲಿ ಹಿಂದೂಗಳನ್ನು ಮಟ್ಟ ಹಾಕಬೇಕೆಂದು ಅನ್ಯ ಧರ್ಮಿಯರ ಜನಸಂಖ್ಯೆ ವೇಗವಾಗಿ ಬೆಳೆಯುತ್ತಿದೆ. ಎಲ್ಲೆಲ್ಲಿ ಹಿಂದೂಗಳು ದುರ್ಬಲರಾಗಿರುತ್ತಾರೋ ಅಲ್ಲಿ ಹಿಂದುತ್ವಕ್ಕೆ ಹೊಡೆತ ಬೀಳಲಿದೆ. ಎಲ್ಲೆಲ್ಲಿ ಹಿಂದುತ್ವ ಜಾಗೃತವಾಗುತ್ತದೋ ಅಲ್ಲೆಲ್ಲ ಹಿಂದೂಗಳು ಗಟ್ಟಿಗೊಳ್ಳುತ್ತಾರೆ. ಹಾಗಾಗಿ ಸಾವರ್ಕರ್ ವಿಚಾರಧಾರೆ ಮುಂದುವರೆಸುವುದು ಎಂದರೆ ಹಿಂದುತ್ವಕ್ಕೆ ಬೆಂಬಲ ಕೊಡುವುದಾಗಿದೆ. ಹಿಂದುತ್ವಕ್ಕೆ ಬೆಂಬಲ ಕೊಡುವುದೊಂದೇ ಭಾರತೀಯರಿಗೆ ಉಳಿದಿರುವ ಮಾರ್ಗವಾಗಿದ್ದು, ಅದನ್ನು ಸಂವಿಧಾನ ಬದ್ಧವಾಗಿ ಮಾಡಬೇಕಿದೆ.

> ಎಲ್ಲಿ ಮುಂಚೆ ಎಡಪಂಥೀಯರು ರಾರಾಜಿಸುತ್ತಿದ್ದರೋ, ಎಲ್ಲಿ ದೇಶಕ್ಕೆ ವಿರೋಧವಾದಂತಹ ರೀತಿ ನಾಟಕಗಳು ಪ್ರದರ್ಶನಗೊಳ್ಳುತ್ತಿದ್ದವೋ ಅದಕ್ಕೆ ತುಂಬ ಹತ್ತಿರದ ಜಾಗದಲ್ಲಿ ಈ ಕಾರ್ಯಕ್ರಮ ಆಗುತ್ತಿರುವುದು ಮೈಸೂರಿಗೆ ಮಹಿಷಾಸುರನಿಂದ ಬಿಡುಗಡೆಯಾಗಿ ಮಹಿಷಮರ್ಧಿನಿಯ ಕಾಲ ಬಂದಿದೆ ಎನ್ನುವುದನ್ನು ತೋರಿಸುತ್ತಿದೆ.
> -ಡಾ.ಜಿ.ಬಿ.ಹರೀಶ

ಸ್ವಾತಂತ್ರ್ಯ ಭಾರತದಲ್ಲಿ ಆರೋಗ್ಯಪೂರ್ಣವಾಗಿಯೇ ಸಾವರ್ಕರ್ ಬದುಕಿದ್ದರು. ದುರಂತವೆಂದರೆ ದೇಶದ ಹಿತದೃಷ್ಟಿಯಿಂದ ಅವರ ಮೇರು ಪ್ರತಿಭೆಯನ್ನು ಆಳುವವರು ಬಳಸಿಕೊಳ್ಳಲಿಲ್ಲ. ಅವರ ಹಿಂದುತ್ವ ಪುಸ್ತಕ ಅನುವಾದ ಮಾಡುವ ಅವಕಾಶ ನನಗೆ ಸಿಕ್ಕಿತು. ಅವರ 10 ಸಾವಿರ ಪುಟಗಳ ಸಾಹಿತ್ಯವನ್ನು ನಾವೀಗ ಸಾವರ್ಕರ್ ಸಾಹಿತ್ಯ ಸಂಘದ ಮೂಲಕ 10 ಸಂಪುಟಗಳಲ್ಲಿ ಕನ್ನಡಕ್ಕೆ ತರುತ್ತಿದ್ದೇವೆ. ಈ ಮೇರು ವ್ಯಕ್ತಿತ್ವದ ವಿಚಾರ ಮನೆ ಮನೆ ತಲುಪಬೇಕು. ಆಗ ಕತ್ತಲೆ ಸರಿದು ಬೆಳಕು ಬರಲಿದೆ. ಈ ಪ್ರಕ್ರಿಯೆ ಆಗುತ್ತಿದೆಯಾದರೂ ವೇಗವಾಗಿ ಮುನ್ನಡೆಯಬೇಕಿದೆ.

ವೀರ ಸಾವರ್ಕರ್ ಸ್ವಾತಂತ್ರ್ಯ ಭಾರತದಲ್ಲಿ ಬದುಕಿದ್ದರು. ಬಾಂಬೆಯಲ್ಲಿ ವಾಸವಾಗಿದ್ದ ಅವರು ಒಂದು ದಿನವೂ ಬಾಂಬೆಯ ಮಹಾನಗರ ಪಾಲಿಕೆಗೆ ಸದಸ್ಯರೂ ಆಗಲಿಲ್ಲ. ಆ ಕಾಲದಲ್ಲಿ ನೆಹರು 17 ವರ್ಷ ದೇಶವನ್ನು ಆಳಿದರು. ಬಳಿಕ ಲಾಲ್‌ಬಹದ್ದೂರ್ ಶಾಸ್ತ್ರೀಯವರು ಆಳಿದರು. ಅದಕ್ಕೆ ಮುಂಚೆ 1947ರಿಂದ 51ರವರೆಗೆ ಮಧ್ಯಂತರ ಸರ್ಕಾರ ಇತ್ತು. ಈ ಎಲ್ಲಾ ಸಂದರ್ಭದಲ್ಲೂ ಸಾವರ್ಕರ್ ಆರೋಗ್ಯವಾಗಿಯೇ ಇದ್ದರೂ ದೇಶದ ಹಿತದೃಷ್ಟಿಯಿಂದ ಅವರ ಪ್ರತಿಭೆಯನ್ನು ಬಳಸಿಕೊಳ್ಳಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.



ಮೈಸೂರಿನ ಕಲಾಮಂದಿರದಲ್ಲಿ ಗುರುವಾರ ವೀರ ಸಾವರ್ಕರ್ ಸಮ್ಮಾನ್ ಪ್ರಶಸ್ತಿ 2025ರ ಅನ್ನು ವಿಮರ್ಶಕ ಡಾ.ಜಿ.ಬಿ.ಹರೀಶ ಅವರಿಗೆ ಸ್ವಾಮಿ ಶ್ರೀ ಮುಕ್ತಿದಾನಂದ ಮಹಾರಾಜ್ ಪ್ರದಾನ ಮಾಡಿದರು.

ನೆಹರು ಕಾಲದಲ್ಲಿ ಸಾವರ್ಕರ್ ಅವರಿಗೆ ಪಿಂಚಣಿ ಸಹ ಸಿಗಲಿಲ್ಲ. 1948ರ ಪಾಕಿಸ್ತಾನ ವಿರುದ್ಧದ ಯುದ್ಧ, 1965ರ ಚೀನಾ ವಿರುದ್ಧದ ಯುದ್ಧದಲ್ಲಿ ಸಾವರ್ಕರ್ ಪ್ರತಿಭೆಯನ್ನು ನಮ್ಮ ದೇಶವನ್ನು ಆಳುವವರು ಬಳಸಿಕೊಳ್ಳಲಿಲ್ಲ ಅವರಿಗೆ ಶ್ರೇಯಸ್ಸು ಸಲ್ಲುತ್ತದೆ ಎಂಬುದೇ ಇದಕ್ಕೆ ಕಾರಣ. ಚೀನಾದಲ್ಲಿ ಸಾವರ್ಕರ್ ಅವರು ಇದ್ದಿದ್ದರೆ ಅವರನ್ನು ದೇಶದ ಉನ್ನತ ಸ್ಥಾನಕ್ಕೇರಿಸುತ್ತಿದ್ದರು. ಆದರೆ ನಮ್ಮವರು ಅವರನ್ನು ಕಡೆಗಣಿಸಿದರು ಎಂದರು.

ಭಗತ್ ಸಿಂಗ್–ಸಾವರ್ಕರ್ ಹೋಲಿಕೆ ಪುಸ್ತಕ: ಭಗತ್ ಸಿಂಗ್ ಮತ್ತು ಸಾವರ್ಕರ್ ಅವರನ್ನು ಹೋಲಿಕೆ ಮಾಡಿ ಪುಸ್ತಕ ಬರೆಯುತ್ತಿದ್ದೇನೆ. 15 ದಿನಗಳಲ್ಲಿ ಈ ಪುಸ್ತಕ ಬಿಡುಗಡೆಯಾಗಲಿದೆ. ಒಬ್ಬೊಬ್ಬ ದೇಶಭಕ್ತರನ್ನು ಹುಡುಕಿ ಬರೆಯುವ ಸಂದರ್ಭ ಬಂದಿದೆ. ಏಕೆಂದರೆ ಭಗತ್ ಸಿಂಗ್ ಕಮ್ಯೂನಿಸ್ಟ್, ನಾಸ್ತಿಕರಿದ್ದರು ಹಾಗೂ ಸಾವರ್ಕರ್ ಇನ್ನೊಂದು ರೀತಿ ಇದ್ದರೆಂದು ಕ್ರಾಂತಿಕಾರಿಗಳಲ್ಲಿ ಭೇದ ನೀತಿ ತಂದು ಸುಳ್ಳು ಇತಿಹಾಸವನ್ನು ಬರೆಯಲಾಗಿದೆ ಎಂದು ದೂರಿದರು.

ಒಬ್ಬ ಹುಚ್ಚ: ಈ ಬೆಂಗಳೂರು–ದೆಹಲಿ ಸೇರಿದಂತೆ ಹೋದ ಕಡೆಗಳಲ್ಲೆಲ್ಲ ಒಬ್ಬ ಹುಚ್ಚನು ಸಾವರ್ಕರ್ ಅವರನ್ನು ವೀರ ಎಂದು ಯಾರು ಕರೆದರು ಎಂದು ಹೇಳಿಕೊಂಡು ತಿರುಗುತ್ತಿದ್ದಾನೆ. ಆತನ ಹೆಸರು ಹೇಳುವ ಅವಶ್ಯಕತೆ ಇಲ್ಲ. ಹಿಂದಿ ಪತ್ರಿಕೆವೊಂದರಲ್ಲಿ ಭಗತ್ ಸಿಂಗ್ ಅವರೇ ಸಾವರ್ಕರ್ ಅವರನ್ನು 'ವೀರ' ಎಂದು ಕರೆದಿದ್ದಾರೆ. ವೀರ ಸಾವರ್ಕರ್ ಎಂದು ಪದ ಬಳಸಿದ್ದಾರೆ. ಜೊತೆಗೆ ವಿಶ್ವಪ್ರೇಮಿ ಎಂದೂ ಕರೆಯುತ್ತಾರೆ ಎಂದು ತಿಳಿಸಿದರು.

> **ಸಾವರ್ಕರ್ ಬಗ್ಗೆ ಓದಿದರೆ ರಾಷ್ಟ್ರಪ್ರೇಮ, ವಿವೇಕ ಮೂಡಲಿದೆ...**
> ವೀರ ಸಾವರ್ಕರ್ ಜೀವನ ಮತ್ತು ಸಂದೇಶ, ರಾಷ್ಟ್ರಪ್ರೇಮವವನ್ನು ಸೂರ್ಯನಂತೆ ಪ್ರಕಾಶಿಸುತ್ತದೆ. ಸಾವರ್ಕರ್ ಅವರ ಕುರಿತು ಶಿಕ್ಷಣ ವ್ಯವಸ್ಥೆಯಲ್ಲಿ ಇಲ್ಲದ ಕಾರಣ ಅವರ ಬಗ್ಗೆ ತಿಳಿಯಲು ಮಕ್ಕಳು, ಯುವಜನರಿಗೆ ಸಾಧ್ಯವಾಗಿಲ್ಲ. ಇಂತಹ ಅದ್ಭುತ ಮೇರು ವ್ಯಕ್ತಿತ್ವದ ಬಗ್ಗೆ ಯುವಜನರು ಮತ್ತು ಮಕ್ಕಳು ಓದಿದರೆ, ಅವರಲ್ಲಿ ವಿವೇಕ ಮತ್ತು ರಾಷ್ಟ್ರಪ್ರೇಮ ಮೂಡಲು ಸಹಕಾರಿಯಾಗಲಿದೆ. ಜೊತೆಗೆ ವೀರ ಸಾವರ್ಕರ್ ಅವರನ್ನು ಓದಿದರೆ ಹಿಂದುತ್ವದ ಬಗ್ಗೆ ತಿಳಿಯುವುದು ಮಾತ್ರವಲ್ಲ, ಅದನ್ನು ರಕ್ಷಿಸುವ ಬಗೆಯೂ ತಿಳಿಯಲಿದೆ.
> -ಸ್ವಾಮಿ ಶ್ರೀ ಮುಕ್ತಿದಾನಂದ ಮಹಾರಾಜ್,
> ಅಧ್ಯಕ್ಷರು, ರಾಮಕೃಷ್ಣ ಆಶ್ರಮ, ಮೈಸೂರು.

ಕೆನಾಡದಲ್ಲಿ ಕೂತು ಭಾರತದ ವಿರುದ್ಧ ಖಲಿಸ್ತಾನ್ ಮೂವ್‌ಮೆಂಟ್ ಕೆಲಸ ಮಾಡುತ್ತಿದೆ. ಇದಕ್ಕೆ ಅಂದೇ ಸಾವರ್ಕರ್ ಪರಿಹಾರ ಹುಡುಕಿದ್ದರು. ಸಿಖ್ಖರು ಹಿಂದೂಗಳು. ನಿಮ್ಮ ಬೇರುಗಳನ್ನು ಮರೆಯಬಾರದು ಎಂದು ಮನವರಿಕೆ ಮಾಡಿಕೊಟ್ಟಿದ್ದರು. ಸಾವರ್ಕರ್ ಅವರಿಗೆ ಆದ ಅವಮಾನಗಳನ್ನು ಹೇಳುತ್ತಾ ಕೇವಲ ಅವರ ನೋವಿನ ಕಥೆ ಹೇಳಿಕೊಂಡು ಬಂದಿದ್ದೇವೆ. ಆದರೆ ಸಾವರ್ಕರ್ ಜೀವನ ಒಂದು ಗೆಲುವಿನ ಜೀವನ. ಅವರ ಎಲ್ಲಾ ಪ್ರಯೋಗಗಳು ಯಶಸ್ವಿಯಾಗಿವೆ. ಸಾವರ್ಕರ್ ಅವರನ್ನು ಕಂಡರೆ ಬ್ರಿಟಿಷರು ಗಡಗಡನೇ ನಡುಗುತ್ತಿದ್ದರು. ಪ್ರೇರಣೆ ಕೊಡುವ ವಿಚಾರ ಹೊಂದಿದ್ದ ಸಾವರ್ಕರ್ ಅವರ ಪೆನ್ನು ಮತ್ತು ಗನ್ ಎರಡು ಕೊನೆವರೆಗೂ ಬ್ರಿಟಿಷರಿಗೆ ತಲೆ ನೋವಾಗಿ ಪರಿಣಮಿಸಿತ್ತು ಎಂದು ಹೇಳಿದರು.

ಸಾವರ್ಕರ್ ಅವರ 'ಜಯೋಸ್ತುತೆ' ಹಾಡನ್ನು ರಾಷ್ಟ್ರಗೀತೆ ಮಾಡಲಿಲ್ಲ. ಈ ಹಾಡನ್ನು ಲತಾ ಮಂಗೇಷ್ಕರ್ ಅವರು ತಮ್ಮ ಆಕಾಶವಾಣಿಯಲ್ಲಿ ಹಾಡಿದರು ಎಂದು ಮುಂಬೈ ಪ್ರಾಂತ್ಯದ ಆಕಾಶವಾಣಿ ವಿಭಾಗದವರು ನೋಟಿಸ್ ಕೊಟ್ಟು ಕೆಲಸದಿಂದಲೇ ಅವರನ್ನು ತೆಗೆದರು. ಇದು ಸ್ವಾತಂತ್ರ್ಯ ಭಾರತದಲ್ಲೇ ನಡೆದ ಘಟನೆ. ಸಾವರ್ಕರ್ ಅವರ ಪ್ರತಿಭೆಯನ್ನು ಬ್ರಿಟಿಷರು ಹೊಸಕಿ ಹಾಕಲು ಪ್ರಯತ್ನ ಮಾಡಿದಂತೆ ಸ್ವಾತಂತ್ರ್ಯ ಭಾರತದಲ್ಲೂ ಆಡಳಿತ ನಡೆಸುವವರು ಹೊಸಕಿ ಹಾಕಲು ಪ್ರಯತ್ನ ಮಾಡಿದರು. ಗಾಂಧಿ ಹತ್ಯೆಯ ಸುಳ್ಳು ಆರೋಪದಲ್ಲಿ 13 ತಿಂಗಳು ಅವರನ್ನು ದೆಹಲಿ ಜೈಲಿನಲ್ಲಿ ಇರಿಸಿ ಅವರ ಮನೆಯಲ್ಲಿದ್ದ 10 ಸಾವಿರ ಪತ್ರಗಳನ್ನು ವಶಪಡಿಸಿಕೊಳ್ಳಲಾಯಿತು. ಪೊಲೀಸರು ಈ ಒಂದನ್ನೂ ವಾಪಸ್ಸು ಕೊಡಲಿಲ್ಲ. ಏಕೆಂದರೆ ಪತ್ರಗಳಲ್ಲಿ ಭಾರತದ ಇತಿಹಾಸದ ಬಗ್ಗೆ ನೈಜ ಅಂಶಗಳಿದ್ದವು ಎಂದು ಹೇಳಿದರು.

ಮೈಸೂರು ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಶ್ರೀ ಮುಕ್ತಿದಾನಂದ ಮಹಾರಾಜ್ ಪ್ರಶಸ್ತಿ ಪ್ರದಾನ ಮಾಡಿದರು. ಬೇಬಿಬೆಟ್ಟದ ಶ್ರೀ ರಾಮಯೋಗೀಶ್ವರ ಮಠದ ಶ್ರೀ ಶಿವಬಸವ ಸ್ವಾಮಿ ಸಾನ್ನಿಧ್ಯ ವಹಿಸಿದ್ದರು. ಆದಿತ್ಯ ಅಧಿಕಾರಿ ಆಸ್ಪತ್ರೆಯ ಡಾ.ಚಂದ್ರಶೇಖರ್, ಸಾವರ್ಕರ್ ಪ್ರತಿಷ್ಠಾನದ ಅಧ್ಯಕ್ಷೆ ಡಾ.ಎಸ್.ಯಶಸ್ವಿನಿ ಮತ್ತಿತರರು ಹಾಜರಿದ್ದರು.

ಮೂರು ದಿನವಾದರೂ ಯುವಕನ ಬಲಿ ಪಡೆದ ಚಿರತೆ ಸುಳಿವಿಲ್ಲ



ಚಿರತೆ ಸೆರೆಗಾಗಿ ವಾಕ್ ಥ್ರೂ ಕೇಜ್ ಅಳವಡಿಸುತ್ತಿರುವುದು.

ಹುಣಸೂರು, ಮೇ 29(ಎಂಟಿವೈ)– ಕಾಡಂಚಿನ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ಯುವಕನ ಬಲಿ ಪಡೆದ ಚಿರತೆ ಸೆರೆಗೆ ಅರಣ್ಯ ಇಲಾಖೆ ಮೂರನೇ ದಿನವೂ ಕೂಂಬಿಂಗ್ ಕಾರ್ಯಾಚರಣೆ ಮುಂದುವರೆಸಿದ್ದರೂ, ಚಿರತೆ ಸುಳಿವು ಸಿಕ್ಕಿಲ್ಲದ ಕಾರಣ ಅರಣ್ಯ ಸಿಬ್ಬಂದಿಗಳಿಗೆ ತಲೆನೋವಾಗಿ ಪರಿಣಮಿಸಿದೆ.

ಹುಣಸೂರು ತಾಲೂಕಿನ ವೀರನಹೊಸಳ್ಳಿ ಸಮೀಪದ ನಾಗಾಪುರ ಹಾಡಿ 5ನೇ ಬ್ಲಾಕ್ ಬಳಿ ಸೊಳ್ಳೇಪುರ ಅರಣ್ಯ ಪ್ರದೇಶದಂಚಿನ ಜಮೀನಿನಲ್ಲಿ ಮೇಕೆ ಮೇಯಿಸುತ್ತಿದ್ದ ನಾಗಾಪುರ ಹಾಡಿ 5ನೇ ಬ್ಲಾಕ್ ನಿವಾಸಿ ಕೃಷ್ಣ ಮತ್ತು ನಾಗಮಣಿ ದಂಪತಿ ಪುತ್ರ ಹರೀಶ್(29) ಎಂಬಾತನ ಮೇಲೆ ಸೋಮವಾರ ಕಾಡು ಪ್ರಾಣಿ ದಾಳಿ ನಡೆಸಿ ಹತ್ಯೆ ಮಾಡಿತ್ತು. ಪ್ರತ್ಯಕ್ಷದರ್ಶಿ ಹಾಗೂ ಸ್ಥಳೀಯರು ಯುವಕನ ಮೇಲೆ ದಾಳಿ ನಡೆಸಿದ್ದು ಹುಲಿ ಎಂದು ಆಪಾದಿಸಿದ್ದರು. ಆದರೆ, ಸ್ಥಳ ಪರಿಶೀಲಿಸಿದ ಅರಣ್ಯ ಸಂಗ್ರಹಿಸಿದ ಮಾಹಿತಿ ಹಾಗೂ ಗುರುತನ್ನು ಆಧರಿಸಿ, ಚಿರತೆ ದಾಳಿ ನಡೆಸಿದೆ ಎಂದು ಸ್ಪಷ್ಟಪಡಿಸಿತ್ತು.

ಆನೆ ಹಾಗೂ ಚಿರತೆ ಕಾರ್ಯಪಡೆ, ನಾಗರಹೊಳೆ, ಹುಣಸೂರು ವಲಯದ ಸಿಬ್ಬಂದಿಗಳೊಂದಿಗೆ ಎರಡು ಸಾಕಾನೆ ಬಳಸಿ, ಸುತ್ತಮುತ್ತಲಿನ ಪ್ರದೇಶದಲ್ಲಿ ಕೂಂಬಿಂಗ್ ಕಾಯಾಚರಣೆ ನಡೆಸಲಾಗಿದೆ. ಅಲ್ಲದೆ, ಒಂದು ದೊಡ್ಡ ಬೋನ್, 4 ಚಿಕ್ಕ ಬೋನ್ ಅಳವಡಿಸಲಾಗಿದೆ. 15 ಕ್ಯಾಮರಾ ಟ್ರ್ಯಾಪ್ ಅಳವಡಿಸಿ, ದಿನದ 24 ಗಂಟೆಯೂ ಪರಿಶೀಲಿಸುತ್ತಿದ್ದರೂ ಯಾವುದೇ ಸುಳಿವು ದೊರೆತಿಲ್ಲ. ಇಂದು ವಾಕ್ ಥ್ರೂ ಕೇಜ್ ಅಳವಡಿಸಲಾಗಿದ್ದು, ಯುವಕನ ಮೇಲೆ ದಾಳಿ ನಡೆಸಿದ ಚಿರತೆ ಸೆರೆಗೆ ಬಲೆ ಬೀಸಿದ್ದಾರೆ.

ಅಪರಿಚಿತ ವಾಹನ ಹಿಟ್ ಅಂಡ್ ರನ್

ಮಗಳು ಸಾವು; ತಾಯಿ ಸ್ಥಿತಿ ಗಂಭೀರ

ಮೈಸೂರು, ಮೇ 29– ಹಿಟ್ ಅಂಡ್ ರನ್‌ಗೆ ಮಹಿಳೆಯೊಬ್ಬರು ಬಲಿಯಾಗಿ, ಮತ್ತೋರ್ವ ಮಹಿಳೆ ಗಂಭೀರವಾಗಿ ಗಾಯಗೊಂಡಿರುವ ಘಟನೆ ಮೈಸೂರಿನಲ್ಲಿ ನಡೆದಿದೆ.



ಮಹಾದೇವಿ

ಅಪರಿಚಿತ ಗೂಡ್ಸ್ ವಾಹನ ಡಿಕ್ಕಿ ಹೊಡೆದು ಮೊಪೆಡ್‌ನಲ್ಲಿ ತೆರಳುತ್ತಿದ್ದ ನಗರದ ಮಂಜುನಾಥಪುರ ನಿವಾಸಿ ಮಹಾದೇವಿ(30) ಮೃತಪಟ್ಟಿದ್ದು, ಅವರ ತಾಯಿ ಮಂಗಳಮ್ಮ(50) ತೀವ್ರವಾಗಿ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ.

ಈ ತಾಯಿ–ಮಗಳು ಸೊಪ್ಪಿನ ವ್ಯಾಪಾರ ಮಾಡಿಕೊಂಡಿದ್ದು, ಎಂದಿನಂತೆ ಮೂರ್ನಾಲ್ಕು ದಿನಗಳ ಹಿಂದೆ ಮುಂಜಾನೆ 3 ಗಂಟೆಗೆ ತಮ್ಮ ಟಿವಿಎಸ್ ಎಕ್ಸೆಲ್ ಸೂಪರ್ ಮೊಪೆಡ್ (ಕೆಎ–09, ಜೆಕೆ–3278)ನಲ್ಲಿ ಸೊಪ್ಪು ತರಲು ಗನ್‌ಹೌಸ್ ಬಳಿಯ ಮಾರುಕಟ್ಟೆಗೆ ತೆರಳಿದ್ದರು. ಖರೀದಿ ನಂತರ ಸುಮಾರು 4.30ರಲ್ಲಿ ಮನೆಗೆ ವಾಪಸ್ಸಾಗುವಾಗ ದಾಸಪ್ಪ ವೃತ್ತದ ಬಳಿ ಅಪರಿಚಿತ ಪಿಕ್‌ಅಪ್ ಗೂಡ್ಸ್ ವಾಹನ ಡಿಕ್ಕಿ ಹೊಡೆದು, ಪರಾರಿಯಾಗಿದೆ. ನೆಲಕ್ಕುರುಳಿದ ಇಬ್ಬರಿಗೂ ತೀವ್ರ ಗಾಯವಾಗಿದೆ. ಸಾರ್ವಜನಿಕರು ಕೂಡಲೇ ಅವರನ್ನು ಕೆ.ಆರ್. ಆಸ್ಪತ್ರೆಗೆ ಕರೆದೊಯ್ದಿದ್ದಾರೆ. ಆದರೆ ಮಹಾದೇವಿ ಮಾರ್ಗಮಧ್ಯೆಯೇ ಸಾವನ್ನಪ್ಪಿದ್ದು, ಮಂಗಳಮ್ಮ ಚಿಕಿತ್ಸೆ ಪಡೆಯುತ್ತಿದ್ದಾರೆ.

ಈ ಸಂಬಂಧ ದೇವರಾಜ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ತಾಯಿ ಮಂಗಳಮ್ಮ ಅವರೊಂದಿಗೆ ಗುಡಿಸಲಲ್ಲಿ ವಾಸವಿದ್ದ ಮಹಾದೇವಿ ಅವರಿಗೆ 10 ಹಾಗೂ 12 ವರ್ಷದ ಇಬ್ಬರು ಹೆಣ್ಣು ಮಕ್ಕಳಿದ್ದಾರೆ. ತಾಯಿಯ ಸಾವಿನಿಂದ ಈ ಮಕ್ಕಳು ಆಘಾತಕ್ಕೊಳಗಾಗಿದ್ದಾರೆ.

ಮೈಸೂರು ಮಹಾರಾಜರು ಸ್ಥಾಪಿಸಿದ ಕೈಗಾರಿಕೆಗಳ ಪುನಶ್ಚೇತನಕ್ಕೆ ಆಗ್ರಹ

ಮೈಸೂರು, ಮೇ 29(ಎಸ್‌ಬಿಡಿ)– ಮೈಸೂರು ಒಡೆಯರ್ ಸಂಸ್ಥಾನದಿಂದ ಸ್ಥಾಪಿಸಿರುವ ಕೈಗಾರಿಕೆಗಳ ಪುನಶ್ಚೇತನಕ್ಕೆ ರಾಜ್ಯ ಸರ್ಕಾರ ಮುಂದಾಗಬೇಕು ಎಂದು ಮೈಸೂರಿನ ಮಾಜಿ ಮೇಯರ್ ಹಾಗೂ ಬಿಜೆಪಿ ಮುಖಂಡ ಸಂದೇಶ್ ಸ್ವಾಮಿ ಆಗ್ರಹಿಸಿದ್ದಾರೆ.

ಭಾರತದ ವೈಮಾನಿಕ ಮತ್ತು ರಕ್ಷಣಾ ಕ್ಷೇತ್ರದ ಪ್ರತಿಷ್ಠಿತ ಸಂಸ್ಥೆಯಾದ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಹೆಚ್‌ಎಎಲ್)ನ ಪ್ರಧಾನ ಕಚೇರಿ ಮತ್ತು ಉತ್ಪಾದನಾ ಘಟಕಗಳನ್ನು ಬೆಂಗಳೂರಿನಿಂದ ಆಂಧ್ರಪ್ರದೇಶಕ್ಕೆ ಸ್ಥಳಾಂತರಿಸಲು ಪ್ರಯತ್ನ ನಡೆದಿದೆ ಎಂಬ ಚರ್ಚೆ ನಡೆದಿರುವ ಹಿನ್ನೆಲೆಯಲ್ಲಿ ಪತ್ರಿಕಾ ಹೇಳಿಕೆ ನೀಡಿರುವ ಇವರು, ಮೈಸೂರು ರಾಜಮನೆತನದಿಂದ ಸ್ಥಾಪಿತವಾಗಿ ನಂತರದಲ್ಲಿ ಸರ್ಕಾರಗಳ ಸ್ವಾಮ್ಯದಲ್ಲಿರುವ ಎಲ್ಲಾ ಕೈಗಾರಿಕೆಗಳ ಪುನಶ್ಚೇತನವಾಗಬೇಕು ಎಂದು ಒತ್ತಾಯಿಸಿದ್ದಾರೆ.



ಸ್ವಾತಂತ್ರ್ಯ ಪೂರ್ವದಲ್ಲಿ ಮೈಸೂರು ಸಂಸ್ಥಾನದಿಂದ ರಾಜ್ಯದ ವಿವಿಧೆಡೆ ಹಲವು ಕೈಗಾರಿಕೋದ್ಯಮ ಸ್ಥಾಪಿಸಿದ್ದಾರೆ. ಅವುಗಳಲ್ಲಿ 1940ರಲ್ಲಿ ಬೆಂಗಳೂರಿನಲ್ಲಿ ಸ್ಥಾಪಿಸಿರುವ ಹೆಚ್‌ಎಎಲ್ ಪ್ರಮುಖವಾದುದು. ಆದರೆ ಇದನ್ನು ಆಂಧ್ರಪ್ರದೇಶಕ್ಕೆ ಸ್ಥಳಾಂತರಿಸುವ ಚಿತಾವಣೆ ನಡೆದಿದೆ. ಸಂಸ್ಥೆಯನ್ನು ಕರ್ನಾಟಕದಲ್ಲಿಯೇ ಉಳಿಸಿಕೊಳ್ಳುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕಾದ ರಾಜ್ಯ ಸರ್ಕಾರ, ಅನಗತ್ಯವಾಗಿ ಕೇಂದ್ರ ಸರ್ಕಾರದ ಮೇಲೆ ಗೂಬೆ ಕೂರಿಸುತ್ತಿದೆ ಎಂದು ಆರೋಪಿಸಿದ್ದಾರೆ.

ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಸಿದ್ಧವಾಗಿರುವ ರೇಷ್ಮೆ ಕಾರ್ಖಾನೆ, ಗಂಧದ ಎಣ್ಣೆ ಕಾರ್ಖಾನೆ, ಮೈಸೂರು ಸ್ಯಾಂಡಲ್ ಸೋಪ್ ಕಾರ್ಖಾನೆ, ವಿಶ್ವೇಶ್ವರಯ್ಯ ಉಕ್ಕು ಮತ್ತು ಕಬ್ಬಿಣ ಕಾರ್ಖಾನೆ, ಕೋಲಾರ ಚಿನ್ನದ ಗಣಿ, ಭದ್ರಾವತಿ ಸಿಮೆಂಟ್ ಕಾರ್ಖಾನೆ, ಮೈಸೂರು ಪೇಪರ್ ಮಿಲ್ ಸೇರಿದಂತೆ ಅನೇಕ ಉದ್ಯಮಗಳು ಮೈಸೂರು ಮಹಾರಾಜರ ಕೊಡುಗೆಗಳಾಗಿವೆ. ಆದರೆ ಸಮರ್ಪಕ ನಿರ್ವಹಣೆಯಿಲ್ಲದ ಕಾರಣ ಪ್ರತಿಷ್ಠಿತ ಉದ್ಯಮಗಳು ಅವಸಾನದತ್ತ ಸಾಗಿವೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ರಾಜ್ಯ ಸರ್ಕಾರವು ಈ ಕಾರ್ಖಾನೆಗಳ ಪುನಶ್ಚೇತನಕ್ಕೆ ಅಗತ್ಯ ಕ್ರಮ ಕೈಗೊಳ್ಳುವುದನ್ನು ಬಿಟ್ಟು, ಅನಗತ್ಯ ವಿವಾದ ಸೃಷ್ಟಿಸುತ್ತಿದೆ. ಮೈಸೂರು ಸ್ಯಾಂಡಲ್ ಸೋಪ್ ಪ್ರಚಾರಕ್ಕೆ ಅನ್ಯಭಾಷೆಯ ನಟಿಗೆ 6 ಕೋಟಿ ರೂ. ಸಂಭಾವನೆ ನೀಡುವ ನೆಪದಲ್ಲಿ ಕಮೀಷನ್ ಕಬಳಿಸಲು ಪ್ರಯತ್ನ ನಡೆದಿದೆ. ಹೀಗಾದರೆ ಉದ್ಯಮಗಳ ಪ್ರಗತಿ ಹೇಗೆ ಸಾಧ್ಯ ಎಂದು ಪ್ರಶ್ನಿಸಿದ್ದಾರೆ.

ಗೃಹರಕ್ಷಕ ದಳ ಪೊಲೀಸ್ ಇಲಾಖೆಗೆ ಪೂರಕ ಬಲವಾಗಿದೆ

ಮೂಲ ತರಬೇತಿ ಶಿಬಿರದಲ್ಲಿ ಡಿವೈಎಸ್‌ಪಿ ವೀರಣ್ಣ ಅಭಿಮತ



ಗೃಹ ರಕ್ಷಕರ ಮೂಲ ತರಬೇತಿ ಶಿಬಿರದಲ್ಲಿ ತರಬೇತಿ ಪ್ರಮಾಣ ಪತ್ರಗಳನ್ನು ಡಿಎಆರ್ ಡಿವೈಎಸ್‌ಪಿ ವೀರಣ್ಣ ವಿತರಣೆ ಮಾಡಿದರು.

ಮೈಸೂರು, ಮೇ 29(ಎಂಕೆ)– ಗೃಹರಕ್ಷಕ ದಳ ಪೊಲೀಸ್ ಇಲಾಖೆಗೆ ಪೂರಕ, ಪ್ರೇರಕ ಮತ್ತು ಸಹಾಯಕವಾಗುವ ಮೂಲಕ ಬಲ ನೀಡಲಿದೆ ಎಂದು ಜಿಲ್ಲಾ ಸಶಸ್ತ್ರ ಮೀಸಲು ಪಡೆ (ಡಿಎಆರ್) ಡಿವೈಎಸ್ಪಿ ವೀರಣ್ಣ ಹೇಳಿದರು.

ಮೈಸೂರಿನ ಜ್ಯೋತಿನಗರದ ಡಿಎಆರ್ ಸಮುದಾಯ ಭವನದಲ್ಲಿ ಮೈಸೂರು ಜಿಲ್ಲಾ ಗೃಹರಕ್ಷಕ ದಳದ ವತಿಯಿಂದ ಆಯೋಜಿಸಿದ್ದ ಹತ್ತು ದಿನಗಳ ಗೃಹ ರಕ್ಷಕರ ಮೂಲ ತರಬೇತಿ ಶಿಬಿರ–2025 ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಪೊಲೀಸರೊಟ್ಟಿಗೆ ಸಹಾಯಕರಾಗಿ ನಾಡನ್ನು, ದೇಶವನ್ನು ಕಟ್ಟಲು ಕೈಜೋಡಿಸಿ ಎಂದು ಕರೆ ನೀಡಿದರು.


ಮೂರು ತಿಂಗಳ ಹಿಂದೆ ಸಾಮಾನ್ಯ ಪ್ರಜೆಗಳಾಗಿದ್ದ ನೀವು ಗೃಹರಕ್ಷಕ ದಳಕ್ಕೆ ಸೇರುವ ಮೂಲಕ ಪೊಲೀಸರಂತೆ ಸಮವಸ್ತ್ರ ಧರಿಸುವ ಅವಕಾಶ ಲಭಿಸಿದೆ. ಈ ಅವಕಾಶವನ್ನು ಸದ್ಬಳಕೆ ಮಾಡಿಕೊಂಡು ಸಮಾಜ ಸೇವೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದು ಕಿವಿ ಮಾತು ಹೇಳಿದರು.

ತರಬೇತಿ ಪಡೆದ ಗೃಹರಕ್ಷಕ ದಳ ಆಯ್ಕೆಯಲ್ಲಿ ಪಾರದರ್ಶಕತೆಯಿಂದ ಅನಿವಾರ್ಯತೆ ಹಾಗೂ ಅರ್ಹತೆ ಇದ್ದವರನ್ನು ಆಯ್ಕೆ ಮಾಡಿದ್ದೇವೆ. ಸಮಾಜದ ಮುಖ್ಯವಾಹಿನಿಗೆ ಸಾಧ್ಯವಾದಷ್ಟು ತರಬೇತಿ ನೀಡಿದ್ದೇವೆ. ಸಾಕಷ್ಟು ಪೈಪೋಟಿ ಇದ್ದು, ಜನರಿಗೆ ಅವಕಾಶಗಳೇ ಸಿಗಲ್ಲ. ಅಂತಹದರಲ್ಲಿ ಆಯ್ಕೆಯಾಗಿ ಸಮವಸ್ತ್ರ ಧರಿಸುವ ನಿಮ್ಮ ಕನಸು ಈಡೇರಿದ್ದು, ಈ ಅವಕಾಶವನ್ನು ಸದ್ಬಳಕೆ ಮಾಡಿಕೊಳ್ಳಿ ಎಂದು ತಿಳಿಹೇಳಿದರು.

ಜಿಲ್ಲಾ ಕಮಾಂಡೆಂಟ್ ಡಾ.ಎಂ.ಕಾಂತರಾಜು ಮಾತನಾಡಿ, ಗೃಹರಕ್ಷಕ ದಳಕ್ಕೆ 204 ಮಂದಿ ಆಯ್ಕೆಯಾಗಿದ್ದು, ತರಬೇತಿಗೆ 177 ಮಂದಿ ಹಾಜರಾದ ಹಿನ್ನೆಲೆಯಲ್ಲಿ ಅವರಿಗೆ 10 ದಿನಗಳ ಕಾಲ ಮೂಲ ತರಬೇತಿ ನೀಡಲಾಗಿದೆ. ಗೃಹ ರಕ್ಷಕ ದಳದ ಸಿಬ್ಬಂದಿ ಪೊಲೀಸ್ ಇಲಾಖೆಯೊಂದಿಗೆ ಸರಕಾರದ 57 ಇಲಾಖೆಗಳಲ್ಲಿ ಕಾರ್ಯ ನಿರ್ವಹಿಸುವ ಅವಕಾಶ ಸಿಗಲಿದ್ದು, ಈ ಮೂಲಕ ಸರಕಾರದೊಂದಿಗೆ ಸಮಾಜ ಸೇವೆ ಕೂಡ ಮಾಡಬಹುದು. ಸಮರ್ಪಣಾ ಮನೋಭಾವದಿಂದ ಕಾರ್ಯ ನಿರ್ವಹಿಸಲು ಗೃಹ ರಕ್ಷಕ ದಳ ಉತ್ತಮ ವೇದಿಕೆಯಾಗಿದೆ ಎಂದರು.

ಹೆಚ್‌ಎಎಲ್ ಸ್ಥಳಾಂತರ ಕೇಳಿಲ್ಲ; ವಿಸ್ತರಿತ ಘಟಕ ಸ್ಥಾಪನೆಗೆ ಬೇಡಿಕೆ ಇಟ್ಟಿದ್ದೇವೆ

ಕರ್ನಾಟಕ ತೀಕ್ಷ್ಣ ಪ್ರತಿಕ್ರಿಯೆ ಬೆನ್ನಲ್ಲೇ ಆಂಧ್ರ ಸಿಎಂ ಚಂದ್ರಬಾಬು ನಾಯ್ಡು ಸ್ಪಷ್ಟನೆ!




ಅಮರಾವತಿ, ಮೇ 29– ಬೆಂಗಳೂರಿನ ಹೆಚ್‌ಎಎಲ್ ಯುದ್ಧ ವಿಮಾನ ನಿರ್ಮಾಣ ಘಟಕವನ್ನು ತಮ್ಮ ರಾಜ್ಯಕ್ಕೆ ಕೊಂಡೊಯ್ಯಲು ಆಂಧ್ರ ಸರ್ಕಾರ ದೆಹಲಿ ಮಟ್ಟದಲ್ಲಿ ಭಾರಿ ಲಾಬಿ ನಡೆಸಿದೆ ಎಂಬ ವರದಿಗೆ ಕರ್ನಾಟಕದಲ್ಲಿ ಭಾರಿ ಆಕ್ರೋಶ ವ್ಯಕ್ತವಾದ ಬೆನ್ನಲ್ಲೇ ಅಂತಹ ಯಾವುದೇ ಯತ್ನ ನಡೆದಿಲ್ಲ ಎಂದು ಸ್ವತಃ ಆಂಧ್ರಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಸ್ಪಷ್ಟಪಡಿಸಿದ್ದಾರೆ.

ಅಮರಾವತಿಯಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಮಾತನಾಡಿರುವ ಅವರು, ಬೆಂಗಳೂರಿನಲ್ಲಿರುವ ಹೆಚ್‌ಎಎಲ್ ಅನ್ನು ಆಂಧ್ರಪ್ರದೇಶಕ್ಕೆ ಸ್ಥಳಾಂತರಿಸಲು ನಾನು ಕೇಳಿಲ್ಲ. ಇದು ಒಂದು ಬೃಹತ್, ಕಾರ್ಯತಂತ್ರದ ಸೌಲಭ್ಯ, ಅಂತಹ ಸಂಸ್ಥೆಗಳನ್ನು ಸ್ಥಳಾಂತರಿಸಲು ಸಾಧ್ಯವಿಲ್ಲ ಹಾಗೂ ಸ್ಥಳಾಂತರಿಸಲೂಬಾರದು. ನಾನು ಯಾವುದೇ ಯೋಜನೆಯನ್ನು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಸ್ಥಳಾಂತರಿಸಲು ಎಂದಿಗೂ ಪ್ರಯತ್ನಿಸಿಲ್ಲ, ಅಂತಹ ಕಲ್ಪನೆ ನನ್ನ ಇತಿಹಾಸದ ಭಾಗವಲ್ಲ ಎಂದರು. ಕೇಂದ್ರಕ್ಕೆ ನಮ್ಮ ವಿನಂತಿಯು ಆಂಧ್ರಪ್ರದೇಶದಲ್ಲಿ ರಕ್ಷಣಾ ಉತ್ಪಾದನಾ ಕೇಂದ್ರವನ್ನು ಸ್ಥಾಪಿಸುವುದು ಮಾತ್ರವೇ ಆಗಿತ್ತು. ಇತರ ರಾಜ್ಯಗಳಿಂದ ಅಸ್ತಿತ್ವದಲ್ಲಿರುವ ಸೌಲಭ್ಯಗಳನ್ನು ಸ್ಥಳಾಂತರಿಸುವುದು ಅಲ್ಲ ಎಂದು ಸ್ಪಷ್ಟಪಡಿಸಿದರು.

ಸರಣಿ ಹತ್ಯೆಗಳು, ಕೋಮು ಸಂಘರ್ಷದ ಹಿನ್ನೆಲೆ

ದಕ್ಷಿಣ ಕನ್ನಡದ ಹಿರಿಯ ಐಪಿಎಸ್ ಅಧಿಕಾರಿಗಳ ಎತ್ತಂಗಡಿ

ಬೆಂಗಳೂರು, ಮೇ 29– ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆದ ಸರಣಿ ಕೊಲೆ, ಕೋಮು ಸಂಘರ್ಷಗಳ ಬಳಿಕ ಕೊನೆಗೂ ರಾಜ್ಯ ಸರಕಾರ ಎಚ್ಚೆತ್ತುಕೊಂಡಿದೆ. ಮಂಗಳೂರು ನಗರ ಪೊಲೀಸ್ ಆಯುಕ್ತರು ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯನ್ನು ವರ್ಗಾವಣೆ ಮಾಡಿ ಗುರುವಾರ ಆದೇಶ ಹೊರಡಿಸಿದೆ.



ಅನುಪಮ್

ಭಾರೀ ಆರೋಪ ಎದುರಿಸುತ್ತಿದ್ದ ಹಾಗೂ ಹಲವು ಸ್ಥಳೀಯ ಸಂಘಟನೆಗಳ ಕೆಂಗಣ್ಣಿಗೂ ಗುರಿಯಾಗಿದ್ದ ಮಂಗಳೂರು ನಗರ ಪೊಲೀಸ್ ಆಯುಕ್ತ, 2008ನೇ ಬ್ಯಾಚ್‌ನ ಐಪಿಎಸ್ ಅಧಿಕಾರಿ ಅನುಪಮ್ ಅಗರವಾಲ್ ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಆರ್ಥಿಕ ಅಪರಾಧಗಳು, ಅಪರಾಧ ತನಿಖಾ ಇಲಾಖೆ ಡಿಐಜಿ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ. ಈ ಹುದ್ದೆಯಲ್ಲಿದ್ದ ವಂಶಿ ಕೃಷ್ಣ ಅವರಿಗೆ ಜವಾಬ್ದಾರಿಯಿಂದ ಬಿಡುಗಡೆ ನೀಡಲಾಗಿದೆ.

ಮಂಗಳೂರು ನಗರ ಪೊಲೀಸ್ ಆಯುಕ್ತರನ್ನಾಗಿ ಗುಪ್ತಚರ ವಿಭಾಗದ ಡಿಐಜಿ ಸುಧೀರ್ ಕುಮಾರ್ ರೆಡ್ಡಿ ಅವರನ್ನು ನೇಮಕ ಮಾಡಲಾಗಿದೆ. ಇವರು 2010ನೇ ಬ್ಯಾಚ್‌ನ ಐಪಿಎಸ್ ಅಧಿಕಾರಿಯಾಗಿದ್ದಾರೆ.

ಅದೇ ರೀತಿ ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿದ್ದ ಎನ್.ಯತೀಶ್ ಅವರನ್ನು ವರ್ಗಾವಣೆ ಮಾಡಲಾಗಿದೆ. ಅವರ ಜಾಗಕ್ಕೆ ಉಡುಪಿ ಎಸ್‌ಪಿ ಡಾ.ಅರುಣ್ ಕೆ ಅವರನ್ನು ನಿಯೋಜಿಸಲಾಗಿದೆ. ಇವರು 2014ರ ಬ್ಯಾಚ್‌ನ ಐಪಿಎಸ್ ಅಧಿಕಾರಿಯಾಗಿದ್ದಾರೆ.

ಅರುಣ್ ಅವರಿಂದ ಖಾಲಿಯಾಗಿರುವ ಉಡುಪಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹುದ್ದೆಗೆ ಗುಪ್ತಚರ ದಳದ ಎಸ್‌ಪಿ, 2017ನೇ ಬ್ಯಾಚ್‌ನ ಪೊಲೀಸ್ ಅಧಿಕಾರಿ ಹರಿರಾಮ್ ಶಂಕರ್ ಅವರನ್ನು ವರ್ಗಾಯಿಸಲಾಗಿದೆ. ಕುಡುಪು ಎಂಬಲ್ಲಿ ಅಶ್ರಫ್ ಕೊಲೆ ಪ್ರಕರಣ ನಿರ್ವಹಣೆಯಲ್ಲಿ ಪೊಲೀಸ್ ಇಲಾಖೆಯ ವೈಫಲ್ಯ, ಬಜಪೆಯಲ್ಲಿ ಸುಹಾಸ್ ಶೆಟ್ಟಿ ಕೊಲೆ ನಂತರ ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಪೊಲೀಸ್ ಇಲಾಖೆ ವೈಫಲ್ಯ ಕಂಡಿತ್ತು ಎಂಬ ಆರೋಪ ಕೇಳಿ ಬಂದಿತ್ತು. ಕಾಂಗ್ರೆಸಿಗರಿಂದ ಪಕ್ಷಕ್ಕೆ ರಾಜೀನಾಮೆ ಪರ್ವ ಆರಂಭವಾಗಿತ್ತು. ಈ ಹಿನ್ನೆಲೆಯಲ್ಲಿ ಬೆಳಗಿನಿಂದ ಸಭೆಗಳ ಹಿಂದೆ ಸಭೆಗಳು ನಡೆದು, ಸಂಜೆ ಅಧಿಕಾರಿಗಳ ತಲೆದಂಡವಾಗಿದೆ.

ಬೆಳಗಾವಿ ಪೊಲೀಸ್ ಆಯುಕ್ತರನ್ನೂ ವರ್ಗಾವಣೆ ಮಾಡಿದ ಸರಕಾರ: ಮಂಗಳೂರಿನ ಜೊತೆ ಬೆಳಗಾವಿ ನಗರ ಪೊಲೀಸ್ ಆಯುಕ್ತ ಯಡಾ ಮಾರ್ಟಿನ್ ಮಾರ್ಬಾನ್ಯಾಂಗ್ ಅವರನ್ನೂ ವರ್ಗಾವಣೆ ಮಾಡಲಾಗಿದೆ. ಇವರ ಜಾಗಕ್ಕೆ ಸೈಬರ್ ಅಪರಾಧ ಮತ್ತು ಮಾದಕ ದ್ರವ್ಯ, ಕ್ರಿಮಿನಲ್ ಇನ್ವೆಸ್ಟಿಗೇಷನ್ ವಿಭಾಗದ ಡಿಐಜಿ ಬೊರಸೆ ಭೂಷಣ್ ಗುಲಾಬ್ರಾವ್ ಅವರನ್ನು ಕರೆ ತರಲಾಗಿದೆ. ಇವರು 2009ನೇ ಬ್ಯಾಚ್‌ನ ಐಪಿಎಸ್ ಅಧಿಕಾರಿಯಾಗಿದ್ದಾರೆ.

ವಿಶೇಷ ಕಾರ್ಯಪಡೆ ರಚನೆ: ಇದಲ್ಲದೆ ಕರಾವಳಿ ಭಾಗದಲ್ಲಿ ಹೆಚ್ಚುತ್ತಿರುವ ಕೋಮು ಹಿಂಸಾಚಾರ ತಡೆ ಪ್ರಯತ್ನವಾಗಿ ಹೊಸದಾಗಿ ವಿಶೇಷ ಕಾರ್ಯಪಡೆಯನ್ನು (ಸ್ಪೆಷಲ್ ಆಕ್ಷನ್ ಫೋರ್ಸ್–ಎಸ್‌ಎಎಫ್) ರಚಿಸಿ ರಾಜ್ಯ ಸರಕಾರ ಗುರುವಾರ ಆದೇಶ ಹೊರಡಿಸಿದೆ. ಸದ್ಯದ ರಾಜ್ಯ ನಕ್ಸಲ್ ನಿಗ್ರಹ ಪಡೆಯಲ್ಲಿನ ಒಟ್ಟು 656 ಹುದ್ದೆಗಳಲ್ಲಿ 248 ಹುದ್ದೆಗಳನ್ನು ಬೇರ್ಪಡಿಸಿ ಈ ವಿಶೇಷ ಕಾರ್ಯಪಡೆಯನ್ನು ರಚಿಸಲಾಗಿದೆ. ಡಿಐಜಿಪಿ ನೇತೃತ್ವದ ಈ ಕಾರ್ಯಪಡೆ ಉಡುಪಿ, ದಕ್ಷಿಣ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ತಲಾ ಒಂದೊಂದು ತುಕಡಿಗಳನ್ನು ಹೊಂದಿರಲಿದ್ದು, ವಲಯ ಐಜಿಪಿ ನಿಯಂತ್ರಣದಲ್ಲಿ ವಿಶೇಷ ಕಾರ್ಯಪಡೆ ಕಾರ್ಯ ನಿರ್ವಹಿಸಲಿದೆ.

ಬೆಂಗಳೂರು ಫೋರ್ಟೀಸ್ ಆಸ್ಪತ್ರೆಯಲ್ಲಿ ಅತ್ಯಂತ ಸವಾಲಿನ ಶಸ್ತ್ರಚಿಕಿತ್ಸೆ

ಮೂರ್ಛೆ ರೋಗದಿಂದ ಯೆಮನ್ ದೇಶದ ಯುವಕ ಮುಕ್ತ



ಬೆಂಗಳೂರು, ಮೇ 29– ಇಲ್ಲಿನ ಬನ್ನೇರುಘಟ್ಟ ರಸ್ತೆಯ ಫೋರ್ಟಿಸ್ ಆಸ್ಪತ್ರೆಯಲ್ಲಿ ಡೀಪ್ ಬ್ರೈನ್ ಸ್ಟಿಮ್ಯುಲೇಶನ್(ಡಿಬಿಎಸ್) ಶಸ್ತ್ರಚಿಕಿತ್ಸೆ ಮೂಲಕ ಅನಿಯಂತ್ರಿತ ಮೂರ್ಛೆ ರೋಗದಿಂದ ಬಳಲುತ್ತಿದ್ದ ವಿದೇಶಿ ಯುವಕನನ್ನು ಗುಣಪಡಿಸಲಾಗಿದೆ. ರಾಜ್ಯದಲ್ಲೇ ಮೊದಲಿಗೆ ಈ ವಿಶೇಷ ಶಸ್ತ್ರಚಿಕಿತ್ಸೆ ನಡೆಸಲಾಗಿದೆ ಎಂದು ಆಸ್ಪತ್ರೆಯ ಪ್ರಕಟಣೆ ತಿಳಿಸಿದೆ.

ಯೆಮನ್ ಮೂಲದ 21 ವರ್ಷದ ಯುವಕ, 12 ವರ್ಷಗಳಿಂದ ಅನಿಯಂತ್ರಿತ ಮೂರ್ಛೆ ರೋಗದಿಂದ ಬಳಲುತ್ತಿದ್ದ. ಸ್ನಾಯು ಚಲನೆ ಹಾಗೂ ನಡುಕದಿಂದ ದೈನಂದಿನ ಜೀವನ ಸವಾಲಾಗಿತ್ತು. ಔಷಧಿಗಳನ್ನು ತೆಗೆದುಕೊಳ್ಳುತ್ತಿದ್ದರೂ ಆರೋಗ್ಯ ಸುಧಾರಣೆಯಾಗಿರಲಿಲ್ಲ. ಇದರಿಂದ ದೈಹಿಕ ದುರ್ಬಲತೆ ಹಾಗೂ ಮಾನಸಿಕ ಖಿನ್ನತೆಗೆ ಒಳಗಾಗಿದ್ದ.

ಈತ ಬನ್ನೇರುಘಟ್ಟ ರಸ್ತೆಯ ಫೋರ್ಟಿಸ್ ಆಸ್ಪತ್ರೆಗೆ ದಾಖಲಾದ ಕೂಡಲೇ ರೋಗಿಯ ಸ್ಥಿತಿಯನ್ನು ಸೂಕ್ಷ್ಮವಾಗಿ ಮೌಲ್ಯಮಾಪನ ಮಾಡಿ, ವಿಶೇಷ ಎಂಆರ್‌ಐ ಹಾಗೂ ಸಿಟಿ ಸ್ಕ್ಯಾನ್ ಮೂಲಕ ಪರೀಕ್ಷಿಸಿ, ಮೆದುಳಿನ ಬಹುಭಾಗದಲ್ಲಿ ಅಸಹಜ ಎಲೆಕ್ಟ್ರಿಕಲ್ ಚಟುವಟಿಕೆಯನ್ನು ಪತ್ತೆ ಹಚ್ಚಿದರು. ಬಳಿಕ ನರ ಶಸ್ತ್ರಚಿಕಿತ್ಸೆಯ ಹೆಚ್ಚುವರಿ ನಿರ್ದೇಶಕ ಡಾ.ರಘುರಾಮ್ ಜಿ, ಹಾಗೂ ನರವಿಜ್ಞಾನದ ಹೆಚ್ಚುವರಿ ನಿರ್ದೇಶಕ ಡಾ.ಗುರುಪ್ರಸಾದ್ ಹೊಸೂರ್ಕರ್ ನೇತೃತ್ವದ ತಜ್ಞ ವೈದ್ಯರ ತಂಡ ಶಸ್ತ್ರಚಿಕಿತ್ಸೆ ನಡೆಸಿತು. ನವೀನ ನರಶಸ್ತ್ರಚಿಕಿತ್ಸಾ ವಿಧಾನದ ಮೂಲಕ ರೋಗಿಯ ಆಳವಾದ ಮೆದುಳಿನ ಪ್ರಚೋದನೆ ಹಾಗೂ ಅಸಹಜ ಮೆದುಳಿನ ಸಂಕೇತಗಳನ್ನು ನಿಯಂತ್ರಿಸುವಲ್ಲಿ ಯಶಸ್ವಿ ಆಯಿತು. ನಾಲ್ಕು ದಿನಗಳಲ್ಲೇ ರೋಗಿಯು ಆಸ್ಪತ್ರೆಯಿಂದ ಬಿಡುಗಡೆಗೊಂಡು ಚೇತರಿಸಿಕೊಳ್ಳುತ್ತಿದ್ದಾರೆ.

ನಿಖರ ಕಾರ್ಯವಿಧಾನ: ಆಳವಾದ ಮೆದುಳಿನ ಪ್ರಚೋದನೆಯು ನಿಖರ ಹಾಗೂ ಸೂಕ್ಷ್ಮ ಕಾರ್ಯ ವಿಧಾನವಾಗಿದೆ. ಮೆದುಳಿನ ಸ್ಕ್ಯಾನ್ ಮತ್ತು ಕಂಪ್ಯೂಟರ್ ಸಿಮ್ಯುಲೇಶನ್‌ಗಳನ್ನು ಬಳಸಿಕೊಂಡು ಕಾರ್ಯವಿಧಾನ ಯೋಜಿಸಿದೆವು. ತೆಳುವಾದ ತಂತಿ(ವಿದ್ಯುದ್ವಾರಗಳು) ಗಳನ್ನು ಮೆದುಳಿನ ಆಳವಾದ ಸೆಂಟ್ರೋ ಮೆಡಿಯನ್ ನ್ಯೂಕ್ಲಿಯಸ್ ಪ್ರದೇಶದಲ್ಲಿದಲ್ಲಿಡಲಾಯಿತು. ನಂತರ ತಂತಿಗಳನ್ನು ಸಣ್ಣ ಬ್ಯಾಟರಿ ಚಾಲಿತ ಸಾಧನಕ್ಕೆ ಸಂಪರ್ಕಿಸಿ, ಫೇಸ್‌ಮೇಕರ್ ನಂತೆ ಎದೆಯ ಚರ್ಮದ ಕೆಳಗಿಡಲಾಯಿತು. ಈ ಮೂಲಕ ಅಸಹಜ ಮೆದುಳಿನ ಚಟುವಟಿಕೆ ತಡೆಯುವ ಸೌಮ್ಯವಾದ ವಿದ್ಯುತ್ ಸಂಕೇತಗಳನ್ನು ಕಳುಹಿಸಲಾಯಿತು. ಶಸ್ತ್ರಚಿಕಿತ್ಸೆ ನಡೆದ ಮರುದಿನವೇ ರೋಗಿ ನಡೆಯಲಾರಂಭಿಸಿದ್ದು, ಯಾವುದೇ ಅಸಹಜ ಸೆಳೆತವಿಲ್ಲದೆ ಚೇತರಿಸಿಕೊಳ್ಳುತ್ತಿದ್ದಾರೆ ಎಂದು ಡಾ.ರಘುರಾಮ್ ಹಾಗೂ ಡಾ.ಗುರುಪ್ರಸಾದ್ ಹೊಸೂರ್ಕರ್ ತಿಳಿಸಿದ್ದಾರೆ.

ಈ ಯಶಸ್ವಿ ಶಸ್ತ್ರಚಿಕಿತ್ಸೆ ಬಗ್ಗೆ ಹೆಮ್ಮೆ ಪಡುತ್ತೇವೆ. ವೈದ್ಯ ತಂಡದ ಚಿಕಿತ್ಸೆ ಹಾಗೂ ಸಹಾನುಭೂತಿಯ ಆರೈಕೆ, ರೋಗಿಯ ಜೀವನವನ್ನು ಹೇಗೆ ಪರಿವರ್ತಿಸುತ್ತದೆ ಎಂಬುದಕ್ಕೆ ಈ ಪ್ರಕರಣ ಸಾಕ್ಷಿಯಾಗಿದೆ ಎಂದು ಫೋರ್ಟಿಸ್ ಆಸ್ಪತ್ರೆಗಳ ಬೆಂಗಳೂರು ಬಿಸಿನೆಸ್ ಹೆಡ್ ಅಕ್ಷಯ್ ಒಲೆಟಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ನಕ್ಕರೆ ಅದೇ ಸ್ವರ್ಗ

ತಿಮ್ಮ (ಇಂಗ್ಲಿಷ್ ಮಾಸ್ತರರಿಗೆ) : ಸರ್ 'ನಟುರ್' ಅಂದ್ರೆ ಏನು? ಮಾಸ್ತರ್ ಬಹಳ ತಲೆ ಕೆಡಿಸಿಕೊಂಡರು. ನಿಘಂಟು ಹುಡುಕಿದರು, ತಮ್ಮ ಸ್ನೇಹಿತರನ್ನೆಲ್ಲ ಕೇಳಿದರೂ ಅವರಿಗೆ ತಿಳಿಯಲಿಲ್ಲ. ಒಂದು ವಾರದ ಮೇಲೆ 'ನನಗೆ ಗೊತ್ತಿಲ್ಲಪ್ಪ'. ಸ್ಪೆಲ್ಲಿಂಗ್ ಬರೆದು ಕೊಡು ಅಂದರು. ತಿಮ್ಮ Nature ಎಂದು ಬರೆದುಕೊಟ್ಟ.

ಮಾಸ್ತರ್ : ಲೇ ದಡ್ಡ. ಅದು ನೇಚರ್, ನಟುರ್ ಅಲ್ಲ. ನನ್ನ ಒಂದು ವಾರ ಹಾಳು ಮಾಡಿದೆ. ನಿನ್ನ ಕ್ಲಾಸಿಂದ ಡಿಬಾರ್ ಮಾಡ್ತೀನಿ!

ತಿಮ್ಮ : ಅಯ್ಯೋ ಬೇಡ ಸರ್. ನನ್ನ ಫುಟುರ್ (Future) ಹಾಳಾಗುತ್ತೆ !

ಮೈಸೂರು ಮಿತ್ರ
ಶುಕ್ರವಾರ, 30 ಮೇ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಎಲ್ಲರನ್ನೂ ಮೆಚ್ಚಿಸುವಂತೆ ಬದುಕುವ ಕಲೆಯನ್ನು ನೀನು ರೂಢಿಸಿಕೊಂಡ ದಿನವೇ ನಿನ್ನ ಕೊನೆಯ ದಿನವಾಗುವುದು. – ಪಿ. ಲಂಕೇಶ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹುಲಿಯ ಬಣ್ಣವನ್ನು ಮೆಚ್ಚಿ, ನರಿ ತನ್ನ ಕೂದಲನ್ನು ಭಸ್ಮ ಮಾಡಿಕೊಂಡಂತೆ.

ನಿಮ್ಮ ಪತ್ರಗಳು

■ ಆರ್‌ಟಿಓ ಕಚೇರಿಯಲ್ಲಿ ಇದ್ಯಾವ ಶುಲ್ಕ?

ಮಾನ್ಯರೆ,

ಮೈಸೂರಿನ ಪಶ್ಚಿಮ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ (ಆರ್‌ಟಿಓ)ಗೆ ನನ್ನ ಚಾಲನಾ ಪರವಾನಗಿಯ ಅರ್ಜಿಯನ್ನು ಕೌಂಟರ್ ಸಂಖ್ಯೆ 8 ರಲ್ಲಿ ಕೊಡಲು ಹೋಗಿದ್ದೆ. ಅಲ್ಲಿ ವೆಬ್ ಕ್ಯಾಮರಾದಲ್ಲಿ ಅರ್ಜಿದಾರರ ಚಿತ್ರವನ್ನೂ ತೆಗೆಯಲಾಗುತ್ತದೆ.

ಅರ್ಜಿಯನ್ನು ಕೊಟ್ಟ ನಂತರ ಕೌಂಟರಿನ ಮಹಿಳಾ ಸಿಬ್ಬಂದಿ ಇಪ್ಪತ್ತು ರೂಪಾಯಿ ಕೊಡಿ ಎಂದು ಕೇಳಿದಾಗ ಕೊಟ್ಟೆ ಆಕೆ ಆ ಇಪ್ಪತ್ತು ರೂಪಾಯಿಗೆ ರಸೀತಿಯನ್ನೇನೂ ನೀಡಲಿಲ್ಲ. ಆ ಕೌಂಟರಿಗೆ ಬಂದ ಎಲ್ಲರಿಂದಲೂ ಆಕೆ ಇಪ್ಪತ್ತು ರೂಪಾಯಿ ಪಡೆಯುತ್ತಿದ್ದರು. ನನಗೆ ತುರ್ತು ಕೆಲಸವಿದ್ದ ಕಾರಣ ನಾನು ಹಣವಿತ್ತು ಚರ್ಚೆಗೆ ನಿಲ್ಲದೇ ಹೋದೆ. ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಈ ಶುಲ್ಕ ಯಾವುದೆಂದು ಸ್ಪಷ್ಟಪಡಿಸಬೇಕು. ಅದು ಅನಧಿಕೃತವಾಗಿದ್ದರೆ ಅದನ್ನು ಲಂಚವೆಂದೇ ಪರಿಗಣಿಸಿ ಎಂಟನೇ ಕೌಂಟರಿನ ಮಹಿಳಾ ಸಿಬ್ಬಂದಿಯ ಮೇಲೆ ಕ್ರಮ ಜರುಗಿಸಲಿ.

–ಕೊ.ಸು.ನರಸಿಂಹ ಮೂರ್ತಿ, ನಿವೃತ್ತ ಸಿ.ಎಂ.ಓ, ಕಾರ್ಮಿಕ ನ್ಯಾಯಾಲಯ, ಮೈಸೂರು

■ ಆನ್‌ಲೈನ್ ನೀರಿನ ಕರ ಪಾವತಿಗೆ ಬಾಲಗ್ರಹ

ಮಾನ್ಯರೆ,

ಬಹಳ ಹೋರಾಟ ಮತ್ತು ಗ್ರಾಹಕರ ಒತ್ತಾಯದ ಮೇರೆಗೆ ಮೈಸೂರು ಮಹಾನಗರ ಪಾಲಿಕೆಯು ಕೆಲ ತಿಂಗಳುಗಳಿಂದ ನೀರಿನ ಕರವನ್ನು ಆನ್‌ಲೈನ್ ಮೂಲಕ ಪಾವತಿ ಮಾಡಿಸಿಕೊಳ್ಳಲಾಗುತ್ತಿತ್ತು. ಇದು ಬಹಳಷ್ಟು ಬಳಕೆದಾರರಿಗೆ ತ್ವರಿತವಾಗಿ ಸಂದಾಯ ಮಾಡಲು ಅನುವಾಗುವುದಲ್ಲದೇ, ಉತ್ತಮವಾಗಿತ್ತು. ಆದರೆ ಏಪ್ರಿಲ್ 2025 ಬಿಲ್ ನಂತರ, ಪ್ರಸ್ತುತ ಮೇ ಮಾಹೆಯ ಬಳಕೆಯ ಬಿಲ್ಲು ಆನ್‌ಲೈನ್‌ನಲ್ಲಿ ಪಾವತಿಯಾಗುತ್ತಿಲ್ಲ. ಇದರಿಂದಾಗಿ ಸಂಬಂಧಿಸಿದ ಪಾವತಿ ಕೌಂಟರುಗಳಿಗೆ ಅಲೆಯಬೇಕಾದ ಪರಿಸ್ಥಿತಿ ಮತ್ತೆ ಬಂದೊದಗಿದೆ. ಸುಗಮವಾಗಿ ನಡೆದುಕೊಂಡು ಹೋಗುತ್ತಿದ್ದ ಈ ವ್ಯವಸ್ಥೆಯನ್ನು ಮತ್ತೆ ಯಥಾಸ್ಥಿತಿಗೆ ತರಲು ಪಾಲಿಕೆ ಕ್ರಮ ಕೈಗೊಳ್ಳಲಿ. ಈ ಆನ್‌ಲೈನ್ ಪಾವತಿಗೆ ಪುನಃ ಬಾಲಗ್ರಹ ಹಿಡಿಯುವುದು ಬೇಡವೇ ಬೇಡ ಎಂಬುದು ಎಲ್ಲ ಬಳಕೆದಾರರ ಒಕ್ಕೊರಲಿನ ಆಶಯ ಹಾಗೂ ಒತ್ತಾಯ.

–ವಿಜಯ್ ಹೆಮ್ಮಿಗೆ, ಮೈಸೂರು

■ ಸುಡುವ ಸ್ಮಶಾನದಲ್ಲಿ ಅವ್ಯವಸ್ಥೆ



ಮಾನ್ಯರೆ,

ಸತ್ಯ ಹರಿಶ್ಚಂದ್ರ ಘಾಟ್ ಸುಡುವ ಸ್ಮಶಾನ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ಈಗಾಗಲೇ ಸಾಕಷ್ಟು ಅಭಿವೃದ್ಧಿ ಕೆಲಸಗಳು ನಡೆಯುತ್ತಿದೆ ಎಂದು ಹೇಳುತ್ತಿರುವ ನಗರಪಾಲಿಕೆ ಇಂಜಿನಿಯರ್ ಜನನ ಮರಣ ವಿಭಾಗ ಅಧಿಕಾರಿಗಳು ಕಳೆದ ತಿಂಗಳಿನಿಂದ ಹೊಸದಾಗಿ ಅನಿಲ ದ್ರವ್ಯ ಗ್ಯಾಸ್ ಬರ್ನಿಂಗ್ 500 ರೂ.ಗಳ ಹೆಚ್ಚುವರಿ ಶುಲ್ಕವನ್ನು ಪಡೆದುಕೊಳ್ಳಲು ಸೂಚಿಸಿದ್ದಾರಂತೆ. ಸ್ಮಶಾನದಲ್ಲಿ ನೀರಿನ ವ್ಯವಸ್ಥೆ, ಬೀದಿದೀಪ ನಿರ್ವಹಣೆ, day to day BGR computerized, ಸಿಸಿ ಕ್ಯಾಮೆರಾ, ಮಳೆ ನೀರು ಒಳಚರಂಡಿ ವ್ಯವಸ್ಥೆಯನ್ನೇ ನಗರಪಾಲಿಕೆ ಸರಿಪಡಿಸದಿರುವುದು ಬೇಸರದ ಸಂಗತಿ. ಮೃತರ ಪಾರ್ಥಿವ ಶರೀರ ಅಂತ್ಯ ಸಂಸ್ಕಾರ ದಹನಕ್ರಿಯೆ ಸುಡುವ ಸಂದರ್ಭದಲ್ಲಿ ಚಿತೆ ಜಾಗದ ಚಾವಣಿಯಿಂದ ಧಾರಾಕಾರವಾಗಿ ಮಳೆ ಸುರಿಯುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳನ್ನು ಕೇಳಿದರೆ ಬಜೆಟ್ ಅನುಮೋದನೆ ಟೆಂಡರ್ ಆಗಬೇಕು. ವರ್ಕ್ ಆರ್ಡರ್ ಅಂತಾರೆ! ಮಳೆ ವಿಪರೀತವಾಗಿದ್ದು, ಚಾವಣಿ ಶೀಟ್‌ಗಳು ಸಾಕಷ್ಟು ವರ್ಷದ ಹಳೆಯದ್ದು. ಈ ತರಹ ಸಮಸ್ಯೆಗಳು ಅನೇಕ ಕಡೆಯಾಗಿದ್ದು, ಪ್ರತಿಮನೆಯಿಂದ ವಾರ್ಷಿಕ ತೆರಿಗೆ 150 ರೂ.ಗಳ ಸೆಸ್ ಸ್ಮಶಾನ ಅಭಿವೃದ್ಧಿ ನಿರ್ವಹಣೆಗೆ ಸಂದಾಯ ಮಾಡಿಕೊಳ್ಳುವ ನಗರಪಾಲಿಕೆ ಸ್ಮಶಾನದಲ್ಲಿ ಸರಿಯಾದ ಮೂಲಭೂತ ವ್ಯವಸ್ಥೆಯನ್ನೇ ಒದಗಿಸದಿದ್ದರೆ ಏನು ಪ್ರಯೋಜನ. ಬೃಹತ್ ಮೈಸೂರು ಮಾಡಿ ಎನ್ನುವವರು ಮೊದಲು ಸ್ಮಶಾನ ಸರಿಪಡಿಸಿ. ಈ ಕೂಡಲೇ ನಗರಪಾಲಿಕೆ ಆಯುಕ್ತರು, ಜನನ ಮರಣ ವಿಭಾಗ ಅಧಿಕಾರಿಗಳು ಸ್ಮಶಾನಕ್ಕೆ ಭೇಟಿ ಕೊಟ್ಟು ಗಮನಹರಿಸಲಿ.

–ಅಜಯ್ ಶಾಸ್ತ್ರಿ ಮೈಸೂರು

■ ಮೈಸೂರಿಗೆ ಮತ್ತೆ 9 ಇಂದಿರಾ ಕ್ಯಾಂಟೀನ್

ಮಾನ್ಯರೆ,

ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ಮೈಸೂರು ಜಿಲ್ಲೆಯಲ್ಲಿ 9 ಇಂದಿರಾ ಕ್ಯಾಂಟೀನ್‌ಗಳನ್ನು ಉದ್ಘಾಟನೆ ಮಾಡಿರುವುದು ಶ್ಲಾಘನೀಯ. ಶ್ರಮಿಕ ವರ್ಗದ ಜನರಿಗೆ ಕಡಿಮೆ ದರದಲ್ಲಿ ತಿಂಡಿ ಮತ್ತು ಊಟ ಸಿಗಬೇಕು ಎಂಬ ಆಶಯದಿಂದ ಪ್ರಾರಂಭವಾದ ಈ ಯೋಜನೆ ತುಂಬಾ ಜನರಿಗೆ ಅನುಕೂಲವಾಗಿದೆ.ಮೈಸೂರಿನ ವಾಲ್ಮೀಕಿ ರಸ್ತೆಯಲ್ಲಿರುವ ಮಹಾರಾಣಿ ವಾಣಿಜ್ಯ ಕಾಲೇಜು ಆವರಣದಲ್ಲಿ ಇಂದಿರಾ ಕ್ಯಾಂಟೀನ್ ಅನ್ನು ಶಾಸಕ ಕೆ.ಹರೀಶ್‌ಗೌಡರು ಉದ್ಘಾಟನೆ ಮಾಡಿರುವುದು ಸ್ವಾಗತಾರ್ಹ, ಹಳ್ಳಿಗಾಡಿನ ಹೆಣ್ಣು ಮಕ್ಕಳು (ಸುಮಾರು ಮೂರು ಸಾವಿರ) ಹೆಚ್ಚಾಗಿ ವಿದ್ಯಾಭ್ಯಾಸ ಮಾಡುತ್ತಿರುವುದರಿಂದ ಅವರಿಗೆ ಕಡಿಮೆ ದರದಲ್ಲಿ ತಿಂಡಿ ಮತ್ತು ಊಟ ಸಿಗುವುದರಿಂದ ವಿದ್ಯಾಭ್ಯಾಸದ ಕಡೆಗೆ ಗಮನ ಹರಿಸಲು ಸಹಕಾರಿಯಾಗುತ್ತದೆ. ಆದರೆ ಕೆಲವು ಇಂದಿರಾ ಕ್ಯಾಂಟೀನ್‌ನಲ್ಲಿ ಗುಣಮಟ್ಟದ ಆಹಾರ ಸಿಗುತ್ತಿಲ್ಲ ಎನ್ನುವುದು ತಿಳಿದಿರುವ ಸಂಗತಿ.ಮಹಾರಾಣಿ ವಾಣಿಜ್ಯ ಕಾಲೇಜಿನಲ್ಲಿ ಇರುವ ಇಂದಿರಾ ಕ್ಯಾಂಟೀನ್‌ನಲ್ಲಿ ಗುಣಮಟ್ಟದ ಆಹಾರ ಸಿಗದಿದ್ದರೆ ಕೂಡಲೇ ವಿದ್ಯಾರ್ಥಿನಿಯರು ಕೊಗಳತೆಯಲ್ಲೇ ಇರುವ ಶಾಸಕರ ಕಚೇರಿಗೆ ತೆರಳಿ ಶಾಸಕರ ಗಮನಕ್ಕೆ ತರಬೇಕು ಎಂಬುದು ನನ್ನ ಮನವಿ.

– ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.

ಕಲಿತವರಿಂದಲೇ ಸ್ವಚ್ಛತೆ, ಸಂಚಾರಕ್ಕೆ ಕಂಟಕ!







ಆರ್. ಪ್ರಸಾದ್
ಚಿಂತಕರು
ಮೊ: 94481 89226

> ನಿರ್ದಾಕ್ಷಿಣ್ಯವಾಗಿ ತಪ್ಪುಗಳನ್ನು ಎತ್ತಿ ತೋರಿಸುವ ತಿಳುವಳಿಕೆ ಇರುವ ಜನರು ಎಲ್ಲೆಂದರಲ್ಲಿ ಕಸ ಎಸೆಯುವವರಿಗೆ, ವಾಹನ ಓಡಿಸುವಾಗ ತಪ್ಪು ಮಾಡುವವರಿಗೆ ನಾಲ್ಕು ಜನರ ಮುಂದೆ ಛೀಮಾರಿ ಹಾಕಿದರೆ ಸ್ವಲ್ಪ ಮಟ್ಟಿನ ಅರಿವು ಬರಬಹುದು. ಸಮಾಜದಲ್ಲಿ ಎಲ್ಲೆಂದರಲ್ಲಿ ಕಸ ಎಸೆಯುವುದನ್ನು, ಸಂಚಾರ ನಿಯಮಗಳ ಉಲ್ಲಂಘನೆಗಳನ್ನು ಆ ಕ್ಷಣಗಳಲ್ಲಿಯೇ ಖಂಡಿಸುವಂತಾಗಬೇಕು.

ಒಂದೆಡೆ ಬಡಾವಣೆಯ ಹೊರಭಾಗದ ರಸ್ತೆಯ ಪಕ್ಕ ಒಂದು ಐಷಾರಾಮಿ ಕಾರಿನಿಂದ ದುಬಾರಿ ಧಿರಿಸನ್ನು ಧರಿಸಿದ ವ್ಯಕ್ತಿಯೊಬ್ಬ ಇಳಿದು, ಕಾರಿನ ಡಿಕ್ಕಿಯಿಂದ ಕಸದ ದೊಡ್ಡ ಪ್ಲಾಸ್ಟಿಕ್ ಮೂಟೆಯನ್ನು ಹೊರತೆಗೆದು, ಅತ್ತಿತ್ತ ನೋಡಿ ಯಾರೂ ನೋಡುತ್ತಿಲ್ಲವೆಂದು ಖಾತರಿಪಡಿಸಿಕೊಂಡು, ಅದನ್ನು ಬಿಸಾಡಿ ಕಾರನ್ನು ಭರ್ರನೆ ಓಡಿಸಿಕೊಂಡು ಮುಂದೆ ಸಾಗಿದ ಬೆನ್ನ ಹಿಂದೆಯೇ ಅದೇ ಜಾಗಕ್ಕೆ ದ್ವಿಚಕ್ರ ವಾಹನದಲ್ಲಿ ಬಂದ ಮತ್ತೊಬ್ಬರು ಕಸ ತುಂಬಿದ ಪ್ಲಾಸ್ಟಿಕ್ ಕವರನ್ನು ಅದೇ ಜಾಗದಲ್ಲಿ ಎಸೆದು ಹೊರಟು ಹೋದ...!

ಮತ್ತೊಂದೆಡೆ ಸುಂದರವಾದ ಉದ್ಯಾನವನ. ಕಣ್ಣಾಯಿಸಿದೆಡೆ ಹಸಿರು ಹುಲ್ಲಿನ ಹಾಸು ಮಧ್ಯೆ ಸುಂದರವಾದ ಗುಲಾಬಿ ಮೊದಲಾದ ಬಣ್ಣ ಬಣ್ಣದ ಹೂ ಗಿಡಗಳು, ಮರಗಳು. ಸಾಕಷ್ಟು ಜನರ ಗುಂಪು ಅಲ್ಲಿ ನೆರೆದಿತ್ತು. ಎರಡು ಚಿಕ್ಕ ಮಕ್ಕಳೊಂದಿಗೆ ಬಂದ ದಂಪತಿ, ಮಕ್ಕಳಿಗೆ ಮರ–ಗಿಡಗಳ ಬಗ್ಗೆ ವಿವರಿಸುತ್ತಾ ಅಡ್ಡಾಡುತ್ತಿದ್ದರು. ಆಗ ಒಂದು ಮಗು ನೀರು ಬೇಕೆಂದು ಕೇಳಿದಾಗ ತಮ್ಮಲ್ಲಿದ್ದ ಬ್ಯಾಗಿನಿಂದ ನೀರಿನ ಪ್ಲಾಸ್ಟಿಕ್ ಬಾಟಲ್ ತೆಗೆದು ನೀರು ಕುಡಿಸಿ, ನಂತರ ಉಳಿದ ಸ್ವಲ್ಪ ನೀರನ್ನು ತಾವೂ ಕುಡಿದು ಖಾಲಿ ಬಾಟಲಿಯನ್ನು ಅಲ್ಲಿಯೇ ಒಂದು ಮರದಡಿಗೆ ಎಸೆದು ಮುಂದೆ ಹೋದರು...!!

ಮಗದೊಂದೆಡೆ ವಾಹನ ದಟ್ಟಣೆಯ ರಸ್ತೆ ಹಾಗೂ ಮುಂದೆ ಒಂದು ಸರ್ಕಲ್. ಕಾರಿನ ಎಡ ಪಕ್ಕದಿಂದ ಬಂದ ಒಂದು ಬೈಕ್, ಅದರಲ್ಲಿ ಮೂವರು ಕುಳಿತಿದ್ದು ಒಬ್ಬರೂ ಹೆಲ್ಮೆಟ್ ಧರಿಸಿಲ್ಲ. ವೇಗವಾಗಿ ಕಾರಿನ ಎಡಗಡೆಯಿಂದ ಓವರ್‌ಟೇಕ್ ಮಾಡಿ ರೊಯ್ಯನೇ ಸರ್ಕಲ್ಲಿನ ಬಲಗಡೆಗೆ ತಿರುಗಿ ರೆಪ್ಪೆ ತೆಗೆಯುವುದರಲ್ಲಿ ಮಾಯವಾದರು. ಕಾರಿನವ ಬೆಚ್ಚಿ ವೇಗವನ್ನು ಕಡಿಮೆ ಮಾಡಿದ.

ನಗರ ಪ್ರದೇಶಗಳಲ್ಲಿ ಇಂತಹ ಬಹಳಷ್ಟು ಪ್ರಕರಣಗಳು ಸರ್ವೆ ಸಾಮಾನ್ಯ. ಸಂಜೆ ಆಗುತ್ತಿದ್ದಂತೆ ಖಾಲಿ ಸೈಟಿನಲ್ಲಿ ಕಸದ ಮೂಟೆ ಎಸೆಯುವುದು, ದ್ವಿಚಕ್ರ ವಾಹನದಲ್ಲಿ ಸಂಚರಿಸುತ್ತ ಮೊಬೈಲಿನಲ್ಲಿ ಮಾತನಾಡುವುದು, ಮೆಸೇಜುಗಳನ್ನ ನೋಡುವುದು. ಮೇನ್ ರೋಡಿಗೆ ತಿರುಗುವಾಗ ಎಡ–ಬಲ ನೋಡದೆ ವಾಹನವನ್ನು ಮನಬಂದಂತೆ ತಿರುಗಿಸುವುದು, ಸರ್ಕಲ್‌ಗಳಲ್ಲಿ ಬಲ ಬದಿಯ ವಾಹನಗಳಿಗೆ ದಾರಿ ಕೊಡದೆ ನಾಲ್ಕು ದಿಕ್ಕುಗಳಿಂದ ಕಾರು, ಬೈಕುಗಳನ್ನು ನುಗ್ಗಿಸಿ ಯಾವ ವಾಹನವೂ ಮುಂದೆ ಹೋಗದಂತೆ ಜಾಮ್ ಮಾಡುವುದು, ವಾಹನದ ಕಿಟಕಿಯಿಂದ ಚಾಕೊಲೇಟ್ ಕವರ್ ವಗೈರೆಗಳನ್ನು ಎಸೆಯುವುದು... ಇನ್ನೂ ಮುಂತಾದುವು.

ಕಾರು, ಬೈಕುಗಳನ್ನು ಅತ್ಯಂತ ವೇಗವಾಗಿ ಓಡಿಸುವುದು ಹೆಚ್ಚಾಗುತ್ತಿದೆ. ಆಂಬುಲೆನ್ಸ್ ವಾಹನಕ್ಕಿಂತ ವೇಗವಾಗಿ ಓಡಿಸುವ ಪ್ರಮೇಯ ಅರ್ಥವಾಗುವುದಿಲ್ಲ. ಅಬ್ಬಬ್ಬಾ ಅಂದರೆ ಹತ್ತು–ಹದಿನೈದು ನಿಮಿಷ ಬೇಗ ತಲುಪಬಹುದಷ್ಟೆ. ಗ್ರಹಚಾರ ತಪ್ಪಿ, ಆಕಸ್ಮಿಕವಾಗಿ ಅಪಘಾತವಾದರೆ ಆಗುವ ತೊಂದರೆ ಹೇಳತೀರದು.. ಅನುಭವಿಸಿದವರಿಗೆ ಅದರ ಕಷ್ಟ ತಿಳಿಯುತ್ತದೆ. ವಿದ್ಯಾವಂತರೇ ಬಹುತೇಕ ಇಂಥ ತಪ್ಪುಗಳನ್ನು ಎಸಗುವುದನ್ನು ನೋಡಿ ಬೇಸರಗೊಳ್ಳುತ್ತೇವೆ. ಒಂದು ಚೂರೂ ಪೇಪರ್ ನೋಡಲು ಸಿಗದ ದುಬೈ ಅಥವಾ ಸಿಂಗಾಪೂರಿನ ರಸ್ತೆಗಳಿಗೂ, ಎಲ್ಲೆಂದರಲ್ಲಿ ಕಸದ ರಾಶಿ ದುರ್ಗಂಧ ಬೀರುವ ನಮ್ಮ ರಸ್ತೆಗಳಿಗೂ ಅಜಗಜಾಂತರ ವ್ಯತ್ಯಾಸ.

ತಿರುಮಲ ದೇವಸ್ಥಾನದ ಸುತ್ತಮುತ್ತ, ವಿಧಾನಸೌಧ, ಎಂ.ಜಿ.ರಸ್ತೆ ಮುಂತಾದ ಸ್ಥಳಗಳಲ್ಲಿ ಇರುವ ಸ್ವಚ್ಛತೆಯನ್ನು ಬೇರೆ ಕಡೆಯಲ್ಲೂ ನಾವು ಯಾಕೆ ಕಾಣಲಾಗದು? ಮನಸ್ಸಿದ್ದರೆ ಮಾರ್ಗ ಎಂಬಂತೆ ತಿರುಮಲದಲ್ಲಿ ಪ್ಲಾಸ್ಟಿಕ್‌ನ ಬಳಕೆಯನ್ನು ನಿಷೇಧಿಸಿದ ಹಾಗೆ ಬೇರೆಡೆಯೂ ಆ ಕಾನೂನುಗಳನ್ನು ಯಾಕೆ ಕಟ್ಟುನಿಟ್ಟಾಗಿ ಪಾಲಿಸಲು ನಮ್ಮಿಂದ ಆಗುತ್ತಿಲ್ಲ? ಮೇಲಿನ ಜಾಗಗಳಲ್ಲಿ ಜನರ ಓಡಾಟ ಹೆಚ್ಚಿದ್ದರೂ ಸ್ವಚ್ಛತೆಯನ್ನು ಕಾಪಾಡುವ ರೀತಿಯಲ್ಲಿ ಉಳಿದ ಕಡೆಯೂ ಯಾಕೆ ಕಾಪಾಡಲು ಆಗುತ್ತಿಲ್ಲ?

ಕಸ ವಿಲೇವಾರಿ ಹಾಗೂ ವಾಹನ ಸಂಚಾರಕ್ಕೆ ಸಂಬಂಧಪಟ್ಟ ಹಲವಾರು ನಿಯಮಗಳು ನಮ್ಮೆಲ್ಲರ ಒಳಿತಿಗಾಗಿ ಇದ್ದರೂ ಅದನ್ನು ಪಾಲಿಸದೆ ಕೆಲವು ಜನರು ಇತರರಿಗೆ ತೊಂದರೆ ಕೊಡುತ್ತಲೇ ಇರುವುದು, ಅಪಾಯ ಒಡ್ಡುತ್ತಿರುವುದು ಒಂದು ವಿಪರ್ಯಾಸ. ಕಾನೂನುಗಳ ಪಾಲನೆ ಬಗ್ಗೆ ಜನರಲ್ಲಿ ಕಾಳಜಿ ಇಲ್ಲದಿರುವುದು ಈಗಿನ ಸಮಾಜದ ಒಂದು ದೊಡ್ಡ ದುರಂತ. ವಿದ್ಯಾವಂತರಿಂದಲೇ ಅಪಚಾರವಾಗುತ್ತಿರುವುದು ಇನ್ನೂ ಬೇಸರದ ಸಂಗತಿ.

ವೈಜ್ಞಾನಿಕವಾಗಿ ಕಸ ವಿಲೇವಾರಿಯ ಜವಾಬ್ದಾರಿ ಆಯಾ ನಗರ ಅಥವಾ ಗ್ರಾಮೀಣ ಪ್ರದೇಶದ ಸ್ಥಳೀಯ ಸಂಸ್ಥೆಗಳ ಮೇಲೆ ಇದ್ದರೂ ನಾಗರಿಕರ ಸಹಕಾರ ಅತ್ಯಗತ್ಯ. ಜನರು ಪ್ರಜ್ಞಾವಂತರಾಗಿ ಎಲ್ಲೆಂದರಲ್ಲಿ ಕಸ ಎಸೆಯದೆ ನಿತ್ಯ ಬರುವ ಕಸದ ಗಾಡಿಗೆ ನೀಡಿದರೆ ಪರಿಸರ ಸ್ವಚ್ಛವಾಗಿರುವುದರಲ್ಲಿ ಸಂಶಯವಿಲ್ಲ.

ಕಸವನ್ನು ದಕ್ಷತೆಯಿಂದ ವಿಲೇವಾರಿ ಮಾಡಿ ಯಾವುದೇ ಸ್ಥಳದಲ್ಲೂ ಒಂದು ಚೂರು ಕಸ ಕಾಣದಂತೆ ಮಾಡಲು ಸರ್ಕಾರಗಳಿಗೆ ಸಾಧ್ಯವಿದೆ. ಪ್ರತಿಯೊಂದು ಮನೆಯಿಂದ ದಿನಕ್ಕೆ ಎರಡು–ಮೂರು ಬಾರಿ ಕಸ ಸಂಗ್ರಹದ ವ್ಯವಸ್ಥೆ, ಅದಕ್ಕಾಗಿ ಅಗತ್ಯವಾದ ವಾಹನಗಳ ಖರೀದಿ,ಅದರ ನಿರ್ವಹಣೆಗೆ ಹೆಚ್ಚು ನೌಕರರ ನೇಮಕಾತಿ, ಪ್ರಮುಖವಾಗಿ ಕಸ ಹಾಕುವ ಸ್ಥಳಗಳಲ್ಲಿ ಮಾರ್ಷಲ್‌ಗಳನ್ನು ನೇಮಿಸಿ ಎಲ್ಲೆಂದರಲ್ಲಿ ಕಸ ಹಾಕುವವರಿಂದ ದಂಡ ವಸೂಲಿ, ಸಿಸಿ ಕ್ಯಾಮರಾಗಳ ಬಳಕೆ, ಅತ್ಯಾಧುನಿಕ ಯಂತ್ರಗಳಿಂದ ಹಸಿ ಕಸ, ಒಣ ಕಸಗಳ ವಿಂಗಡಣೆ, ಗೊಬ್ಬರ ತಯಾರಿಕೆ ಮತ್ತು ಅವುಗಳ ಪುನರ್ಬಳಕೆ, ರಸ್ತೆಗಳಲ್ಲಿ ಕಸ ಗುಡಿಸಲು ಆಧುನಿಕ ಸ್ವಯಂಚಾಲಿತ ಟ್ರಕ್‌ಗಳ ಬಳಕೆ. ಹಿರಿಯ ಅಧಿಕಾರಿಗಳಿಂದ ನಿರಂತರ ಪರಿಶೀಲನೆ ಮುಂತಾದ ಹಲವಾರು ಕ್ರಮಗಳನ್ನು ಕೈಗೊಳ್ಳಬಹುದು.

ಆದರೆ, ಅದಕ್ಕೆ ಬೇಕಾದ ಸಂಪನ್ಮೂಲಗಳನ್ನೂ ಸರ್ಕಾರ ಕ್ರೋಢೀಕರಿಸಲು ಅಪಾರವಾದ ಹಣವನ್ನು ಮುಡುಪಾಗಿಡಬೇಕಾಗುತ್ತದೆ. ಇದೇ ರೀತಿ, ಪ್ರತಿ ಕ್ಷೇತ್ರದಲ್ಲೂ ಉದಾಹರಣೆಗೆ ಸಂಚಾರ, ವಿದ್ಯಾಭ್ಯಾಸ, ಆರೋಗ್ಯ, ರಕ್ಷಣೆ, ಉದ್ಯೋಗ ಮುಂತಾದುವುಗಳಲ್ಲಿ ನೂರಕ್ಕೆ ನೂರು ಯಶಸ್ಸನ್ನು ಪಡೆಯಬಹುದು. ಆದರೆ ಸರ್ಕಾರ ಈ ರೀತಿ ಒಂದೇ ಕ್ಷೇತ್ರದಲ್ಲಿ ತನ್ನೆಲ್ಲ ಸಂಪನ್ಮೂಲವನ್ನು ವಿನಿಯೋಗ ಮಾಡುವುದು ಸಮಂಜಸವಲ್ಲ, ಅದು ಸಾಧ್ಯವೂ ಅಲ್ಲ. ಸರ್ಕಾರ ಎಲ್ಲ ಕ್ಷೇತ್ರಗಳಿಗೂ ಪ್ರಾಮುಖ್ಯತೆ ಕೊಡಬೇಕಾಗುತ್ತದೆ. ಹೀಗಾಗಿ ಇರುವ ಸಂಪನ್ಮೂಲದಲ್ಲಿ ದಕ್ಷತೆಯಿಂದ ಕಸ ವಿಲೇವಾರಿ ಮಾಡುವ ಅವಶ್ಯಕತೆ ಇರುತ್ತದೆ.

ಕಸದ ವಾಹನದ ಸಂಗ್ರಹಣಾ ಸಮಯ ಹಾಗೂ ಕೆಲವು ನಾಗರಿಕರು ಕಸ ನೀಡುವ ಸಮಯದ ಹೊಂದಾಣಿಕೆ ಇಲ್ಲದಿರುವುದು ಜನರು ಕಸವನ್ನು ವಾಹನದವರಿಗೆ ಕೊಡದೇ ಅವೈಜ್ಞಾನಿಕವಾಗಿ ಬಿಸಾಡಲು ಕಾರಣವಾಗುತ್ತಿದೆ. ಪ್ರತಿ ದಿನ ಒಂದೇ ವಾಹನ ಮತ್ತು ಒಬ್ಬರೆ ಸಿಬ್ಬಂದಿ ಅದೇ ರಸ್ತೆಗಳಲ್ಲಿ ಕಸ ಸಂಗ್ರಹಿಸುವಾಗ ವಾಹನದ ರಿಪೇರಿ ಅಥವಾ ಸಿಬ್ಬಂದಿಗಳ ರಜೆಯ ಕಾರಣ ಗೈರುಹಾಜರಿಯಾದರೆ ಅಂತಹ ದಿನ ನಾಗರಿಕರು ಕಸವನ್ನು ಬೇರೆಡೆ ಬಿಸಾಕುತ್ತಾರೆ. ಇದಕ್ಕೆ ಪರಿಹಾರವಾಗಿ ದಿನಕ್ಕೆ ಎರಡು ಕಸದ ವಾಹನ, ಎರಡು ಬಾರಿ ಕಸ ಸಂಗ್ರಹ ಮಾಡುವಂತಾದರೆ ಅನುಕೂಲವಾಗುತ್ತದೆ.

ಇಂದೋರ್ ನಗರದ ಯೋಜನೆಯಂತೆ ನಗರದ ಪ್ರಮುಖ ಪ್ರದೇಶಗಳಲ್ಲಿ ಒಣ ಕಸ ಕೆಫೆಗಳನ್ನು ಸ್ಥಾಪಿಸಿ, ಒಂದು ಕೆಜಿ ಬಳಸಿದ ಪ್ಲಾಸ್ಟಿಕ್‌ಗಳನ್ನು ತಂದುಕೊಟ್ಟರೆ ಒಂದು ಬಿಸಿ ಊಟ ಕೊಡುಗೆಯಾಗಿ ನೀಡಬಹುದು. ಅಥವಾ ಅದಕ್ಕೆ ಕೂಪನ್ ಕೊಟ್ಟು ಇಂದಿರಾ ಕ್ಯಾಂಟೀನ್‌ಗಳಲ್ಲಿ ಬಿಸಿ ಉಪಾಹಾರ ನೀಡುವ ವ್ಯವಸ್ಥೆ ಮಾಡಬಹುದು.

ಸಿಸಿ ಕ್ಯಾಮರಾಗಳನ್ನೂ ಪ್ರತಿ ರಸ್ತೆಗಳಲ್ಲಿ ಅಳವಡಿಸಿ ಎಲ್ಲೆಂದರಲ್ಲಿ ಕಸ ಎಸೆಯುವ ತಪ್ಪಿತಸ್ಥರಿಗೆ ದಂಡ ವಸೂಲು ಮಾಡುವ ವ್ಯವಸ್ಥೆ ತರಬಹುದು. ಇದರಿಂದ ಕಳ್ಳತನ, ದರೋಡೆ, ವಾಹನ ಸಂಚಾರದ ನಿಯಮಗಳ ಉಲ್ಲಂಘನೆ ಇತ್ಯಾದಿ ಪಿಡುಗುಗಳನ್ನು ತಡೆಯಬಹುದು.

ಶಾಲೆಗಳ ಆಡಳಿತ ಮಂಡಳಿಗಳು ಪ್ರತಿ ತಿಂಗಳು ಅಥವಾ ಹದಿನೈದು ದಿನಗಳಿಗೆ ಒಮ್ಮೆ ಮಕ್ಕಳಿಗೆ ಸಮಾಜದ ಪ್ರಸಕ್ತ ಸವಾಲುಗಳ ಬಗ್ಗೆ ಉದಾಹರಣೆಗೆ ಪರಿಸರದ ನಾಶ –ಮರಗಿಡಗಳು, ಅಪಘಾತ –ಸಂಚಾರ ನಿಯಮಗಳ ಪಾಲನೆ, ಅವೈಜ್ಞಾನಿಕ ಪ್ಲಾಸ್ಟಿಕ್ ಹಾಗೂ ಕಸ ವಿಲೇವಾರಿ–ಪರಿಸರದ ಹಾನಿ, ದುಶ್ಚಟ–ಆರೋಗ್ಯ, ನದಿಗಳ ಪ್ರಾಮುಖ್ಯತೆ, ಮುಂತಾದ ವಿಷಯಗಳ ಬಗ್ಗೆ ತಜ್ಞರಿಂದ ಭಾಷಣಗಳನ್ನು ಏರ್ಪಡಿಸಿದರೆ ಮಕ್ಕಳು ಅವುಗಳ ಬಗ್ಗೆ ತಿಳುವಳಿಕೆಯನ್ನು ಪಡೆದು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಲು ಅವಕಾಶ ಸಿಗುತ್ತದೆ. ಇದಲ್ಲದೆ ಮಕ್ಕಳು, ಮನೆಯಲ್ಲಿ ಉಳಿದವರು ಸಹ ಅನುಸರಿಸಲು ಪ್ರೇರೇಪಣೆಯಾಗುತ್ತದೆ.

ಈಗಿನ ಅಂತರ್ಜಾಲ ಯುಗದಲ್ಲಿ ಪ್ರತಿಯೊಬ್ಬರೂ ಫೇಸ್‌ಬುಕ್, ಇನ್ಸ್ಟಾಗ್ರಾಮ್, ವಾಟ್ಸಪ್ ಮುಂತಾದ ಸಾಮಾಜಿಕ ಜಾಲತಾಣಗಳಲ್ಲಿ ಸದಸ್ಯರಾಗಿರುತ್ತಾರೆ. ಅಂತಹ ಗ್ರೂಪ್‌ಗಳಲ್ಲಿ ಅಡ್ಮಿನ್‌ಗಳು ಎಲ್ಲ ಸದಸ್ಯರು ಕಸ ವಿಲೇವಾರಿ, ಸಂಚಾರ ನಿಯಮ ಪಾಲನೆ ಅಲ್ಲದೇ ಇತರ ಪ್ರಮುಖ ವಿಚಾರಗಳ ಬಗ್ಗೆ ಉದಾಹರಣೆಗೆ ಮರ ನೆಡುವುದು, ಪರಿಸರ ರಕ್ಷಣೆ, ಭ್ರಷ್ಟಾಚಾರದ ವಿರುದ್ಧ ಹೋರಾಟ, ನಮ್ಮ ಸಂಸ್ಕೃತಿಯ ಅನುಕರಣೆ ಮೊದಲಾದ ಧನಾತ್ಮಕ ವಿಷಯಗಳ ಬಗ್ಗೆ ಸಂದೇಶಗಳನ್ನು ನಿರಂತರವಾಗಿ ಹಾಕುವುದಲ್ಲದೆ ಪ್ರತಿಯೊಬ್ಬರು ಈ ನಿಟ್ಟಿನಲ್ಲಿ ಶಪಥ ಕೈಗೊಳ್ಳುವಂತೆ ಮಾಡಬಹುದು.

ಮುಖ್ಯವಾದ ಮೊಹಲ್ಲಾಗಳಲ್ಲಿ ಸ್ಥಳೀಯ ಸಂಸ್ಥೆಗಳು, ಸ್ವಯಂ ಸೇವಕರ ಸಂಘಗಳು ಸಮುದಾಯ ಸ್ವಚ್ಛತೆಯ ಬಗ್ಗೆ ನಾಗರಿಕರಲ್ಲಿ ಅರಿವು ಮೂಡಿಸುವ ಸಲುವಾಗಿ ಪ್ಲಾಸ್ಟಿಕ್ ವಗೈರೆ ತ್ಯಾಜ್ಯಗಳನ್ನು ಆಯುವ ಹಾಗೂ ವಿಲೇವಾರಿ ಮಾಡುವ ಕಾರ್ಯಕ್ರಮಗಳನ್ನು ಆಗಾಗ್ಗೆ ಹಮ್ಮಿಕೊಳ್ಳುತ್ತಿರಬೇಕು. ಹೆಚ್ಚು ಹೆಚ್ಚು ಜನರನ್ನು ಆಕರ್ಷಿಸಲು ಇಂತಹ ಕಾರ್ಯಕ್ರಮಗಳಲ್ಲಿ ಸಮಾಜದ ಗಣ್ಯ ವ್ಯಕ್ತಿಗಳು ಭಾಗವಹಿಸುವಂತಾಗಬೇಕು.

ಜನರಿಂದಲೇ ಪರಿಹಾರವಿದೆ: ನಿರ್ದಾಕ್ಷಿಣ್ಯವಾಗಿ ತಪ್ಪುಗಳನ್ನು ಎತ್ತಿ ತೋರಿಸುವ ತಿಳುವಳಿಕೆಯಿರುವ ಜನರು ಎಲ್ಲೆಂದರಲ್ಲಿ ಕಸ ಎಸೆಯುವವರಿಗೆ, ವಾಹನ ಓಡಿಸುವಾಗ ತಪ್ಪು ಮಾಡುವವರಿಗೆ ನಾಲ್ಕು ಜನರ ಮುಂದೆ ಛೀಮಾರಿ ಹಾಕಿದರೆ ಸ್ವಲ್ಪ ಮಟ್ಟಿನ ಅರಿವು ಬರಬಹುದು. ಸಮಾಜದಲ್ಲಿ ಎಲ್ಲೆಂದರಲ್ಲಿ ಕಸ ಎಸೆಯುವುದನ್ನು, ಸಂಚಾರ ನಿಯಮಗಳ ಉಲ್ಲಂಘನೆಗಳನ್ನು ಆ ಕ್ಷಣಗಳಲ್ಲಿಯೇ ಖಂಡಿಸುವಂತಾಗಬೇಕು.

ಪ್ರತಿ ಮೊಹಲ್ಲಾಗಳಲ್ಲಿ ಹಸಿ ಕಸವನ್ನು ಸಾವಯವ ಗೊಬ್ಬರವಾಗಿ ಪರಿವರ್ತಿಸುವಂತಹ ಹಾಗೂ ಒಣ ಕಸಗಳ ವಿಲೇವಾರಿ ಮಾಡುವಂತಹ ಸಂಸ್ಕರಣ ಕಾರ್ಖಾನೆಗಳನ್ನು ಸ್ಥಾಪಿಸಬೇಕು. ಇದರಿಂದ ಕಸ ವಿಲೇವಾರಿಯ ಕಾರ್ಯಗಳು ವಿಕೇಂದ್ರೀಕರಣಗೊಂಡು ಸಾಗಣೆ ಮುಂತಾದ ವೆಚ್ಚಗಳನ್ನು ಕಡಿಮೆ ಮಾಡಲು ಸಹಕಾರಿಯಾಗುತ್ತದೆ. ಸಾವಯವ ರಸಗೊಬ್ಬರಕ್ಕೆ ಬಹಳ ಬೇಡಿಕೆ ಇರುವುದರಿಂದ ಇದರಿಂದ ಲಾಭ ಗಳಿಸಲು ಅವಕಾಶವಿದೆ.

ಸುಪ್ರಸಿದ್ಧ ಕಂಪನಿಗಳು ನಗರ ಪ್ರದೇಶಗಳ ಪ್ರಮುಖ ಸರ್ಕಲ್‌ಗಳನ್ನು ಸುಂದರವಾಗಿಡಲು ಸಿ.ಎಸ್.ಆರ್ (Corporate Social Responsibility) ಅಡಿಯಲ್ಲಿ ಪ್ರಾಯೋಜಿಸುವಂತೆ ಕೆಲವು ರಸ್ತೆಗಳ ನಿರ್ವಹಣೆಗೆ ಹಣಕಾಸಿನ ಸಹಕಾರವನ್ನು ನೀಡಲು ಪ್ರೇರೇಪಿಸಬೇಕು. ಇದರಿಂದ ಆ ಕಂಪನಿಗಳಿಗೆ ಜಾಹೀರಾತು ಮತ್ತು ಸರ್ಕಾರಕ್ಕೂ ಅನುಕೂಲವಾಗುತ್ತದೆ.


ಅಂತಿಮವಾಗಿ ಕಸಗಳನ್ನು ಸರಿಯಾದ ರೀತಿಯಲ್ಲಿ ವಿಲೇವಾರಿ ಮಾಡಲು ಸ್ಥಳೀಯ ಸಂಸ್ಥೆಗಳಿಗೆ ಸಹಕಾರ ನೀಡಿ ನಾವು ಜೀವಿಸುವ ಪರಿಸರವನ್ನು ಸುಂದರವಾಗಿಟ್ಟುಕೊಳ್ಳುವ ಮತ್ತು ಸಂಚಾರ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ರಸ್ತೆಗಳನ್ನು ಸುರಕ್ಷಿತ ಮಾಡುವ ಜವಾಬ್ದಾರಿ ನಾಗರಿಕರ ಮೇಲೆ ಹೆಚ್ಚಾಗಿದೆ. ನಾಗರಿಕರು ಈ ಜವಾಬ್ದಾರಿಯನ್ನು ಸರಿಯಾಗಿ ನಿಭಾಯಿಸಲು ಸರ್ಕಾರ ಸಹಾಯಹಸ್ತವನ್ನು ನೀಡಬೇಕು.

ಮುಂದಿನ ಪೀಳಿಗೆಗೆ ಸುಂದರವಾದ ಪರಿಸರವನ್ನು ಹಾಗೂ ಉತ್ತಮವಾದ ಸಮಾಜವನ್ನು ಕೊಡುವ ಜವಾಬ್ದಾರಿ ನಮ್ಮ ಮೇಲಿರುವುದರಿಂದ ಈ ನಿಟ್ಟಿನಲ್ಲಿ ನಾವೆಲ್ಲರೂ ಚಿಂತಿಸಿ ಸರಿಯಾದ ಮಾರ್ಗದಲ್ಲಿ ಕ್ರಮಿಸಬೇಕಾದ ಅನಿವಾರ್ಯತೆ ಈಗ ಹೆಚ್ಚಾಗಿದೆ.

ಮೈದುಂಬಿದ ಕಾವೇರಿ ಧನುಷ್ಕೋಟಿ ಜಲಪಾತ ಭೋರ್ಗರೆತ

● ಪ್ರವಾಸಿಗರ ದಂಡೇ ಹರಿದು ಬರುತ್ತಿದೆ ● 2006ರ ನಂತರ ಮೇ ತಿಂಗಳಲ್ಲಿ ಕಾವೇರಿ ನದಿಯಲ್ಲಿ ಅಧಿಕ ಪ್ರಮಾಣದ ನೀರು ಹರಿವು





ಚುಂಚನಕಟ್ಟೆ ಧನುಷ್ಕೋಟಿ ಜಲಪಾತ ಭೋರ್ಗರೆಯುತ್ತಿರುವುದು. ಜಲಪಾತ ವೀಕ್ಷಣೆಗಾಗಿ ಆಗಮಿಸಿರುವ ಪ್ರವಾಸಿಗರು. ಚಿತ್ರ: ಎಂ.ಎನ್.ಲಕ್ಷ್ಮೀನಾರಾಯಣ ಯಾದವ್

ಚುಂಚನಕಟ್ಟೆ, ಮೇ 29(ಎಂಟಿವೈ)– ಕೊಡಗು ಸೇರಿದಂತೆ ಕಾವೇರಿ ಕಣಿವೆಯಲ್ಲಿ ಕಳೆದ ಕೆಲ ದಿನಗಳಿಂದ ಸುರಿಯುತ್ತಿರುವ ಧಾರಾಕಾರ ಮಳೆಯಿಂದಾಗಿ ಜೀವನದಿ ಕಾವೇರಿ ಮೈದುಂಬಿ ಹರಿಯುತ್ತಿರುವುದರಿಂದ ಕೆ.ಆರ್. ನಗರದ ಚುಂಚನಕಟ್ಟೆಯ ಧನುಷ್ಕೋಟಿ ಜಲಪಾತ ಧುಮ್ಮಿಕ್ಕಿ ಹರಿಯುತ್ತಿದ್ದು, ಪ್ರವಾಸಿಗರ ಕೈ ಬೀಸಿ ಕರೆಯುತ್ತಿದೆ.

ಪ್ರಸಕ್ತ ಸಾಲಿನ ಮುಂಗಾರು ಎರಡು ವಾರ ಮುನ್ನವೇ ರಾಜ್ಯ ಪ್ರವೇಶಿಸಿರುವ ಹಿನ್ನೆಲೆಯಲ್ಲಿ ದಶಕಗಳ ನಂತರ ಮೇ ತಿಂಗಳಲ್ಲೇ ಕಾವೇರಿ ಕಣಿವೆ ಭಾಗದಲ್ಲಿ ಮಳೆ ಅಬ್ಬರ ಹೆಚ್ಚಾಗಿದೆ. ಬೇಸಿಗೆಯಲ್ಲಿ ಬರಿದಾಗಿದ್ದ ನದಿಗಳಿಗೆ ಜೀವಕಳೆ ಬಂದಿದೆ.

ಕೊಡಗು ಜಿಲ್ಲೆಯ ತಲಕಾವೇರಿ, ಭಾಗಮಂಡಲ, ಕುಶಾಲನಗರ, ಮೈಸೂರು ಜಿಲ್ಲೆಯ ಹುಣಸೂರು, ಕೃಷ್ಣರಾಜನಗರ ಸೇರಿದಂತೆ ಕಾವೇರಿ ನದಿ ಪಾತ್ರದಲ್ಲಿ ದಾಖಲೆ ಪ್ರಮಾಣದ ಮಳೆ ಸುರಿಯುತ್ತಿರುವುದರಿಂದ 2006ರ ನಂತರ ಮೇ ತಿಂಗಳಲ್ಲಿ ಕಾವೇರಿ ನದಿಯಲ್ಲಿ ನೀರು ಹರಿಯುತ್ತಿದೆ.

ಇದರಿಂದ ಮೇ 26ರಂದು 89.35 ಅಡಿ ನೀರಿದ್ದ ಕೆಆರ್‌ಎಸ್ ಜಲಾಶಯದಲ್ಲಿ ಮೂರೇ ದಿನದಲ್ಲಿ ನೀರಿನ ಪ್ರಮಾಣ 98 ಅಡಿಗೆ ಏರಿಕೆಯಾಗಿದೆ.

ಕಾವೇರಿ ನದಿ ಕೆ.ಆರ್.ನಗರ ಸಮೀಪದ ಚುಂಚನಕಟ್ಟೆಯ ಬಳಿ 65 ಅಡಿ ಎತ್ತರದಿಂದ ಧುಮ್ಮಿಕ್ಕುವ ಮೂಲಕ ಧನುಷ್ಕೋಟಿ ಜಲಪಾತಕ್ಕೆ ಮೆರುಗು ತಂದಿದೆ. ಭೋರ್ಗರೆವ ಹಾಲಿನ ನೊರೆಯಂತೆ ಕಾಣುತ್ತಿದ್ದು, ನೋಡುಗರ ಕಣ್ಮನ ಸೆಳೆಯುತ್ತಿದೆ. ವೀಕ್ಷಣಾ ಗೋಪುರದಿಂದ ಪ್ರವಾಸಿಗರು ಜಲಪಾತ ವೀಕ್ಷಿಸಿ ಸಂಭ್ರಮಿಸುತ್ತಿದ್ದಾರೆ.

ಸೀತಾ ಮಡು....

ಕೆ.ಆರ್.ನಗರ ಸಮೀಪದ ಚುಂಚನಕಟ್ಟೆ ಧನುಷ್ಕೋಟಿ ಜಲಪಾತದ ಬಗ್ಗೆ ಪುರಾಣದಲ್ಲಿ ಉಲ್ಲೇಖವಿದೆ. ಚುಂಚನಕಟ್ಟೆಗೆ ಶ್ರೀರಾಮ, ಲಕ್ಷ್ಮಣ, ಸೀತೆ ಬಂದಿದ್ದರೆಂಬ ಪ್ರತೀತಿಯೂ ಇದ್ದು, ಜಲಪಾತದಲ್ಲಿ ಸೀತೆ ಸ್ನಾನ ಮಾಡುವಾಗ ಆಕಸ್ಮಿಕವಾಗಿ ಆ ಸ್ಥಳಕ್ಕೆ ಲಕ್ಷ್ಮಣ ಬಂದಾಗ ದೊಡ್ಡ ಕಲ್ಲು ಬಂಡೆ ಸೀಳಿ ಸ್ನಾನ ಮಾಡುತ್ತಿದ್ದ ಸೀತೆಗೆ ಅಡ್ಡಲಾಗಿ ನಿಂತಿತು ಎಂಬ ಮಾತಿದೆ. ಈ ಕಾರಣದಿಂದ ಇಂದಿಗೂ ಆ ಸ್ಥಳವನ್ನು ಸೀತಾ ಮಡು ಎಂದು ಕರೆಯಲಾಗುತ್ತದೆ. ಸೀತೆ ಸ್ನಾನ ಮಾಡಲು ತಂದಿದ್ದ ಎಣ್ಣೆ, ಸೀಗೆಕಾಯಿ ಇಟ್ಟಿದ್ದ ಬಂಡೆ ಜಲಪಾತದಲ್ಲಿದೆ. ರಭಸವಾಗಿ ಹರಿಯುವ ನೀರು ಎಣ್ಣೆ, ಸೀಗೆಕಾಯಿ ಇಟ್ಟಿದ್ದರೆ ನ್ನಲಾದ ಬಂಡೆ ಮೇಲಿಂದ ಕೆಂಪು ಬಣ್ಣದಲ್ಲಿ ಹರಿಯುವಂತೆ ಈಗಲೂ ಕಾಣುತ್ತದೆ ಎಂಬುದು ಜನರ ನಂಬಿಕೆ. ಮೈಸೂರು ರಾಜವಂಶಸ್ಥ ಕೃಷ್ಣರಾಜ ಒಡೆಯರ್ ಅವರು ಧನುಷ್ಕೋಟಿ ಜಲಪಾತದ ಬಳಿ 'ಶ್ರೀರಾಮದೇವರ ದೇವಾಲಯ' ನಿರ್ಮಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No.114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಹಾಸನ ಮಿತ್ರ

ಪೌತಿ ಖಾತಾ ಅಭಿಯಾನಕ್ಕೆ ಶಾಸಕ ಮಂಜು ಚಾಲನೆ



ಪೌತಿ ಖಾತಾ ಅಭಿಯಾನಕ್ಕೆ ಶಾಸಕ ಎ.ಮಂಜು ಚಾಲನೆ ನೀಡಿದರು.

ಕೊಣನೂರು: ಪೌತಿ ಖಾತಾ ಅಭಿಯಾನದ ಮುಖೇನ ನಿಮ್ಮ ಜಮೀನಿನ ದಾಖಲಾತಿಗಳನ್ನು ಸರಿಪಡಿಸಿಕೊಳ್ಳಿ ಎಂದು ಶಾಸಕ ಎ.ಮಂಜು ತಿಳಿಸಿದರು.

ರಾಮನಾಥಪುರ ಗ್ರಾಮ ಪಂಚಾಯಿತಿ ಅವರಣದಲ್ಲಿ ನಡೆದ ತಾಲೂಕು ಮಟ್ಟದ ಪೌತಿಖಾತೆ ಅಭಿಯಾನದಲ್ಲಿ ಅರ್ಜಿಗಳನ್ನು ಸ್ವೀಕರಿಸಿ ಅವರು ಮಾತನಾಡಿದರು. ರೈತರು ವಂಶವೃಕ್ಷ, ಮರಣ ದೃಢೀಕರಣ ಮುಂತಾದ ದಾಖಲಾತಿ ಸಲ್ಲಿಸಿ ಪೌತಿ ಮಾಡಿಸಿಕೊಳ್ಳಿ ಎಂದರು.

ತಹಶೀಲ್ದಾರ್ ಕೆ.ಸಿ.ಸೌಮ್ಯ ಮಾತನಾಡಿ, ತಾಲೂಕು ಕಚೇರಿಯಲ್ಲಿ ಯಾವುದೇ ಕೆಲಸದಲ್ಲೂ ವಿಳಂಬವಾದಲ್ಲಿ, ರೈತರು ಹಾಗೂ ಸಾರ್ವಜನಿಕರು ನೇರವಾಗಿ ಅಥವಾ ದೂರವಾಣಿ ಮೂಲಕ ದೂರು ಸಲ್ಲಿಸಿದರೆ ವಿಳಂಬ ಮಾಡಿದ ಅಧಿಕಾರಿ ವಿರುದ್ಧ ಕ್ರಮಕ್ಕೆ ಮೇಲಾಧಿಕಾರಿಗೆ ವರದಿ ಸಲ್ಲಿಸಲಾಗುವುದು ಎಂದು ತಿಳಿಸಿದರು.

ಅಕ್ರಮಸಕ್ರಮ ಮನೆಗಳಿಗೆ 94ಸಿ ಅಡಿಯಲ್ಲಿ ಹಕ್ಕುಪತ್ರ ಹಾಗೂ ವಿವಿಧ ಪಿಂಚಣಿ ಯೋಜನೆಗಳ ಆದೇಶ ಪ್ರತಿಗಳನ್ನು ಶಾಸಕ ವಿತರಿಸಿದರು.

ಗ್ರೇಡ್-2 ತಹಶೀಲ್ದಾರ್ ಸಿ.ಸ್ವಾಮಿ, ಶಿರಸ್ತೇದಾರ್ ಡಿ.ಸೋಮಶೇಖರ್, ಉಪ ತಹಶೀಲ್ದಾರ್ ರವಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಪವನಕುಮಾರಿ, ಗ್ರಾಮ ಪಂಚಾಯಿತಿ ಸದಸ್ಯರು, ರಾಜಸ್ವ ನಿರೀಕ್ಷಕ ಭಾಸ್ಕರ್, ಬಲರಾಮ್, ವಸಂತ್, ಪಿಡಿಓ ಕುಮಾರಸ್ವಾಮಿ, ಅಧಿಕಾರಿಗಳು, ರೈತರು ಉಪಸ್ಥಿತರಿದ್ದರು.

ಚನ್ನರಾಯಪಟ್ಟಣದಲ್ಲಿ ರಕ್ತದಾನ ಶಿಬಿರ

ಚನ್ನರಾಯಪಟ್ಟಣ: ರಕ್ತದಾನ ಮಾಡುವುದರಿಂದ ಆರೋಗ್ಯಕ್ಕೆ ತೊಂದರೆ ಇಲ್ಲ ಎಂದು ಚನ್ನರಾಯಪಟ್ಟಣದ ಸರ್ಕಾರಿ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ.ವಿ.ಮಹೇಶ್ ಹೇಳಿದರು.

ಪಟ್ಟಣದ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ರೆಡ್‌ಕ್ರಾಸ್ ಮತ್ತು ರೆಡ್ ರಿಬ್ಬನ್ ಘಟಕ, ಸರ್ಕಾರಿ ಆಸ್ಪತ್ರೆ ಸಹಯೋಗದಲ್ಲಿ ಏರ್ಪಡಿಸಿದ್ದ ರಕ್ತದಾನ ಶಿಬಿರದಲ್ಲಿ ಅವರು ಮಾತನಾಡಿದರು. ನಿಯಮಿತವಾಗಿ ರಕ್ತದಾನ ಮಾಡುವುದರಿಂದ ರಕ್ತದ ಒತ್ತಡ, ಮಧುಮೇಹ, ಹೃದಯ ಸಂಬಂಧಿ ಕಾಯಿಲೆಯನ್ನು ನಿಯಂತ್ರಿಸಬಹುದು. ಕೊಲೆಸ್ಟ್ರಾಲ್ ಕಡಿಮೆಯಾಗುತ್ತದೆ. ಆರೋಗ್ಯವಂತರು ವರ್ಷದಲ್ಲಿ 3-4 ಸಲ ರಕ್ತದಾನ ಮಾಡಬಹುದು. ಒಬ್ಬ ವ್ಯಕ್ತಿಯಿಂದ 450 ಎಂಎಲ್ ರಕ್ತ ಸಂಗ್ರಹಿಸಲಾಗುತ್ತದೆ. 24 ಗಂಟೆಯಲ್ಲಿ ವ್ಯಕ್ತಿಯಲ್ಲಿ ರಕ್ತ ವೃದ್ಧಿಯಾಗುತ್ತದೆ. 6 ವಾರಗಳಲ್ಲಿ ರಕ್ತದ ಕಣಗಳು ವೃದ್ಧಿಯಾಗುತ್ತವೆ. ಕೃತಕವಾಗಿ ರಕ್ತವನ್ನು ಸೃಷ್ಟಿಸಲು ಸಾಧ್ಯವಿಲ್ಲ ಎಂದರು.

ಹಾಸನದ ಜಿಲ್ಲಾ ರಕ್ತನಿಧಿ ಘಟಕದ ನೋಡೆಲ್ ಅಧಿಕಾರಿ ಡಾ.ನಾಗಲಕ್ಷ್ಮಿ, ಕಾಲೇಜು ಪ್ರಾಂಶುಪಾಲ ಎಂ.ಕೆ. ಮಂಜುನಾಥ್, ಯುವ ರೆಡ್‌ಕ್ರಾಸ್ ಘಟಕದ ಸಂಯೋಜಕಿ ನಿರುಪಮಾ, ದೈಹಿಕಶಿಕ್ಷಣ ನಿರ್ದೇಶಕ ಭಾಸ್ಕರ, ಲಯನ್ಸ್ ಕ್ಲಬ್ ಅಧ್ಯಕ್ಷ ಗಿರೀಶ್, ಕಾರ್ಯದರ್ಶಿ ಗೋವಿಂದರಾಜು, ಖಜಾಂಚಿ ಮಂಜುನಾಥ್ ಇದ್ದರು. ವಿದ್ಯಾರ್ಥಿಗಳು, ಸಹಾಯಕ ಪ್ರಾಧ್ಯಾಪಕರಿಂದ 40 ಯೂನಿಟ್ ರಕ್ತ ಸಂಗ್ರಹವಾಯಿತು.

ದಿಕ್ಕು ತಪ್ಪಿದ ಸಮೀಕ್ಷೆ: ಕ್ರಮಕ್ಕೆ ಒತ್ತಾಯ

ಹಾಸನ: ಪರಿಶಿಷ್ಟ ಜಾತಿಗಳಿಗೆ ಒಳಮೀಸಲಾತಿ ಕಲ್ಪಿಸಲು ನಡೆಸಲಾಗುತ್ತಿರುವ ಜಾತಿ ಸಮೀಕ್ಷೆ ದಿಕ್ಕು ತಪ್ಪಿದ್ದು, ಈ ಬಗ್ಗೆ ಆಯೋಗ ಮತ್ತು ಜಿಲ್ಲಾಡಳಿತ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ದಲಿತ ಸಂಘಟನೆಗಳ ಸಮನ್ವಯ ಸಮಿತಿ ಜಿಲ್ಲಾ ಘಟಕದ ಅಧ್ಯಕ್ಷ ಕೃಷ್ಣದಾಸ್ ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪರಿಶಿಷ್ಟ ಜಾತಿಯ 101 ಜಾತಿಗಳ ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆಯನ್ನು 20 ದಿನಗಳಿಂದ ಕೈಗೊಳ್ಳಲಾಗುತ್ತಿದೆ. ಆದರೆ ಮನೆಮನೆ ಸಮೀಕ್ಷೆ ಮಾಡದೆ ಗಣತಿದಾರರು ಬೇಕಾಬಿಟ್ಟಿಯಾಗಿ ಸಮೀಕ್ಷೆಯಲ್ಲಿ ತೊಡಗಿದ್ದು, ಸಮೀಕ್ಷೆಯು ದಾರಿ ತಪ್ಪುವ ಸಾಧ್ಯತೆಗಳೇ ಹೆಚ್ಚಿದೆ ಎಂದು ದೂರಿದರು.

ಸಮೀಕ್ಷೆ ಕಾರ್ಯದಲ್ಲಿ ಆಯೋಗದ ನಿರ್ದೇಶನದಂತೆ ಸುಮಾರು 42 ಪ್ರಶ್ನೆಗಳನ್ನು ಗಣತಿದಾರರು ಕೇಳಬೇಕಿದೆ. ಆದರೆ ಕೇವಲ 3-4 ಪ್ರಶ್ನೆಗಳನ್ನು ಕೇಳಿ, ಉಳಿದ ಪ್ರಶ್ನೆಗಳಿಗೆ ತಮಗೆ ಇಷ್ಟ ಬಂದಂತೆ ಬರೆದುಕೊಂಡು ಹೋಗುತ್ತಿದ್ದಾರೆ. ಸಮೀಕ್ಷೆ ಸಮಯದಲ್ಲಿ ಒಂದು ಕುಟುಂಬದಲ್ಲಿ 6 ಸದಸ್ಯರಿದ್ದರೆ, ಮೂರು ಜನರ ಮಾಹಿತಿ ದಾಖಲಿಸಿ, ಉಳಿದವರ ಮಾಹಿತಿಯನ್ನು ದಾಖಲಿಸದೆ ಉದಾಸೀನ ಮಾಡಲಾಗುತ್ತಿದೆ. ಇದರಿಂದ ಸಮೀಕ್ಷೆಯು ಪಾರದರ್ಶಕವಾಗಿ ನಡೆಯುತ್ತಿಲ್ಲ ಎಂದು ಆರೋಪಿಸಿದರು.

ಜೂನ್ 1ರವರೆಗೆ ಸಮೀಕ್ಷೆಯನ್ನು ವಿಸ್ತರಿಸಿದ್ದು, ಈಗಲಾದರೂ ಸಮೀಕ್ಷೆ ಕಾರ್ಯದಲ್ಲಿ ಮೇಲುಸ್ತುವಾರಿ ವಹಿಸುವ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ನಿರ್ಲಕ್ಷ್ಯ ಮಾಡದೆ ಗಣತಿದಾರರ ಸಭೆ ಕರೆದು, ಜವಾಬ್ದಾರಿಯುತ ಸಮೀಕ್ಷೆ ಪೂರ್ಣಗೊಳಿಸುವಂತೆ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಗೋಷ್ಠಿಯಲ್ಲಿ ಆರ್‌ಪಿಐ ಸತೀಶ್, ಅಂಬುಗ ಮಲ್ಲೇಶ್, ಹರೀಶ್, ಶಿವಮ್ಮ ಇದ್ದರು.

ಜೂ.2ರಿಂದ ಮೈಸೂರಲ್ಲಿ ಪಿಂಚಣಿದಾರರ 9ನೇ ತ್ರೈಮಾಸಿಕ ಅಖಿಲ ಭಾರತ ಸಮ್ಮೇಳನ

ಮೈಸೂರು, ಮೇ29(ಜಿಎ)-ಅಖಿಲ ಭಾರತ ವಿಮಾ ಪಿಂಚಣಿದಾರರ ಸಂಘದ ವತಿಯಿಂದ 9ನೇ ತ್ರೈಮಾಸಿಕ ಅಖಿಲ ಭಾರತ ಸಮ್ಮೇಳನ ಮೈಸೂರಲ್ಲಿ ಜೂ.2 ರಿಂದ 4ರವರೆಗೆ ನಡೆಯಲಿದೆ. ಸಮ್ಮೇಳನದಲ್ಲಿ ಸುಮಾರು 500 ಪ್ರತಿನಿಧಿಗಳು ಪಾಲ್ಗೊಳ್ಳಲಿದ್ದಾರೆ ಎಂದು ವಿಶ್ರಾಂತ ಕುಲಪತಿ ಹಾಗೂ ಪದಾಧಿಕಾರಿಗಳಾದ ಸಬೀಹಾ ಭೂಮಿಗೌಡ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜೂ.2ರಂದು ಬೆಳಗ್ಗೆ 10ಗಂಟೆಗೆ ಹೋಟೆಲ್ ರಿಯೋ ಮೆರಿಡಿಯನ್‌ನಲ್ಲಿ ಪ್ರಾಧ್ಯಾಪಕ ಡಾ.ಆರ್.ರಾಮ್‌ಕುಮಾರ್ ಉದ್ಘಾಟಿಸುವರು. ಈ ವೇಳೆ ಶತಾಯುಷಿ ಹಾಗೂ ವಿಮಾ ನೌಕರರ ಸಂಘದ ಹಿರಿಯ ನಾಯಕರಾದ ಚಂದ್ರಶೇಖರ್ ಬೋಸ್ ಅವರನ್ನು ಸನ್ಮಾನಿಸಲಾಗುವುದು ಎಂದರು.

ಸಮ್ಮೇಳನದಲ್ಲಿ ವಿಮಾ ಪಿಂಚಣಿದಾರರ ಏಕರೂಪ ದರದಲ್ಲಿ ಪಿಂಚಣಿ, ಎನ್‌ಪಿಎಸ್ ರದ್ದುಗೊಳಿಸಬೇಕು, ಹಿರಿಯ ಸಾರ್ವತ್ರಿಕ ಸಾಮಾಜಿಕ ಭದ್ರತೆ ಒದಗಿಸಬೇಕು ಎಂಬ ಮೊದಲಾದ ಬೇಡಿಕೆ ಈಡೇರಿಕೆ ಕುರಿತು ಚರ್ಚಿಸಿ, ಕೇಂದ್ರ ಸರ್ಕಾರವನ್ನು ಒತ್ತಾಯಿಸಲಾಗುವುದು ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಸಮಿತಿ ಸಂಚಾಲಕ ಎಸ್.ಶ್ರೀಧರ್, ಪ್ರಧಾನ ಕಾರ್ಯದರ್ಶಿ ಕುನ್ನಿ ಕೃಷ್ಣನ್, ಸಿ.ಆರ್.ಕೃಷ್ಣಮೂರ್ತಿ, ಉಮಾಪತಿ, ಭಾಸ್ಕರ್ ಸೋಮಯಾಜಿ ಉಪಸ್ಥಿತರಿದ್ದರು.

ಜೂ.1, ಎಸ್.ವಿ.ಗೌಡಪ್ಪರ ಜನ್ಮದಿನದ ಅಂಗವಾಗಿ ಪುರಸ್ಕಾರ ಸಮಾರಂಭ

ಮೈಸೂರು, ಮೇ29(ಜಿಎ)-ಹಿರಿಯ ನಾಗರಿಕರ ಮಂಡಳಿ, ಹಿರಿಯ ನಾಗರಿಕರ ವಿಶ್ವಸ್ಥ ಮಂಡಳಿ, ಕೃಷಿಕ್ ಸರ್ವೋದಯ ಫೌಂಡೇಷನ್ ಸಹಯೋಗದಲ್ಲಿ ಜೂ.1ರಂದು ಸಮಾಜಮುಖಿಗಳಾದ ಎಸ್.ವಿ. ಗೌಡಪ್ಪ ಅವರ 93ನೇ ಹುಟ್ಟುಹಬ್ಬದ ಅಂಗವಾಗಿ ಪುರಸ್ಕಾರ ಸಮಾರಂಭವನ್ನು ಜಯಲಕ್ಷ್ಮಿಪುರಂನಲ್ಲಿರುವ ಸರಸ್ವತಿ ಸಮುದಾಯ ಭವನದಲ್ಲಿ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಹಿರಿಯ ನಾಗರಿಕರ ಮಂಡಳಿ, ಅಧ್ಯಕ್ಷ ಡಾ.ಹೆಚ್.ಎಂ. ನಾಗರಾಜ್ ಈ ವಿಷಯ ತಿಳಿಸಿ, ಅಂದು ಬೆಳಗ್ಗೆ 10.30ಕ್ಕೆ ಕಾರ್ಯಕ್ರಮ ಆರಂಭವಾಗಲಿದ್ದು, ಕರ್ನಾಟಕ ಲೋಕಸೇವಾ ಆಯೋಗದ ಮಾಜಿ ಅಧ್ಯಕ್ಷ ವೈ.ಕೆ.ಪುಟ್ಟಸ್ವಾಮಿಗೌಡ ಉದ್ಘಾಟಿಸುವರು. ಕರ್ನಾಟಕ ಕಾವೇರಿ ನೀರಾವರಿ ನಿಗಮದ ಮಾಜಿ ವ್ಯವಸ್ಥಾಪಕ ನಿರ್ದೇಶಕ ಟಿ.ತಿಮ್ಮೇಗೌಡ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಡಾ.ಎನ್.ಎಸ್.ರಾಮೇಗೌಡ, ಎಸ್.ವಿ. ಗೌಡಪ್ಪ ಉಪಸ್ಥಿತರಿರುವರು. ಬಿ.ಟಿ.ಶ್ರೀಧರ, ಬಿ.ಎ.ಪ್ರಕಾಶ್‌ರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದರು. ಗೋಷ್ಠಿಯಲ್ಲಿ ಡಾ.ರಾಮಚಂದ್ರಗೌಡ, ಕೃಷ್ಣ, ಕಿಶೋರ್ ಚಂದ್ರ, ರಂಗಯ್ಯ ಉಪಸ್ಥಿತರಿದ್ದರು.

ಅವಕಾಶ ದೊರೆತರೆ ಪ್ರತಿಭೆ ಹೊರಹೊಮ್ಮುತ್ತದೆ; ಅದು ಯಾರೊಬ್ಬರ ಸ್ವತ್ತಲ್ಲ

● ಸಿಎಂ ಸಿದ್ದರಾಮಯ್ಯ ವಿಶ್ವಾಸದ ನುಡಿ ● ಸಚಿವನಾದಾಗ ಸಿಕ್ಕ ಸಂತೋಷಕ್ಕಿಂತ ನಾನು ಪದವಿ ಪಡೆದಾಗ ಹೆಚ್ಚು ಖುಷಿಯಾಯ್ತು: ಡಿಕೆಶಿ ● ಸರ್ಕಾರಿ ಶಾಲೆಗಳ ಪುನರಾರಂಭದ ಕಾರ್ಯಕ್ರಮಗಳಲ್ಲಿ ಸಿಎಂ, ಡಿಸಿಎಂ ಭಾಗಿ



ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಅಯ್ಯಪ್ಪ ಗಾರ್ಡನ್‌ನ ಪಟೇಲ್ ಮುನಿಚಿನ್ನಪ್ಪ ಪ್ರೌಢಶಾಲೆ ಪ್ರಾರಂಭೋತ್ಸವ ಕಾರ್ಯಕ್ರಮದಲ್ಲಿ 10ನೇ ತರಗತಿ ಪರೀಕ್ಷೆಯಲ್ಲಿ 625 ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳ ಪೋಷಕರು ಹಾಗೂ ಶಿಕ್ಷಕರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಇತರೆ ಸಚಿವರು, ಅಧಿಕಾರಿಗಳು ಅಭಿನಂದಿಸಿದರು.

ಬೆಂಗಳೂರು, ಮೇ 29(ಕೆಎಂಶಿ)- ಪ್ರತಿಭೆ ಯಾರ ಸ್ವತ್ತೂ ಅಲ್ಲ, ಅವಕಾಶ ಸಿಕ್ಕರೆ ಎಲ್ಲರ ಪ್ರತಿಭೆಯೂ ಹೊರಹೊಮ್ಮುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ತಿಳಿಸಿದ್ದಾರೆ.

ಆಡುಗೋಡಿಯ ಕರ್ನಾಟಕ ಸರ್ಕಾರಿ ಕನ್ನಡ ಶಾಲೆಯಲ್ಲಿ ಶೈಕ್ಷಣಿಕ ವರ್ಷದ ಪುನರಾರಂಭ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸರ್ವರಿಗೂ ಶಿಕ್ಷಣ ಕೊಡುವುದು ಸರ್ಕಾರದ ಜವಾಬ್ದಾರಿ, ಶಿಕ್ಷಣ ಕೇವಲ ಜ್ಞಾನ ಕೊಡುವುದಿಲ್ಲ, ವ್ಯಕ್ತಿತ್ವ ರೂಪಿಸುತ್ತದೆ. ಪ್ರತಿಯೊಬ್ಬರೂ ಶಿಕ್ಷಣ ಪಡೆಯಲೇಬೇಕು. ಇದರಿಂದ ಸ್ವಾಭಿಮಾನ ಬೆಳೆದು ಸಮಾಜದ ಆಸ್ತಿಯಾಗುತ್ತೇವೆ ಎಂದರು.

ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ದೇಶ ಕಂಡ ಮಹಾನ್ ವಿದ್ವಾಂಸರಲ್ಲಿ ಒಬ್ಬರು. ಅವರು ಕೊಟ್ಟಂತಹ ಸಂವಿಧಾನವನ್ನು ಎಲ್ಲರೂ ಪಾಲಿಸಬೇಕು. ಜಾತಿ, ವರ್ಗ ಮುಕ್ತ ಸಮ ಸಮಾಜ ನಿರ್ಮಾಣ ಆಗಬೇಕು ಎನ್ನುವುದು ಅವರ ಆಶಯವಾಗಿತ್ತು. ನಾನು 1992-93ರಲ್ಲಿ ಹಣಕಾಸು ಮಂತ್ರಿಯಾಗಿದ್ದಾಗ ಒಂದು ಲಕ್ಷ ಶಿಕ್ಷಕರ ನೇಮಕ ಮಾಡಲು ಅನುಮೋದನೆ ನೀಡಿದ್ದೆ. ಮಕ್ಕಳಿಗೆ ಉತ್ತಮ ಪೌಷ್ಟಿಕಾಂಶ ಸಿಕ್ಕರೆ ಮಾತ್ರ ಅವರು ಆರೋಗ್ಯವಂತರಾಗಿ, ಉತ್ತಮವಾಗಿ ಓದಲು ಸಾಧ್ಯ, ಇದಕ್ಕಾಗಿಯೇ ಮಕ್ಕಳಿಗೆ ಮೊಟ್ಟೆ, ಬಾಳೆಹಣ್ಣು, ಚಿಕ್ಕಿ, ಹಾಲು ಕೊಡುತ್ತಿದ್ದೇವೆ. ಜೊತೆಗೆ ಪಠ್ಯ, ಸಮವಸ್ತ್ರ, ಶೂ, ಸಾಕ್ಸ್, ಪುಸ್ತಕಗಳನ್ನೂ ಸರ್ಕಾರದಿಂದಲೇ ಕೊಡುತ್ತಿದ್ದೇವೆ ಎಂದರು.

ಶಿಕ್ಷಣ ಇಲ್ಲದಿದ್ದರೆ ಸೇವಕರಾಗಬೇಕು: ಅಯ್ಯಪ್ಪ ಗಾರ್ಡನ್‌ನ ಪಟೇಲ್ ಮುನಿಚಿನ್ನಪ್ಪ ಪ್ರೌಢಶಾಲೆ ಪ್ರಾರಂಭೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮಕ್ಕಳು ಚೆನ್ನಾಗಿ ಓದಿದರೆ ಎಲ್ಲಾ ರಂಗದಲ್ಲೂ ರಾಜನಾಗಿ ರೂಪುಗೊಳ್ಳಬಹುದು, ಇಲ್ಲವಾದರೆ ಸೇವಕನಾಗಿ ಇರಬೇಕಾಗುತ್ತದೆ, ಇವೆರಡರ ಆಯ್ಕೆ ನಿಮ್ಮದು. ಎಲ್ಲಿ ಶ್ರಮ ಇದೆಯೋ ಅಲ್ಲಿ ಫಲವಿದೆ, ಎಲ್ಲಿ ಮನಸ್ಸಿದೆಯೋ ಅಲ್ಲಿ ಮಾರ್ಗವಿದೆ ಎಂದು ಕಿವಿಮಾತು ಹೇಳಿದರು.

ಇಷ್ಟು ದಿನ ಮಕ್ಕಳು ರಜೆಯಲ್ಲಿ ನಲಿದಾಡಿದ್ದೀರಿ, ನಲಿಯುವುದರ ಜೊತೆಗೆ ಕಲಿಯಿರಿ. ಶಾಲೆಗಳಿಗೆ ನಿಮ್ಮನ್ನು ಸ್ವಾಗತಿಸುತ್ತಿದ್ದೇವೆ. ಸರ್ಕಾರಿ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಮಕ್ಕಳ ಪೋಷಕರಿಗೆ ಅಭಿನಂದನೆ ಸಲ್ಲಿಸುತ್ತೇನೆ.

ಕಳೆದ ವರ್ಷ ಬಾಗಲಕೋಟೆ ಮೊರಾರ್ಜಿ ದೇಸಾಯಿ ಶಾಲೆ ವಿದ್ಯಾರ್ಥಿನಿ ಅಂಕಿತಾ ರಾಜ್ಯಕ್ಕೆ ಮೊದಲ ಸ್ಥಾನ ಪಡೆದಿದ್ದರು, ಈ ವರ್ಷ ಬೆಳಗಾವಿಯ ಬೈಲಹೊಂಗಲದ ದೇವಲಾಪುರ ಸರ್ಕಾರಿ ಶಾಲೆಯ ವಿದ್ಯಾರ್ಥಿನಿ ರೂಪಾ ಪಾಟೀಲ್ ಅಗ್ರಸ್ಥಾನ ಪಡೆದಿದ್ದಾರೆ, 10ನೇ ತರಗತಿ ಪರೀಕ್ಷೆಯಲ್ಲಿ 625 ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳ ಪೋಷಕರು ಹಾಗೂ ಶಿಕ್ಷಕರನ್ನು ಸರ್ಕಾರ ಅಭಿನಂದಿಸುತ್ತಿದೆ.

ಸರ್ಕಾರಿ ಶಾಲೆ ಮಕ್ಕಳಿಗೆ ಖಾಸಗಿ ಶಾಲೆಗಳಿಗಿಂತ ಉತ್ತಮ ಗುಣಮಟ್ಟದ ಶಿಕ್ಷಣ ಸಿಗಬೇಕು. ಶಿಕ್ಷಣದ ಬೇರು ಕಹಿಯಾಗಿದ್ದರೂ ಫಲ ಸಿಕ್ಕಾಗ ಬಹಳ ಸಿಹಿಯಾಗಿರುತ್ತದೆ. ಜೀವನದಲ್ಲಿ ಯಶಸ್ಸು ಸಾಧಿಸಲು ಕನಸು ಕಾಣಬೇಕು. ಕನಸು ಈಡೇರಿಸಿಕೊಳ್ಳಲು ಬಯಸಬೇಕು. ಕನಸಿಗಾಗಿ ಬದ್ಧತೆ, ಶಿಸ್ತು ಇರಬೇಕು, ಉದ್ಯೋಗ ಪಡೆಯುವುದಷ್ಟೇ ಕನಸಾಗಬಾರದು, ಬೇರೆಯವರಿಗೆ ಉದ್ಯೋಗ ಸೃಷ್ಟಿಸುವ ಮಟ್ಟಕ್ಕೆ ಬೆಳೆಯುವುದು ನಿಮ್ಮ ಕನಸಾಗಬೇಕು. ದೇಶದಲ್ಲಿ ಅತೀ ಹೆಚ್ಚು ಇಂಜಿನಿಯರ್‌ಗಳು, ವೈದ್ಯರು, ಮಾನವ ಸಂಪನ್ಮೂಲ ವ್ಯಕ್ತಿಗಳು ವಿದ್ಯಾಲಯಗಳಿಂದ ಹೊರಬರುತ್ತಿರುವುದು ಕರ್ನಾಟಕದಲ್ಲಿ, ಎಲ್ಲಾ ದೇಶಗಳಿಂದ ಬೆಂಗಳೂರಿಗೆ ಬಂದು ವ್ಯಾಸಂಗ ಮಾಡುತ್ತಿದ್ದಾರೆ, ಐಟಿ-ಬಿಟಿ, ಸಂಶೋಧನೆ ಸೇರಿದಂತೆ ಪ್ರಮುಖ ಕ್ಷೇತ್ರಗಳಲ್ಲಿ ಬೆಂಗಳೂರು ಯಶಸ್ಸು ಸಾಧಿಸಿದೆ.

ಸಚಿವ ಸ್ಥಾನಕ್ಕಿಂತ ಪದವಿ ಖುಷಿ: ನಾನು ವಿದ್ಯಾರ್ಥಿಯಾಗಿದ್ದಾಗ ರಾಜಕೀಯ ಪ್ರವೇಶಿಸಿದ್ದು, ಶಿಕ್ಷಣಕ್ಕೆ ಹೆಚ್ಚು ಗಮನಹರಿಸಲು ಸಾಧ್ಯವಾಗಲಿಲ್ಲ, ಶಾಸಕನಾಗಿ ವಿಧಾನಸೌಧ ಪ್ರವೇಶಿಸಿದಾಗ ಹಿರಿಯ ನಾಯಕರ ಭಾಷಣ ಕೇಳಿ ನನಗೆ ವಿದ್ಯೆ ಕೊರತೆ ಇದೆ ಎಂಬುದು ಅರಿವಾಯಿತು. 47ನೇ ವಯಸ್ಸಿನಲ್ಲಿ ಮೈಸೂರು ಮುಕ್ತ ವಿಶ್ವವಿದ್ಯಾಲಯದಿಂದ ಪದವಿ ಪಡೆದೆ, ಸಚಿವ ಸಂಪುಟ ಸದಸ್ಯನಾದಾಗ ಸಿಕ್ಕ ಸಂತೋಷಕ್ಕಿಂತ ಪದವಿ ಪಡೆದಾಗ ಹೆಚ್ಚು ಸಂತೋಷವಾಯಿತು ಎಂದರು.

ಸರ್ಕಾರಿ ಶಾಲೆಗಳನ್ನು ಉನ್ನತ ದರ್ಜೆಗೆ ಏರಿಸಲು ಎರಡು ಸಾವಿರ ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ನಿರ್ಮಿಸಲಾಗುತ್ತಿದೆ. ಖಾಸಗಿ ಸಂಸ್ಥೆಗಳನ್ನು ಒಳಗೊಂಡು ಶಿಕ್ಷಕರ ಕೊರತೆ ಪೂರೈಸಲಾಗುವುದು, ಅನೇಕ ಸಂಸ್ಥೆಗಳು ಈಗಾಗಲೇ ಪಂಚಾಯತ್ ಮಟ್ಟದಲ್ಲಿ ಶಾಲೆ ನಿರ್ಮಾಣಕ್ಕೆ ಮುಂದಾಗಿವೆ. ಸಚಿವ ರಾಮಲಿಂಗಾರೆಡ್ಡಿ ತಮ್ಮ ಕ್ಷೇತ್ರದಲ್ಲಿ ಸರ್ಕಾರಿ ಶಾಲೆಗಳನ್ನು ಮಾದರಿ ಶಿಕ್ಷಣ ಸಂಸ್ಥೆಗಳಾಗಿ ಪರಿವರ್ತಿಸಿ ಹೊಸ ಇತಿಹಾಸ ಸೃಷ್ಟಿಸಿದ್ದಾರೆ ಎಂದರು.

ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಸನ್ಮಾನ...



ಮೈಸೂರಿನ ಕಲಾಮಂದಿರದಲ್ಲಿ ಬುಧವಾರ 'ಮೈಸ್ಕೂಲ್' ಸಂಸ್ಥೆ ಆಯೋಜಿಸಿದ್ದ ಅಚೀವರ್ಸ್ ಟ್ರಿಬ್ಯೂಟ್ ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 625 ಅಂಕ ಪಡೆದ ಪ್ರತಿಭಾನ್ವಿತ ವಿದ್ಯಾರ್ಥಿಗಳಾದ ಭಾರತೀಯ ವಿದ್ಯಾ ಭವನದ ತಾನ್ಯಾ, ಮರಿಮಲ್ಲಪ್ಪ ಶಾಲೆಯ ಎಸ್.ಧನುಷ್, ನಿತೀಷ್, ರಾಹುಲ್, ಮೀರಾ, ರಾಮಕೃಷ್ಣ ವಿದ್ಯಾಶಾಲೆಯ ತನ್ಮಯ್ ಸೇರಿದಂತೆ ನೂರಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು. ಮೈಸೂರು ಉತ್ತರ ಬ್ಲಾಕ್ ಶಿಕ್ಷಣಾಧಿಕಾರಿ ರೇವಣ್ಣ, ಮಣಿಪಾಲ್ ಆಸ್ಪತ್ರೆಯ ನರರೋಗ ತಜ್ಞ ಡಾ. ಮುಕ್ಸೂದ್ ಇನ್ನಿತರರು ಉಪಸ್ಥಿತರಿದ್ದರು.

ಮರಗಳನ್ನು ಕಡಿಯಲು ಮುಂದಾಗಿರುವ ಪಾಲಿಕೆ ವಲಯ ಕಚೇರಿ; ಆರೋಪ

ಡಿಸಿ, ಡಿಸಿಎಫ್, ಪಾಲಿಕೆ ಆಯುಕ್ತರಿಗೆ ದೂರು ಸಲ್ಲಿಕೆ

ಮೈಸೂರು, ಮೇ 29(ಪಿಎಂ)- ಸುಭಾಷ್‌ನಗರದ 3ನೇ ಮುಖ್ಯ ರಸ್ತೆಯಲ್ಲಿ ಇಲ್ಲಿನ ಖಾಸಗಿ ಶಿಕ್ಷಣ ಸಂಸ್ಥೆಯೊಂದಕ್ಕೆ ಅನುಕೂಲ ಕಲ್ಪಿಸಲು ಮೈಸೂರು ಮಹಾನಗರ ಪಾಲಿಕೆಯ ವಲಯ ಕಚೇರಿ 8ರ ವತಿಯಿಂದ ಮಳೆ ನೀರು ಚರಂಡಿಯ ಮೇಲೆ ಮುಚ್ಚಲು ಹೊರಟ್ಟಿದ್ದು, ಜೊತೆಗೆ ಇಲ್ಲಿರುವ 15 ಮರಗಳನ್ನು ಕಡಿಯಲು ಗುರುತು ಮಾಡಲಾಗಿದೆ ಎಂದು ಆರೋಪಿಸಿರುವ ಪರಿಸರ ಸಂರಕ್ಷಣಾ ಸಮಿತಿ ಅಧ್ಯಕ್ಷ ಭಾನುಮೋಹನ್, ಈ ಸಂಬಂಧ ಜಿಲ್ಲಾಧಿಕಾರಿಗಳು, ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ಮೈಸೂರು ಮಹಾನಗರ ಪಾಲಿಕೆ ಆಯುಕ್ತರಿಗೆ ದೂರು ಸಲ್ಲಿಸಿದ್ದಾರೆ.

ಪಾಲಿಕೆ ವಲಯ ಕಚೇರಿ 8ರಿಂದ ಮರಗಳನ್ನು ಕಡಿಯಲು ಗುರುತು ಮಾಡಿದ್ದು, ಜೊತೆಗೆ ಮಳೆ ನೀರು ಚರಂಡಿಯನ್ನು ಕಾನೂನುಬಾಹಿರವಾಗಿ ಮುಚ್ಚಿ ಅಲ್ಲೇ ಇರುವ ಖಾಸಗಿ ಶಿಕ್ಷಣ ಸಂಸ್ಥೆಗೆ ತಡೆಗೋಡೆ ನಿರ್ಮಿಸಲಾಗುತ್ತಿದೆ. ಆ ಶಿಕ್ಷಣ ಸಂಸ್ಥೆಗೆ ಅನುಕೂಲವಾಗುವಷ್ಟು ಮಾತ್ರ ತಡೆಗೋಡೆ ನಿರ್ಮಿಸಲಾಗುತ್ತಿದೆ. ಮಳೆ ನೀರು ಚರಂಡಿಯ ತಡೆಗೋಡೆಯ ಮೇಲೆ ಹಾಕಿದ ಕಬ್ಬಿಣದ ಬೇಲಿನ್ನು ಕಿತ್ತು ಹಾಕಲಾಗಿದೆ. ಇದನ್ನು ಮತ್ತೆ ಪುನರ್ ನಿರ್ಮಾಣ ಮಾಡಬೇಕು. ಕೂಡಲೇ ಸಂಬಂಧಿಸಿದ ಉನ್ನತ ಅಧಿಕಾರಿಗಳು ಪರಿಶೀಲಿಸಿ ಪರಿಸರ ಉಳಿಸಿ ಮತ್ತು ತಡೆಗೋಡೆ ನಿರ್ಮಾಣ ಮಾಡುವುದನ್ನು ನಿಲ್ಲಿಸಬೇಕೆಂದು ದೂರಿನಲ್ಲಿ ಅವರು ಆಗ್ರಹಿಸಿದ್ದಾರೆ.

ಭಾರತದ ಬ್ರಹ್ಮೋಸ್ ನಮ್ಮ ವಾಯುನೆಲೆಗಳನ್ನು ನಾಶ ಮಾಡಿವೆ

ಇದೇ ಮೊದಲು, ಭಾರತದ ಭೀಕರ ದಾಳಿಯನ್ನು ಒಪ್ಪಿಕೊಂಡ ಪಾಕ್ ಪ್ರಧಾನಿ

ಬಾಕು (ಅಜರ್ಬೈಜಾನ್) ಮೇ 29- ಭಾರತದ ವಾಯುನೆಲೆಗಳನ್ನು ಪಾಕಿಸ್ತಾನದ ಕ್ಷಿಪಣಿಗಳು ನಾಶ ಮಾಡಿವೆ ಎಂದೆಲ್ಲಾ ಪಾಕಿಸ್ತಾನದಲ್ಲಿ ಕಥೆ ಕಟ್ಟಿದ್ದ ಪಾಕಿಸ್ತಾನ ಸರ್ಕಾರ, ಒಂದೊಂದಾಗಿಯೇ ಸತ್ಯವನ್ನು ಒಪ್ಪಿಕೊಳ್ಳುತ್ತಿದೆ. ತಮ್ಮ ನೆಲೆಯ ಮೇಲೆ ಭಾರತ ದಾಳಿ ನಡೆಸಿದ್ದನ್ನು ಸಂಸತ್ತಿನಲ್ಲಿ ಪಾಕ್ ಪ್ರಧಾನಿ ಶೆಹಬಾಜ್ ಷರೀಫ್ ಒಪ್ಪಿಕೊಂಡಿದ್ದರು.



ಶೆಹಬಾಜ್ ಷರೀಫ್

ಭಾರತ ದಾಳಿ ನಡೆಸಿದ ಸಂದರ್ಭದಲ್ಲಿ ಪಾಕಿಸ್ತಾನದ ಪರವಾಗಿ ನಿಂತಿದ್ದ ಅಜರ್ಬೈಜಾನ್ ದೇಶದ ಕಾರ್ಯಕ್ರಮದಲ್ಲಿ ಮಾತನಾಡಿದ ಪಾಕ್ ಪ್ರಧಾನಿ, ಮೇ 9 - 10ರ ನಸುಕಿನಲ್ಲಿ ಭಾರತವು ಬ್ರಹ್ಮೋಸ್ ಕ್ಷಿಪಣಿಯನ್ನು ಪಾಕಿಸ್ತಾನದ ಹಲವು ನಗರಗಳನ್ನು ಟಾರ್ಗೆಟ್ ಮಾಡಿ ದಾಳಿ ನಡೆಸಿತ್ತು. ನಮ್ಮ ವಾಯುನೆಲೆಗಳನ್ನು ನಾಶ ಮಾಡಿತು. ಭಾರತದ ಈ ದಾಳಿಯ ಬಗ್ಗೆ ಪಾಕಿಸ್ತಾನಕ್ಕೆ ತಿಳಿದಿರಲಿಲ್ಲ ಎಂದು ಷರೀಫ್ ಒಪ್ಪಿಕೊಂಡಿದ್ದಾರೆ.

ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದ ಶೆಹಬಾಜ್ ಷರೀಫ್, ಮೇ10ರ ಬೆಳಗ್ಗಿನ ಪ್ರಾರ್ಥನೆಯ ನಂತರ ಭಾರತದ ವಿರುದ್ಧ ದಾಳಿ ನಡೆಸುವ ಯೋಜನೆಯನ್ನು ಹಾಕಿಕೊಳ್ಳಲಾಗಿತ್ತು. ಅದರ ನೇತೃತ್ವವನ್ನು ಆಸಿಮ್ ಮುನೀರ್ ವಹಿಸಿಕೊಂಡಿದ್ದರು. ಆದರೆ, ಮುಂಜಾನೆಗೆ ಮೊದಲೇ ಭಾರತ ದಾಳಿಯನ್ನು ನಡೆಸಿಯಾಗಿತ್ತು ಎಂದು ಬೇಸರದಿಂದ ಸತ್ಯವನ್ನು ಹೊರಹಾಕಿದ್ದಾರೆ.

ಭಾರತ ಹಾರಿಸಿದ ಕ್ಷಿಪಣಿಗಳು ಪಾಕಿಸ್ತಾನದ ಹಲವು ನೆಲೆಗಳ ಮೇಲೆ ಬಿದ್ದಿವೆ. ಸೇನಾ ಮುಖ್ಯಸ್ಥರು ಈ ವಿಚಾರವನ್ನು ನನಗೆ ತಿಳಿಸಿದರು. ಭಾರತದ ದಾಳಿಗೆ ಪ್ರತೀಕಾರ ತೀರಿಸಿಕೊಳ್ಳಲು ಬೆಳಗ್ಗೆಯ 4.30ರ ಫಜರ್ ಪ್ರಾರ್ಥನೆಯ ನಂತರ ಸಮಯ ನಿಗದಿ ಪಡಿಸಲಾಗಿತ್ತು. ಆದರೆ, ಭಾರತದ ವಾಯುಪಡೆ ರಾವಲ್ಪಿಂಡಿ ವಿಮಾನ ನಿಲ್ದಾಣ ಸೇರಿದಂತೆ ಪಾಕಿಸ್ತಾನದ ಹಲವು ಕಡೆ ದಾಳಿ ನಡೆಸಿಯಾಗಿತ್ತು ಎಂದು ಶೆಹಬಾಜ್ ಷರೀಫ್ ಹೇಳಿದ್ದಾರೆ. ಭಾರತದ ಮಿಲಿಟರಿ ದಾಳಿಯ ಬಗ್ಗೆ ಅಧಿಕೃತವಾಗಿ ಪಾಕಿಸ್ತಾನದ ಪ್ರಧಾನಿ ಹೇಳಿಕೆಯನ್ನು ನೀಡುತ್ತಿರುವುದು ಇದೇ ಮೊದಲು. ಸೇನಾ ಮುಖ್ಯಸ್ಥ ಆಸಿಮ್ ಮುನೀರ್ ಸಮ್ಮುಖದಲ್ಲೇ ಪಾಕ್ ಪ್ರಧಾನಿ ಈ ಮಾತನ್ನು ಹೇಳುತಿದ್ದಾಗ, ಅವರು ಅದಕ್ಕೆ ತಲೆಯಾಡಿಸುತ್ತಿದ್ದರು.

ಇಂದು ಕಮಲ್ ಹಾಸನ್ ಕ್ಷಮೆಯಾಚಿಸದಿದ್ದರೆ ಅವರ ಚಿತ್ರ ಬಿಡುಗಡೆಗೆ ಅವಕಾಶ ಕೊಡಲ್ಲ

ಫಿಲಂ ಚೇಂಬರ್ ಮಾಜಿ ಅಧ್ಯಕ್ಷ ಸಾರಾ ಗೋವಿಂದು ಡೆಡ್‌ಲೈನ್

ಬೆಂಗಳೂರು, ಮೇ 29- ಕನ್ನಡದ ಬಗ್ಗೆ ವಿವಾದಾತ್ಮಕ ಹೇಳಿಕೆ ನೀಡಿರುವ ತಮಿಳು ನಟ ಕಮಲ್ ಹಾಸನ್ ಕ್ಷಮೆಯಾಚನೆಗೆ ಫಿಲಂ ಚೇಂಬರ್ ಡೆಡ್‌ಲೈನ್ ನೀಡಿದ್ದು, ನಾಳೆ(ಮೇ 30) ಯೊಳಗೆ ಕ್ಷಮೆಯಾಚಿಸದಿದ್ದರೆ ಅವರ ಚಿತ್ರ ಬಿಡುಗಡೆಗೆ ಅವಕಾಶ ಕೊಡಲ್ಲ ಎಂದು ಎಚ್ಚರಿಸಿದೆ.



ಕಮಲ್ ಹಾಸನ್

ಕಮಲ್ ಚಿತ್ರ ರಾಜ್ಯದಲ್ಲಿ ಬಿಡುಗಡೆ ಸಂಬಂಧ ಫಿಲಂ ಚೇಂಬರ್‌ನಲ್ಲಿ ಸಭೆ ನಡೆದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಕನ್ನಡ ಹೋರಾಟಗಾರ, ಕರ್ನಾಟಕ ಚಲನ ಚಿತ್ರ ಮಂಡಳಿ ಮಾಜಿ ಅಧ್ಯಕ್ಷ ಸಾ.ರಾ ಗೋವಿಂದು, ಕಮಲ ಹಾಸನ್‌ಗೆ ಡೆಡ್‌ಲೈನ್ ಕೊಟ್ಟಿದ್ದಾರೆ. ಕಮಲ್ ಹಾಸನ್ ಬಗ್ಗೆ ನಮಗೆ ಯಾರಿಗೂ ಕನಿಕರ ಇಲ್ಲ. ಇಂದು ಅಥವಾ ನಾಳೆ ಒಳಗೆ ಕಮಲ್ ಹಾಸನ್ ಕ್ಷಮೆ ಕೇಳಲೇಬೇಕು. ಇಲ್ಲದಿದ್ದರೆ ಯಾವುದೇ ಕಾರಣಕ್ಕೂ ಸಿನಿಮಾ ರಿಲೀಸ್ ಮಾಡೋಕೆ ಅವಕಾಶ ಮಾಡಿಕೊಡಲ್ಲ. ಕ್ಷಮಾಪಣೆ ಅಂತಾ ಪದ ಬರದಿದ್ದರೆ ಸಿನಿಮಾ ರಿಲೀಸ್ ಮಾಡೋಕೆ ಬಿಡಲ್ಲ ಎಂದು ಗುಡುಗಿದರು.

ಇನ್ನು ಡಿಸ್ಟ್ರಿಬ್ಯೂಟರ್ ವೆಂಕಟೇಶ್ ಮಾತನಾಡಿ, ಕನ್ನಡ ಹಾಗೂ ಬ್ಯುಸಿನೆಸ್ ಎರಡೂ ನನಗೆ ಇಂಪಾರ್ಟೆಂಟ್. ಫಿಲಂ ಚೇಂಬರ್ ಸಭೆಯಲ್ಲಿ ಏನೇನು ಆಯ್ತು ಎಲ್ಲವನ್ನು ಕಮಲ್‌ಗೆ ಹೇಳುತ್ತೇನೆ ಎಂದು ತಿಳಿಸಿದರು



ಸಾರಾ ಗೋವಿಂದು

ಕಮಲ್ ಚಿತ್ರ ರಾಜ್ಯದಲ್ಲಿ ಬಿಡುಗಡೆ ಸಂಬಂಧ ಫಿಲಂ ಚೇಂಬರ್‌ನಲ್ಲಿ ಸಭೆ ನಡೆಯುತ್ತಿದ್ದ ವೇಳೆಯೇ ಫಿಲಂ ಚೇಂಬರ್‌ಗೆ ಕನ್ನಡಪರ ಹೋರಾಟಗಾರರು ಮುತ್ತಿಗೆ ಹಾಕಿದರು. ಕರವೇ ನಾರಾಯಣಗೌಡರ ಬಣ ಮುತ್ತಿಗೆ ಹಾಕಿ ಕಮಲ್ ಕ್ಷಮೆ ಕೇಳೋವರೆಗೂ ಚಿತ್ರ ಬಿಡುಗಡೆ ಮಾಡದಂತೆ ಆಗ್ರಹಿಸಿದರು. ಫಿಲಂ ಚೇಂಬರ್ ಒಳಗೆ ನುಗ್ಗಿ ಅಧ್ಯಕ್ಷರ ಮುಂದೆ ಕೂತು ಕರ್ನಾಟಕದಲ್ಲಿ ಕಮಲ್ ಹಾಸನ್ ಸಿನಿಮಾ ರಿಲೀಸ್ ಆಗಲು ಬಿಡಲ್ಲ ಸಿನಿಮಾ ಬಿಡುಗಡೆ ಮಾಡುತ್ತಿರುವ ಡಿಸ್ಟ್ರಿಬ್ಯೂಟರ್ ಅವರಿಗೆ ವಾರ್ನಿಂಗ್ ಕೊಡುತ್ತೇವೆ, ಫಿಲಂ ಚೇಂಬರ್ ಚಿತ್ರ ರಿಲೀಸ್ ಆಗೋಕೆ ಬಿಡಬಾರದು ಎಂದು ಮನವಿ ಮಾಡಿದರು.

ಇನ್ನು ಕನ್ನಡದ ಬಗ್ಗೆ ಕಮಲ್ ಹಾಸನ್ ಅವಿವೇಕದ ಮಾತಾಡಿದ್ದಾರೆ. ಅವರ ಚಿತ್ರ ಕರ್ನಾಟಕದಲ್ಲಿ ರಿಲೀಸ್ ಆಗಬಾರದು. ಕರ್ನಾಟಕದ ಅನ್ನ ತಿಂದ ಕನ್ನಡ ನಟರು ಇದರ ಬಗ್ಗೆ ಧ್ವನಿಯೆತ್ತಬೇಕು. ಕಮಲ್ ಹಾಸನ್ ವಿರುದ್ಧ ಕನ್ನಡ ನಟ-ನಟಿಯರು ಯಾಕೆ ಧ್ವನಿ ಎತ್ತಿಲ್ಲ ಎಂದು ಕರವೇ ಶಿವರಾಮೇಗೌಡ ಪ್ರಶ್ನಿಸಿದರು.


ಕಮಲ ಹಾಸನ್ ವಿವಾದದ ಬಗ್ಗೆ ಪ್ರತಿಕ್ರಿಯಿಸಿರುವ ಹಿರಿಯ ನಟಿ ಜಯಮಾಲಾ, ಕಮಲ್ ಹಾಸನ್‌ಗೆ ಅವರ ತಪ್ಪು ಮನವರಿಕೆ ಮಾಡಬೇಕು. ಅವರು ತಿಳಿದು ಹೇಳಿದ್ರೋ, ತಿಳಿಯದೇ ಹೇಳಿದ್ರೋ ಗೊತ್ತಿಲ್ಲ. ಒಂದಂತೂ ಸತ್ಯ ತಮಿಳಿನಿಂದ ಕನ್ನಡ ಹುಟ್ಟಿಲ್ಲ. ಅವರು ಕ್ಷಮೆ ಕೇಳಬೇಕು. ಕಮಲ್ ಹೀಗೆಲ್ಲಾ ಮಾತನಾಡುವಾಗ ಶಿವಣ್ಣ ಸುಮ್ಮನಿದ್ದರು ಎಂಬ ವಿಚಾರಕ್ಕೆ ಪ್ರತಿಕ್ರಿಯಿಸಿ, ಶಿವಣ್ಣ ಅವರಿಗೆ ಅವತ್ತು ಗೊತ್ತಾಗಿಲ್ಲ. ಆರೋಗ್ಯ ದೃಷ್ಟಿಯಿಂದ ಸ್ವಲ್ಪ ಕುಗ್ಗಿದ್ದಾರೆ ಹೀಗಾಗಿ ಗೊತ್ತಾಗಿಲ್ಲ ಎಂದು ಹೇಳಿದರು.

ಕೆಆರ್‌ಎಸ್ ನೀರಿನ ಮಟ್ಟ



ಗರಿಷ್ಠ ಮಟ್ಟ	124.80 ಅಡಿ
ಬುಧವಾರ	95.35 ಅಡಿ
ಒಳಹರಿವು	26424 ಕ್ಯೂಸೆಕ್
ಹೊರಹರಿವು	529 ಕ್ಯೂಸೆಕ್

ಕಬಿನಿ ನೀರಿನ ಮಟ್ಟ



ಗರಿಷ್ಠ ಮಟ್ಟ	2284 ಅಡಿ
ಬುಧವಾರ	2273 ಅಡಿ
ಒಳಹರಿವು	25000 ಕ್ಯೂಸೆಕ್
ಹೊರಹರಿವು	000 ಕ್ಯೂಸೆಕ್

ಹಾರಂಗಿ ನೀರಿನ ಮಟ್ಟ



ಗರಿಷ್ಠ ಮಟ್ಟ	2859 ಅಡಿ
ಬುಧವಾರ	2840.55 ಅಡಿ
ಒಳಹರಿವು	3852 ಕ್ಯೂಸೆಕ್
ಹೊರಹರಿವು	230 ಕ್ಯೂಸೆಕ್

ಶ್ರೀ ಸಪ್ತಮಾತೃಕಾ ಚೌಡೇಶ್ವರಿ ದೇವಾಲಯದಲ್ಲಿ ಮಹಾ ರುದ್ರಹೋಮ





ಮೈಸೂರು ವಿಜಯನಗರದ ಶ್ರೀ ಸಪ್ತಮಾತೃಕಾ ದೇವಾಲಯದಲ್ಲಿ 20ನೇ ಪ್ರತಿಷ್ಠಾ ವರ್ಧಂತಿ ಅಂಗವಾಗಿ ಗುರುವಾರ ಶ್ರೀ ಮಹಾರುದ್ರ ಹೋಮ ನೆರವೇರಿತು. (ಬಲಚಿತ್ರ) ಅಮ್ಮನವರಿಗೆ ವಿಶೇಷ ಹೂವುಗಳಿಂದ ಅಲಂಕಾರ ಮಾಡಲಾಗಿತ್ತು.

ಮೈಸೂರು, ಮೇ 29- ಮೈಸೂರಿನ ವಿಜಯನಗರ ಮೂರನೇ ಹಂತ, ಶ್ರೀ ಸಪ್ತಮಾತೃಕಾ ಚೌಡೇಶ್ವರಿ ದೇವಸ್ಥಾನದ 20ನೇ ವಾರ್ಷಿಕ ಉತ್ಸವದ ಸಂದರ್ಭದಲ್ಲಿ ಬೃಹತ್ ಶ್ರೀ ರುದ್ರಹೋಮ ಹಮ್ಮಿಕೊಳ್ಳಲಾಗಿತ್ತು.

ಪ್ರಧಾನ ಆಚಾರ್ಯರಾದ ಯಜ್ಞೇಶ್ವರ ಐತಾಳ, ದತ್ತಾತ್ರೇಯ ಮಂಜುನಾಥ, ಸುಧಾಕರ ಭಟ್ಟ ಸೇರಿದಂತೆ 17 ಜನ ಶೃಂಗೇರಿ ಪೀಠದ ವಿದ್ವಾಂಸರು ಶ್ರೀಮಾತೆಯ ಸನ್ನಿಧಿಯಲ್ಲಿ ಯಜ್ಞ ಯಾಗಾದಿಗಳನ್ನು ನೆರವೇರಿಸಿದರು.

ಗುರುವಾರ ಬೆಳಗಿನಿಂದಲೇ ದೇವಾಲಯದ ಆವರಣದಲ್ಲಿ ವಾರ್ಷಿಕೋತ್ಸವದ ನಿಮಿತ್ತ ಹಬ್ಬದ ವಾತಾವರಣ ನಿರ್ಮಾಣವಾಗಿತ್ತು ನೂರಾರು ಮಹಿಳೆಯರು ಮುಂಜಾನೆ ಇಂದ ದೇವಿಗೆ ಮಡಿಲಕ್ಕಿ ತುಂಬುವ ಮತ್ತು ಹರಕೆ ಸಮರ್ಪಿಸುವ ಕಾರ್ಯದಲ್ಲಿ ನಿರತರಾಗಿದ್ದರು. ಹಲವರು ನಿಂಬೆಹಣ್ಣಿನ ಆರತಿ ಬೆಳಗಿ ಭಕ್ತಿಭಾವ ಸಮರ್ಪಿಸಿದರು. ಪ್ರಧಾನ ಆಚಾರ್ಯರು ಅಮ್ಮನವರಿಗೆ ವಿಶೇಷ ಹೂವುಗಳಿಂದ ಅಲಂಕಾರ ಮತ್ತು ಮಹಾ ಮಂಗಳಾರತಿ ನಡೆಸಿ ನೆರೆದಿದ್ದ ಭಕ್ತರಿಗೆ ಮಹಾಪ್ರಸಾದ ವಿತರಣೆ ಮಾಡಿದರು. ಟ್ರಸ್ಟಿ ಎಸ್.ಕೆ.ಭಾಸ್ಕರ ಸೇರಿದಂತೆ ದೇವಾಲಯ ಸಮಿತಿ ಸದಸ್ಯರು, ಪದಾಧಿಕಾರಿಗಳು ಈ ವೇಳೆ ಹಾಜರಿದ್ದರು. ಮೇ 30ರ ಬೆಳಗ್ಗೆ 8 ಗಂಟೆಗೆ ದೇವಾಲಯದ ಆವರಣದಲ್ಲಿ ಶ್ರೀ ನವಚಂಡಿಕಾ ಹೋಮ ನೆರವೇರಲಿದೆ. ಶುಕ್ರವಾರ 1 ಸಾವಿರ ಮಕ್ಕಳಿಗೆ ಅಕ್ಷರಾಭ್ಯಾಸ ಮತ್ತು ಪುಸ್ತಕ, ಲೇಖನಿ ವಿತರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಪ್ರಮುಖರು ತಿಳಿಸಿದ್ದಾರೆ.

ನ್ಯಾಯಾಧೀಶರು ಹಳ್ಳಿಗಳಿಗೆ ಭೇಟಿ ನೀಡಿ ಕಾನೂನಿನ ಬಗ್ಗೆ ಅರಿವು ಮೂಡಿಸಬೇಕು

ಉಪ ಲೋಕಾಯುಕ್ತ ವೀರಪ್ಪ ಸಲಹೆ



ಮಂಡ್ಯ ಜಿಲ್ಲೆಯ ನ್ಯಾಯಾಂಗ ಅಧಿಕಾರಿಗಳು, ವಕೀಲರು ಮತ್ತು ಲೋಕಾಯುಕ್ತ ಪೊಲೀಸ್ ಅಧಿಕಾರಿಗಳ ಉಪನ್ಯಾಸ ಕಾರ್ಯಕ್ರಮವನ್ನು ಉಪಲೋಕಾಯುಕ್ತ ಬಿ.ವೀರಪ್ಪ ಉದ್ಘಾಟಿಸಿದರು.

> "ಕಾರ್ಯಾಂಗವನ್ನು ಪಾಲಿಸುವುದು ಅಧಿಕಾರಿಗಳ ಕರ್ತವ್ಯವಾಗಿರುತ್ತದೆ. ಅಧಿಕಾರಿಗಳು ತಮಗೆ ನೀಡುವ ಸಂಬಳವನ್ನು ಹೇಗೆ ಪ್ರೀತಿಸುತ್ತಾರೋ ಹಾಗೆಯೇ ತಮಗೆ ನೀಡುವ ಕರ್ತವ್ಯಗಳನ್ನು ಸಹ ಪ್ರೀತಿಸಬೇಕಿದೆ. ಪಡೆಯುವ ಸಂಬಳಕ್ಕಾದರೂ ನ್ಯಾಯ ಒದಗಿಸುವಂತೆ ಕಾರ್ಯನಿರ್ವಹಿಸಬೇಕು. ಶಾಸಕಾಂಗವನ್ನು ಇನ್ನಷ್ಟು ಬಲಿಷ್ಠ ಪಡಿಸಬೇಕಾಗಿದ್ದು, ದೇಶದಲ್ಲಿ ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರ ಎಸಗುವ ಆರೋಪಿಗಳಿಗೆ ಗಲ್ಲುಶಿಕ್ಷೆ ವಿಧಿಸುವ ರೀತಿ ಶಾಸನಗಳು ರೂಪುಗೊಳ್ಳಬೇಕು. –ಬಿ.ವೀರಪ್ಪ, ಉಪಲೋಕಾಯುಕ್ತ

ಮಂಡ್ಯ, ಮೇ 29– ಸಾರ್ವಜನಿಕರಲ್ಲಿ ಕಾನೂನು ಅರಿವಿನ ಕೊರತೆಯಿದ್ದು, ಜಿಲ್ಲೆಯ ನ್ಯಾಯಾಧೀಶರು ತಿಂಗಳಿಗೆ ಒಂದೆರಡು ಬಾರಿ ಹಳ್ಳಿಗಳಿಗೆ ಭೇಟಿ ನೀಡಿ ಕಾನೂನಿನ ಬಗ್ಗೆ ಅರಿವು ಮೂಡಿಸಿ ಎಂದು ನ್ಯಾಯಮೂರ್ತಿ ಹಾಗೂ ಉಪ ಲೋಕಾಯುಕ್ತ ಬಿ.ವೀರಪ್ಪ ತಿಳಿಸಿದರು.

ಗುರುವಾರ ನಗರದ ಜಿಲ್ಲಾ ಪಂಚಾಯತ್ ಕಾವೇರಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಜಿಲ್ಲೆಯ ನ್ಯಾಯಾಂಗ ಅಧಿಕಾರಿಗಳು, ವಕೀಲರು ಮತ್ತು ಲೋಕಾಯುಕ್ತ ಪೊಲೀಸ್ ಅಧಿಕಾರಿಗಳ ಉಪನ್ಯಾಸ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಹಿರಿಯ ನ್ಯಾಯಾದೀಶರುಗಳು, ವಕೀಲರು ತಮ್ಮ ಕಾನೂನಿನ ಕೆಲಸದ ಜೊತೆಗೆ ಸಮಾಜ ಸೇವೆಯನ್ನು ಸಹ ಮಾಡಬೇಕಾಗಿದೆ. ಜನರ ನೋವಿಗೆ ಹಾಗೂ ಸಮಸ್ಯೆಗಳಿಗೆ ಸ್ಪಂದಿಸುವುದು ನಮ್ಮ ಜವಾಬ್ದಾರಿಯಾಗಿರುತ್ತದೆ ಎಂದರು.

ಶಾಸಕಾಂಗ, ನ್ಯಾಯಾಂಗ, ಕಾರ್ಯಾಂಗ ಅದರೊಟ್ಟಿಗೆ ಪತ್ರಿಕಾರಂಗಗಳು ನಿಸ್ವಾರ್ಥದಿಂದ ಕೆಲಸ ನಿರ್ವಹಿಸಬೇಕಿದೆ. ವಕೀಲರು ನ್ಯಾಯಾಂಗದ ಒಂದು ಭಾಗವಾಗಿದ್ದು, ನ್ಯಾಯಾಂಗವನ್ನು ಬಲಿಷ್ಠಪಡಿಸುವಲ್ಲಿ ವಕೀಲರ ಪಾತ್ರ ಪ್ರಮುಖವಾಗಿರುತ್ತದೆ. ಹಾಗಾಗಿ ವಕೀಲರು ಆತ್ಮಸ್ಥೈರ್ಯದಿಂದ ಕೆಲಸನಿರ್ವಹಿಸಿ ಎಂದು ಹೇಳಿದರು.

ಪತ್ರಿಕಾರಂಗವು ಶಕ್ತಿಯುತವಾದ ಕ್ಷೇತ್ರವಾಗಿದ್ದು, ಒಂದು ಲೇಖನಿಯಿಂದ ಸಮಾಜದ ತೊಂದರೆಗಳನ್ನು ಸರಿಪಡಿಸಬಹುದು. ಮಾಧ್ಯಮಗಳು ಯಾವುದೇ ಆಮಿಷಕ್ಕೂ ಬಲಿಯಾಗಬಾರದು. ಪ್ರತಿದಿನ ಮಾಧ್ಯಮಗಳಲ್ಲಿ ಯೋಧರನ್ನು ಕುರಿತು ಕಾರ್ಯಕ್ರಮಗಳನ್ನು ಪ್ರಸಾರ ಮಾಡಿ ಯುವಜನತೆಯಲ್ಲಿ ದೇಶಪ್ರೇಮವನ್ನು ತುಂಬಬೇಕು. ಯುವ ವಕೀಲರು ನ್ಯಾಯಾಂಗದ ಬೆನ್ನೆಲುಬು ಇದ್ದಂತೆ. ಮೊದಲಿಗೆ ನಿಮ್ಮನ್ನು ನೀವು ನಂಬಿದಾಗ ಯಶಸ್ಸು ನಿಮ್ಮದಾಗುತ್ತದೆ. ಕೆಚ್ಚೆದೆಯಿಂದ, ನಿಸ್ವಾರ್ಥವಾಗಿ, ಶ್ರದ್ಧೆಯಿಂದ ಹಾಗೂ ನ್ಯಾಯಯುತವಾಗಿ ಜನರ ಸೇವೆ ಸಲ್ಲಿಸಿ. ನಿಮ್ಮಲ್ಲಿ ನ್ಯಾಯ ಬೇಡುವವರಿಗೆ ಅನ್ಯಾಯವಾಗಬಾರದು ಎಂದು ತಿಳುವಳಿಕೆಯ ಮಾತುಗಳನ್ನು ಹೇಳಿದರು.

ಲೋಕಾಯುಕ್ತ ಸಂಸ್ಥೆಯು ರಾಷ್ಟ್ರದಲ್ಲಿಯೇ ಬಲಿಷ್ಠವಾದ ಸಂಸ್ಥೆ. ಅನ್ಯಾಯ, ಭ್ರಷ್ಟಾಚಾರ ಹಾಗೂ ದುರಾಡಳಿತ ಕಂಡುಬಂದಲ್ಲಿ ಹಿಂಜರಿಯದೆ, ಹೆದರದೆ ಕ್ರಮಕೈಗೊಳ್ಳುತ್ತದೆ. ಜನರ ಸೇವೆ ಮಾಡುವುದು ಪ್ರತಿಯೊಬ್ಬ ಅಧಿಕಾರಿಯ ಕರ್ತವ್ಯವಾಗಿದೆ. ತಮ್ಮ ಪಾಲಿನ ಕೆಲಸ ನಿಭಾಯಿಸದೆ ಲೋಕಾಯುಕ್ತ ಸಂಸ್ಥೆಯ ಕೆಂಗಣ್ಣಿಗೆ ಗುರಿಯಾಗಬೇಡಿ ಎಂದು ಎಚ್ಚರಿಸಿದರು. ಜಿಲ್ಲಾ ನ್ಯಾಯಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ಬ್ಯಂಗೇಶ್ ಮಾತನಾಡಿ, ವಕೀಲರು ಸಾರ್ವಜನಿಕರ ಕಷ್ಟವನ್ನು ಅರಿಯುವ ಗುಣ ಬೆಳೆಸಿಕೊಳ್ಳಬೇಕಾಗಿದ್ದು, ಕಷ್ಟವನ್ನು ಅರಿತಾಗ ನ್ಯಾಯದ ಅರಿವಾಗುತ್ತದೆ ಹಾಗಾಗಿ ಸಮಾಜದಲ್ಲಿನ ಕುಂದು–ಕೊರತೆಯನ್ನು ಹೋಗಲಾಡಿಸಲು, ಸಮಸ್ಯೆಗಳನ್ನು ಹೋಗಲಾಡಿಸಲು ಕೈಜೋಡಿಸಿ ಎಂದರು. ಕಾರ್ಯಕ್ರಮದಲ್ಲಿ ಕರ್ನಾಟಕ ಲೋಕಾಯುಕ್ತದ ಉಪ ನಿಬಂಧಕರಾದ ಅರವಿಂದ್, ಮಿಲನ, ಜಿಲ್ಲಾ ಕಾನೂನು ಸೇವೆ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಆನಂದ್, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ರಾಜೇಂದ್ರ, ಜಿಲ್ಲಾ ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿ ಸಿದ್ಧರಾಜು, ಹಾಗೂ ಅಪರ ಜಿಲ್ಲಾಧಿಕಾರಿ ಬಿ.ಸಿ.ಶಿವಾನಂದ ಮೂರ್ತಿ, ಹಿರಿಯ ಸಿವಿಲ್ ನ್ಯಾಯಧೀಶರುಗಳು ಸೇರಿದಂತೆ ಇನ್ನಿತರರಿದ್ದರು.

ಅಂಬಿ ಸ್ಮಾರಕ, ಪುತ್ಥಳಿಗೆ ಸುಮಲತಾ, ಅಭಿಷೇಕ್ ಪೂಜೆ



ದೊಡ್ಡರಸಿನಕೆರೆಯಲ್ಲಿ ಅಭಿಮಾನಿಗಳು ನಿರ್ಮಿಸಿರುವ ಅಂಬರೀಶ್ ಪುತ್ಥಳಿಗೆ ಸಂಸದೆ ಸುಮಲತಾ ಅಂಬರೀಶ್ ಭೇಟಿ ನೀಡಿ ಪೂಜೆ ಸಲ್ಲಿಸಿದರು.

ಭಾರತೀನಗರ, ಮೇ 29– ಚಿತ್ರನಟ ಅಂಬರೀಶ್ ಅವರ ಹುಟ್ಟುಹಬ್ಬದ ಅಂಗವಾಗಿ ಇಲ್ಲಿಗೆ ಸಮೀಪದ ದೊಡ್ಡರಸಿನಕೆರೆಯಲ್ಲಿ ಅಭಿಮಾನಿಗಳು ನಿರ್ಮಿಸಿರುವ ಅಂಬರೀಶ್ ಪುತ್ಥಳಿಗೆ ಹಾಗೂ ಸ್ಮಾರಕಕ್ಕೆ ಮಾಜಿ ಸಂಸದೆ ಸುಮಲತಾಅಂಬರೀಶ್ ಅವರು ಪೂಜೆ ಸಲ್ಲಿಸಿದರು.

ಗ್ರಾಮದಲ್ಲಿರುವ ಅಂಬಿ ಸರ್ಕಲ್‌ಗೆ ಭೇಟಿ ನೀಡಿ ಅಂಬರೀಶ್ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಕೇಕ್ ಕತ್ತರಿಸಿ ಅಭಿಮಾನಿಗಳಿಗೆ ಸಿಹಿ ತಿನಿಸಿದರು. ಇದಕ್ಕೂ ಮೊದಲು ಗ್ರಾಮದ ಮುಖ್ಯದ್ವಾರದಲ್ಲಿ ನಿರ್ಮಿಸಿರುವ ಅಂಬರೀಶ್ ಅವರ ಸ್ಮಾರಕಕ್ಕೆ ಪೂಜೆ ಸಲ್ಲಿಸಿ ಅಲ್ಲೂ ಸಹ ಅಂಬರೀಶ್ ಅವರ ಹುಟ್ಟುಹಬ್ಬವನ್ನು ಅಭಿಮಾನಿಗಳೊಂದಿಗೆ ಸುಮಲತಾ ಅಂಬರೀಶ್ ಅವರು ಕೇಕ್ ಕತ್ತರಿಸಿ ಸಂಭ್ರಮಿಸಿದರು. ಇದೇ ಸಂದರ್ಭದಲ್ಲಿ ಅಭಿಮಾನಿಗಳು ಅಂಬರೀಶ್‌ಗೆ ಜೈಕಾರ ಹಾಕಿ ಅಂಬಿಯಣ್ಣ ಮತ್ತೆ ಹುಟ್ಟಿ ಬಾ ಎಂದು ಕೂಗಿದರು.

ಅಭಿಷೇಕ್ ಅಂಬರೀಶ್ ಭೇಟಿ: ಸುಮಲತಾ ಅಂಬರೀಶ್ ಅವರು ಪೂಜೆ ಸಲ್ಲಿಸಿ ತೆರಳಿದ ನಂತರ ಅಭಿಷೇಕ್ ಅಂಬರೀಶ್ ಅವರು ಸಹ ಗ್ರಾಮಕ್ಕೆ ಭೇಟಿ ನೀಡಿ ಅಂಬರೀಶ್ ಅವರ ಪುತ್ಥಳಿಗೆ ಮತ್ತು ಸ್ಮಾರಕಕ್ಕೆ ಪೂಜೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ನಿರ್ಮಾಪಕ ಹಾಗೂ ಚಿತ್ರ ನಟ ರಾಕ್‌ಲೈನ್ ವೆಂಕಟೇಶ್, ಚಿತ್ರ ನಟರಾದ ಕುಮಾರ್‌ಬಂಗಾರಪ್ಪ, ರಾಗಿಣಿ, ನಿರ್ಮಾಪಕ ಭಾಮಹರೀಶ್, ಡಿ.ಪಿ.ಶಂಕರ್, ಪುಟ್ಟರಾಜು, ಅಂಬಿ ಸರ್ಕಲ್ ಅಧ್ಯಕ್ಷ ಡಿ.ಸಿ. ಮಹೇಶ್, ರಘು, ಶಿವಕುಮಾರ್, ಮಧನ್ ಕುಮಾರ್, ಶಶಿಕುಮಾರ್, ಕೆ.ಟಿ. ಪ್ರದೀಪ್, ವಾಟರ್ ಮ್ಯಾನ್ ನೀರಜ್, ಸುನೀಲ್‌ಕುಮಾರ್, ಜೀವನ್, ಹಾಗಲ ಹಳ್ಳಿ ಬಸವರಾಜು, ಪ್ರಸನ್ನ, ಸೇರಿದಂತೆ ಹಲವರಿದ್ದರು.

ಶ್ರೀರಂಗಪಟ್ಟಣದಲ್ಲಿ ಅಂಬಿ ಹುಟ್ಟುಹಬ್ಬ ಆಚರಣೆ



ಅಂಬಿ ಹುಟ್ಟುಹಬ್ಬದ ಅಂಗವಾಗಿ ಆಸ್ಪತ್ರೆಯ ಒಳರೋಗಿಗಳಿಗೆ ಹಣ್ಣು ಹಂಪಲು ವಿತರಿಸಲಾಯಿತು.

ಶ್ರೀರಂಗಪಟ್ಟಣ: ದಿವಂಗತ ನಟ ಅಂಬರೀಶ್ ಅವರ 73ನೇ ವರ್ಷದ ಹುಟ್ಟು ಹಬ್ಬವನ್ನು ಅಭಿಮಾನಿಗಳ ಸಂಘದ ವತಿಯಿಂದ ಆಚರಿಸಲಾಯಿತು.

ಸಂಘದ ಗೌರವಾಧ್ಯಕ್ಷ ಎಸ್.ಎಲ್.ಲಿಂಗರಾಜು ನೇತೃತ್ವದಲ್ಲಿ ಪಟ್ಟಣದ ಕುವೆಂಪು ವೃತ್ತದಲ್ಲಿ ಅಭಿಮಾನಿಗಳು ಜಮಾಯಿಸಿ ಅಂಬರೀಶ್ ಭಾವಚಿತ್ರಕ್ಕೆ ಹಾಲಿನ ಅಭಿಷೇಕ ಮಾಡಿ, ಹಣ್ಣು ಕಾಯಿ ಪೂಜೆ ಸಲ್ಲಿಸಿ ಹುಟ್ಟು ಹಬ್ಬವನ್ನು ಆಚರಿಸಿದರು.

ನಂತರ ಎಸ್.ಎಲ್.ಲಿಂಗರಾಜು ಮಾತನಾಡಿ, ಅಂಬರೀಶ್ ಅಣ್ಣ ಅವರ ಹುಟ್ಟು ಹಬ್ಬವನ್ನು ಪ್ರತೀ ವರ್ಷವೂ ಪಕ್ಷಾತೀತವಾಗಿ ಆಚರಿಸಿಕೊಂಡು ಬರುತ್ತಿದ್ದೇವೆ. ನಟ ರೇಬಲ್ ಸ್ಟಾರ್ ಅಂಬರೀಶ್ ಅವರ ಗುಣಗಳು ಇತ್ತೀಚಿನ ನಟರಿಗೆ ಮಾರ್ಗದರ್ಶನವಾಗಬೇಕು. ಒಬ್ಬ ನಟನಾಗಿ ಸಂಸದ, ಸಚಿವರಾಗಿ ರಾಜ್ಯದ ಗಮನ ಸೆಳೆದ ನಟ ಎಂದು ತಿಳಿಸಿದರು.

ಹಣ್ಣು ವಿತರಣೆ: ಅಭಿಮಾನಿ ಸಂಘದ ಮುಖಂಡರಿಂದ ಆಸ್ಪತ್ರೆಯಲ್ಲಿ ರೋಗಿಗಳಿಗೆ ಬ್ರೆಡ್ಡು, ಹಣ್ಣು ವಿತರಣೆ ಮಾಡಿ ಸಾರ್ವಜನಿಕರಿಗೆ ಸಿಹಿ ಹಂಚಿಕೆ ಮಾಡಲಾಯಿತು.

ಈ ವೇಳೆ ಅಂಬರೀಶ್ ಅಭಿಮಾನಿ ಸಂಘದ ಅಧ್ಯಕ್ಷ ಮಹೇಶ್, ಕೂಡಲಕುಪ್ಪೆ ಗೋಪಾಲ್, ಮನ್‌ಮುಲ್ ಮಾಜಿ ನಿರ್ದೇಶಕ ಎಂ.ಜೆ. ಪುಟ್ಟರಾಜು, ಪುರಸಭೆ ಮಾಜಿ ಸದಸ್ಯರಾದ ಪಾಪಣ್ಣಿ ಸುನೀಲ್, ಮಂಡ್ಯ ರಕ್ಷಣಾ ವೇದಿಕೆ ಅಧ್ಯಕ್ಷ ಬಿ.ಶಂಕರ್ ಬಾಬು, ಉಪಾಧ್ಯಕ್ಷ ಜಗದೀಶ್, ಅಗ್ರಹಾರ ಶಿವರಾಂ, ಟೋಕನ್ ಮಂಜು, ಮುಂಡುಗದೊರೆ ಮೋಹನ್, ನಗುವನಹಳ್ಳಿ ಮಹದೇವಸ್ವಾಮಿ, ರವಿಚಂದ್ರ, ಮಹದೇವಸ್ವಾಮಿ, ಸಿ.ಸ್ವಾಮೀಗೌಡ, ನೆಲಮನೆ ಹರೀಶ್, ನಗುವನಹಳ್ಳಿ ವೆಂಕಟೇಶ್, ಮಹದೇವಸ್ವಾಮಿ, ತಮ್ಮಣ್ಣ, ನಾಗರಾಜು, ಗಂಜಾಂ ಕುಮಾರ್, ಕೃಷ್ಣ ಸೇರಿದಂತೆ ಇತರ ಅಭಿಮಾನಿ ಹಿತೈಷಿಗಳು ಭಾಗವಹಿಸಿದ್ದರು.

ನಾಳೆ ಕಾರ್ಮಿಕ ರತ್ನ ಪ್ರಶಸ್ತಿ ಪ್ರದಾನ

ಮಂಡ್ಯ, ಮೇ 29– ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಾಂಗ್ರೆಸ್ ವಿಭಾಗದ ವತಿಯಿಂದ ಕಾಂಗ್ರೆಸ್ ಜಿಲ್ಲಾ ಕಾರ್ಯಕಾರಣಿ ಸಭೆ ಹಾಗೂ ಕಾರ್ಮಿಕರ ದಿನಾಚರಣೆ ಪ್ರಯುಕ್ತ ಕಾರ್ಮಿಕ ರತ್ನ ಪ್ರಶಸ್ತಿ, ಕಾರ್ಮಿಕ ಕಾರ್ಡ್ ವಿತರಣೆ ಹಾಗೂ ನೋಂದಣಿ ಕಾರ್ಯಕ್ರಮವನ್ನು ಮೇ 31ರ ಬೆಳಗ್ಗೆ 11ಕ್ಕೆ ನಗರದ ರೈತ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಕಾಂಗ್ರೆಸ್ ಕಾರ್ಮಿಕ ವಿಭಾಗದ ಜಿಲ್ಲಾಧ್ಯಕ್ಷ ಕೆ.ಎಂ.ರಾಮಕೃಷ್ಣ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮದಲ್ಲಿ ಜಿಲ್ಲೆಯ ಎಲ್ಲಾ ಕಾರ್ಮಿಕರು ಭಾಗವಹಿಸಲಿದ್ದು, ಅಂದು 1500ರಿಂದ 2000 ಕಾರ್ಮಿಕರ ನೋಂದಣಿ ಮಾಡಲಾಗುವುದು ಎಂದರು.

ಕತ್ತರಘಟ್ಟ ಗ್ರಾಮದ ಯುವಕನ ಅನುಮಾನಾಸ್ಪದ ಸಾವಿನ ಪ್ರಕರಣ

ಸಮಗ್ರ ತನಿಖೆ ನಡೆಸಿ, ವರದಿ ಸಲ್ಲಿಸಲು ಶಾಸಕ ನರೇಂದ್ರಸ್ವಾಮಿ ಸೂಚನೆ



ಘಟನಾ ಸ್ಥಳಕ್ಕೆ ಸಮಿತಿ ಸದಸ್ಯರು ಭೇಟಿ ನೀಡಿ ಪರಿಶೀಲನೆ ನಡೆಸುತ್ತಿರುವುದು.

ಕೆ.ಆರ್.ಪೇಟೆ,ಮೇ29– ತಾಲೂಕಿನ ಕತ್ತರಘಟ್ಟ ಗ್ರಾಮದ ದಲಿತ ಯುವಕ ಜಯಕುಮಾರ್ ಸಾವಿನ ಬಗ್ಗೆ ಹಲವು ಅನುಮಾನಗಳು ವ್ಯಕ್ತವಾಗಿದ್ದು, ಸಮಗ್ರ ತನಿಖೆ ನಡೆಸಿ, ಸೂಕ್ತ ವರದಿ ಸಲ್ಲಿಸುವಂತೆ ಜಿಲ್ಲಾಡಳಿತಕ್ಕೆ ಸೂಚಿಸಲಾಗಿದೆ ಎಂದು ವಿಧಾನ ಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ ಅಧ್ಯಕ್ಷ ಹಾಗೂ ಶಾಸಕ ಪಿ.ಎಂ.ನರೇಂದ್ರಸ್ವಾಮಿ ತಿಳಿಸಿದರು.

ಸದನ ಸಮಿತಿ ಸದಸ್ಯರು, ವಿಧಾನಸಭೆ ಸಚಿವಾಲಯ ಹಾಗೂ ಮಂಡ್ಯ ಜಿಲ್ಲಾಡಳಿತ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳ ತಂಡ ಗುರುವಾರ ಬೆಳಗ್ಗೆ ಕೆ.ಆರ್. ಪೇಟೆ ಪಟ್ಟಣದ ಪ್ರವಾಸಿ ಮಂದಿರಕ್ಕೆ ಆಗಮಿಸಿ ಅಧಿಕಾರಿಗಳಿಂದ ಮಾಹಿತಿ ಪಡೆದು, ಮೃತ ಜಯಕುಮಾರ್ ಸ್ವಗ್ರಾಮ ಕತ್ತರಘಟ್ಟದ ನಿವಾಸ ಹಾಗೂ ಘಟನೆ ನಡೆದ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದರು.

ಸುಟ್ಟುಕರಕಲಾಗಿರುವ ಸ್ಥಿತಿಯಲ್ಲಿ ದೊರೆತಿರುವ ಶವದ ಸಾವಿನ ಬಗ್ಗೆ ಹಲವು ಅನುಮಾನಗಳು ವ್ಯಕ್ತವಾಗುತ್ತಿದ್ದು, ಮೃತ ಕುಟುಂಬಸ್ಥರ ಜೊತೆ ಸಮಗ್ರವಾಗಿ ಚರ್ಚಿಸಿ ಮಾಹಿತಿ ಪಡೆಯಲಾಗಿದೆ ಪೊಲೀಸ್ ಹಾಗೂ ಜಿಲ್ಲಾಡಳಿತದ ಪ್ರಮುಖರೊಂದಿಗೂ ಚರ್ಚಿಸಲಾಗಿದ್ದು, ಘಟನೆಯ ಆರಂಭಿಕ ವೈಫಲ್ಯ ಹೊರತುಪಡಿಸಿ, ಪ್ರಸ್ತುತ ತನಿಖೆ ಸರಿದಾರಿಯಲ್ಲಿ ಸಾಗುತ್ತಿದ್ದು, ಸಮಗ್ರ ತನಿಖೆಗೆ ನಿರ್ದೇಶಿಸಲಾಗಿದೆ ಎಂದರು.

ಮೃತನ ವಾರಸುದಾರರಿಂದ ಘಟನೆಯ ಸಮಗ್ರ ಮಾಹಿತಿ ಅರಿತು ಕುಟುಂಬಕ್ಕೆ ರಕ್ಷಣೆ, ಸದರಿ ಜಮೀನು ಹಸ್ತಾಂತರ, ಕುಟುಂಬಕ್ಕೆ ಅಗತ್ಯವಿರುವ ಮೂಲಸೌಕರ್ಯ ಒದಗಿಸಲು ಸಮಾಜ ಕಲ್ಯಾಣ ಇಲಾಖೆಗೆ ನಿರ್ದೇಶನ ನೀಡಲಾಗಿದೆ ಎಂದು ತಿಳಿಸಿದರು.

ಹಲವು ಅನುಮಾನ: ಮೃತ ಜಯಕುಮಾರ್ ಸಾವಿನ ಬಗ್ಗೆ ಹಲವು ಅನುಮಾನಗಳು ಕುಟುಂಬಸ್ಥರಿಂದ ವ್ಯಕ್ತವಾಗಿದ್ದು, ಸೂಕ್ಷ್ಮತೆ ಅರಿತು ತನಿಖೆ ನಡೆಸುವಂತೆ ಪೊಲೀಸ್ ಹಾಗೂ ಜಿಲ್ಲಾಡಳಿತಕ್ಕೆ ಸೂಚಿಸಲಾಗಿದ್ದು, ವಾಸ್ತವ ವರದಿ ಆಧರಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಮೃತ ಜಯಕುಮಾರ್ ಸಾವಿಗೂ ಮುನ್ನ ರೌಡಿಶೀಟರ್ ವ್ಯಕ್ತಿಯೊಬ್ಬನ ಮೇಲೆ ದೂರು ನೀಡಿದ್ದರೂ, ನಿರ್ಲಕ್ಷ್ಯ ವಹಿಸಿರುವ ಪೊಲೀಸರ ಆರಂಭಿಕ ವೈಫಲ್ಯ ಸೇರಿದಂತೆ ಎಲ್ಲಾ ಆಯಾಮಗಳಿಂದಲೂ ತನಿಖೆ ನಡೆಸುವಂತೆ ಸೂಚಿಸಲಾಗಿದೆ ಎಂದು ಹೇಳಿದರು.

ಇದಕ್ಕೂ ಮುನ್ನ ಸದನ ಸಮಿತಿ ಸದಸ್ಯರಾದ ಹಂಪಣ್ಣನಾಯಕ್, ಚಂದ್ರಪ್ಪ ಪ್ರಸಾದ್ ಅಬ್ಬಯ್ಯ, ಡಾ.ತಿಮ್ಮಯ್ಯ, ನಾಗರೀಕ ಹಕ್ಕು ಜಾರಿ ನಿರ್ದೇಶಾಲಯದ ಎಡಿಜಿಪಿ ಅರುಣ್ ಚಕ್ರವರ್ತಿ, ಸಮಾಜ ಕಲ್ಯಾಣ ಇಲಾಖೆ ಆಯುಕ್ತ ರಾಕೇಶ್‌ಕುಮಾರ್, ದಕ್ಷಿಣ ವಲಯ ಪೊಲೀಸ್ ಮಹಾನಿರೀಕ್ಷಕ ಬೋರಲಿಂಗಯ್ಯ, ಡಿಸಿಆರ್‌ಇ ವಿಭಾಗದ ಪೊಲೀಸ್ ವರಿಷ್ಠಾಧಿಕಾರಿ ಧರಣಿದೇವಿ ಮಾಲಗತ್ತಿ, ಜಿಲ್ಲಾಧಿಕಾರಿ ಡಾ.ಕುಮಾರ, ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಎಎಸ್ಪಿ ತಿಮ್ಮಯ್ಯ, ಸಮಾಜ ಕಲ್ಯಾಣಾಧಿಕಾರಿ ಸಿದ್ದಲಿಂಗೇಶ್, ಎಸಿ ಶ್ರೀನಿವಾಸ್ ಉಪಸ್ಥಿತಿಯಲ್ಲಿ ಸಭೆ ನಡೆಯಿತು.

ಒಂದನೇ ಪುಟದಿಂದ

ಸಿಎಂಗೆ ಹೈಕಮಾಂಡ್ ಬುಲಾವ್

ಅವರಿಗೆ ಪತ್ರ ಬರೆದು, ಆಗಿರುವ ವರ್ಗಾವಣೆ ತಡೆಹಿಡಿಯಬೇಕು, ನನ್ನ ಇಲಾಖೆಗೆ ಒಳಪಡುವ ವಿಭಾಗಗಳಿಗೆ ಸಂಬಂಧಿಸಿದಂತೆ ವರ್ಗಾವಣೆ, ನೇಮಕಾತಿ ಆದೇಶಕ್ಕೆ ನನ್ನ ಅನುಮತಿ ಬೇಕು ಎಂದಿದ್ದಾರೆ.

ಡಿಪಿಎಆರ್‌ನಿಂದ ಆದೇಶ ಹೊರಡಿಸಬೇಕಾದರೆ ನನ್ನ ಪೂರ್ವಾನುಮತಿ ಪಡೆದ ನಂತರವೇ ಹೊರಡಿಸಬೇಕು. ಈ ಸರ್ಕಾರ ಅಸ್ತಿತ್ವಕ್ಕೆ ಬಂದ ಆರಂಭದಲ್ಲಿಯೇ ಟಿಪ್ಪಣಿ ಮೂಲಕ ನಿಮಗೆ ಇವೆಲ್ಲವನ್ನೂ ತಿಳಿಸಲಾಗಿತ್ತು. ಅಲ್ಲದೆ, ಮುಖ್ಯ ಎಂಜಿನಿಯರ್‌ಗಳ ಕರ್ತವ್ಯಕ್ಕೆ ಸಂಬಂಧಿಸಿದ ಕಾರ್ಯವ್ಯಾಪ್ತಿಯನ್ನು ಜಲಸಂಪನ್ಮೂಲ ಇಲಾಖೆಯಿಂದ ಡಿಪಿಎಆರ್‌ಗೆ ವಹಿಸುವ ಕಡತದಲ್ಲಿಯೂ ಸೂಚನೆ ಕೊಡಲಾಗಿತ್ತು.

ನನ್ನ ಗಮನಕ್ಕೆ ತಂದು, ನನ್ನ ಅನುಮೋದನೆ ಪಡೆದ ನಂತರವೇ ಡಿಪಿಎಆರ್‌ನಿಂದ ಆದೇಶ ಹೊರಡಿಸಬಹುದೆಂದು ಸ್ಪಷ್ಟ ಸೂಚನೆ ನೀಡಿದ್ದೇನೆ. ಆದಾಗ್ಯೂ, ಮೇ 9ರಂದು ಹೊರಡಿಸಿದ ಆದೇಶದಲ್ಲಿ ನನ್ನ ಅನುಮೋದನೆ ಪಡೆಯದೆ ಕೆಲವು ಮುಖ್ಯ ಎಂಜಿನಿಯರ್‌ಗಳನ್ನು ಜಲಸಂಪನ್ಮೂಲ ಇಲಾಖೆಗೆ ವರ್ಗಾವಣೆ ಮಾಡಿರುವುದು ನನ್ನ ಗಮನಕ್ಕೆ ಬಂದಿದೆ.

ನನ್ನ ಸೂಚನೆ ಕಡೆಗಣಿಸಿ ಆದೇಶ ಹೊರಡಿಸಿರುವುದನ್ನು ಆಕ್ಷೇಪಿಸುತ್ತಿದ್ದೇನೆ. ಆದುದರಿಂದ ಈ ಆದೇಶವನ್ನು ಕೂಡಲೇ ವಾಪಸು ಪಡೆಯಬೇಕು. ಇಂತಹ ವಿಚಾರಗಳ ಬಗ್ಗೆ ಯಾವುದೇ ಆದೇಶ ಹೊರಡಿಸಬೇಕಾದರೆ ನನ್ನ ಪೂರ್ವಾನುಮತಿ ಪಡೆಯಬೇಕು ಎಂದು ಖಡಕ್ ಆಗಿ ತಿಳಿಸಿದ್ದಾರೆ.

ಆದೇಶಕ್ಕೆ ಸುಪ್ರೀಂಕೋರ್ಟ್ ತಡೆ!

ನಿಗದಿಪಡಿಸಿದೆ. ಬೆಂಗಳೂರು ಅರಮನೆ ಮೈದಾನದ ಬಳಿ ರಸ್ತೆ ಅಗಲೀಕರಣಕ್ಕಾಗಿ ಒಟ್ಟು 15.36 ಎಕರೆ ಜಮೀನು ಭೂಸ್ವಾಧೀನಕ್ಕೆ ರಾಜ್ಯ ಸರ್ಕಾರ ಉದ್ದೇಶಿಸಿತ್ತು ಇದರ ವಿರುದ್ಧ ರಾಜಮನೆತನದವರು ಸುಪ್ರೀಂಕೋರ್ಟ್ ಮೆಟ್ಟಿಲೇರಿದ್ದರು. ಎಕರೆಗೆ 200 ಕೋಟಿ ರೂಪಾಯಿಯಂತೆ 3,400 ಕೋಟಿ ರೂ. ಟಿಡಿಆರ್ ಪರಿಹಾರ ನೀಡುವಂತೆ ಸುಪ್ರೀಂಕೋರ್ಟ್ ಸೂಚಿಸಿತ್ತು.

ಆದರೆ ಟಿಡಿಆರ್ ನೀಡಲು ಒಪ್ಪದ ಸರ್ಕಾರ ಸುಗ್ರೀವಾಜ್ಞೆ ಅಸ್ತ್ರ ಹೂಡಿತ್ತು. ಹೀಗಾಗಿ ಸುಗ್ರೀವಾಜ್ಞೆ ಮತ್ತು ಪರಿಹಾರ ನೀಡದ್ದಕ್ಕೆ ರಾಜಮನೆತನ ರಾಜ್ಯ ಸರ್ಕಾರದ ವಿರುದ್ಧ ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸಿತ್ತು. ನ್ಯಾಯಾಂಗ ನಿಂದನೆ ಅರ್ಜಿಯ ವಿಚಾರಣೆ ನಡೆಸಿದ್ದ ಸುಪ್ರೀಂಕೋರ್ಟ್ ಮೇ 22 ರಂದು ಟಿಡಿಆರ್ ಪಾವತಿ ಮಾಡುವಂತೆ ಆದೇಶ ನೀಡಿತ್ತು. ಆ ಆದೇಶವನ್ನು ಮರುಪರಿಶೀಲಿಸುವಂತೆ ಕರ್ನಾಟಕ ಸರ್ಕಾರ ಮನವಿ ಮಾಡಿತ್ತು.

ಈ ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂಕೋರ್ಟ್ ಇದೀಗ ಟಿಡಿಆರ್ ಹಸ್ತಾಂತರಕ್ಕೆ ತಡೆ ನೀಡಿದೆ. ಕರ್ನಾಟಕ ಸರ್ಕಾರದ ಪರವಾಗಿ ಹಿರಿಯ ವಕೀಲ ಕಪಿಲ್ ಸಿಬಲ್ ಸಲ್ಲಿಸಿದ ಅರ್ಜಿಯನ್ನು ಆಲಿಸಿದ ನಂತರ ನ್ಯಾಯಾಲಯವು ಈ ಆದೇಶವನ್ನು ಹೊರಡಿಸಿದೆ. ಕರ್ನಾಟಕ ಸರ್ಕಾರದ ಪರವಾಗಿ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ ಮತ್ತು ಹೆಚ್ಚುವರಿ ಅಡ್ವೊಕೇಟ್ ಜನರಲ್ ನಿಶಾಂತ್ ಪಾಟೀಲ್ ವಿಚಾರಣೆಗೆ ಹಾಜರಾಗಿದ್ದರು.

ವಾಪಸ್ ಆದೇಶ ರದ್ದುಗೊಳಿಸಿದ ಹೈಕೋರ್ಟ್

ನ್ಯಾ.ಕೆ.ವಿ.ಅರವಿಂದ್ ಒಳಗೊಂಡ ದ್ವಿಸದಸ್ಯ ಪೀಠ ಇಂದು ರಾಜ್ಯ ಸರ್ಕಾರದ ಆದೇಶವನ್ನು ರದ್ದುಗೊಳಿಸಿ ಆದೇಶ ಹೊರಡಿಸಿದೆ.

ಸಾಮಾಜಿಕ ಮಾಧ್ಯಮದಲ್ಲಿ ವಿವಾದಾತ್ಮಕ ಪೋಸ್ಟ್ ವಿಷಯಕ್ಕೆ ಸಂಬಂಧಿಸಿದಂತೆ ಹಲವಾರು ಪೊಲೀಸ್ ಸಿಬ್ಬಂದಿಯ ಮೇಲೆ ಗುಂಪೊಂದು ದಾಳಿ ಮಾಡಿ, ಹಲ್ಲೆ ನಡೆಸಿದ್ದ 2022ರ ಹುಬ್ಬಳ್ಳಿ ಗಲಭೆ ಪ್ರಕರಣ ಸೇರಿದಂತೆ ಈ 43 ಪ್ರಕರಣಗಳಲ್ಲಿ ಕೆಲವು ಆರೋಪಿಗಳ ವಿರುದ್ಧ ಕಾನೂನುಬಾಹಿರ ಚಟುವಟಿಕೆಗಳ(ತಡೆಗಟ್ಟುವಿಕೆ) ಕಾಯ್ದೆ, 1967, ಸಾರ್ವಜನಿಕ ಆಸ್ತಿ ನಾಶ ತಡೆ ಕಾಯ್ದೆ, 1984 ಮತ್ತು ಧಾರ್ಮಿಕ ಸಂಸ್ಥೆ (ದುರುಪಯೋಗ ತಡೆ) ಕಾಯ್ದೆ, 1988ರ ಅಡಿಯಲ್ಲಿ ಗಂಭೀರ ಆರೋಪಗಳನ್ನು ಹೊರಿಸಲಾಗಿದೆ ಎಂದು ಅರ್ಜಿಯಲ್ಲಿ ಉಲ್ಲೇಖಿಸಲಾಗಿತ್ತು. ಅಕ್ಟೋಬರ್ 15, 2024ರ ಸರ್ಕಾರಿ ಆದೇಶವು ಕ್ರಿಮಿನಲ್ ಪ್ರೊಸೀಜರ್ ಕೋಡ್‌ನ ಸೆಕ್ಷನ್ 321ರ ಉಲ್ಲಂಘನೆಯಾಗಿದೆ ಎಂದು ಅರ್ಜಿದಾರರು ವಾದಿಸಿದ್ದರು. ಈ ನಿಬಂಧನೆಯು ನಿರ್ದಿಷ್ಟವಾಗಿ ಪ್ರಾಸಿಕ್ಯೂಟರ್‌ಗೆ ಮಾತ್ರ ಕಾನೂನು ಕ್ರಮದಿಂದ ಹಿಂದೆ ಸರಿಯಲು ಯಾವುದೇ ಪ್ರಕ್ರಿಯೆ ಪ್ರಾರಂಭಿಸುವ ಅಧಿಕಾರವನ್ನು ನೀಡುತ್ತದೆ. ಆದ್ದರಿಂದ, ಈ ಕ್ರಿಮಿನಲ್ ಪ್ರಕರಣಗಳನ್ನು ಹಿಂಪಡೆಯಲು ಪ್ರಾಸಿಕ್ಯೂಟರ್ ನಿರ್ದೇಶನ ನೀಡುವ ಅಧಿಕಾರ ರಾಜ್ಯ ಸಚಿವ ಸಂಪುಟಕ್ಕೆ ಇಲ್ಲ ಎಂದು ಅರ್ಜಿದಾರರ ಪರ ವಕೀಲರು ವಾದಿಸಿದ್ದರು.

ವಾದ–ಪ್ರತಿವಾದ ಆಲಿಸಿದ ಕೋರ್ಟ್, ಸಚಿವ ಸಂಪುಟದ ಕ್ರಮ ನಿಯಮ ಬಾಹಿರವಾಗಿದ್ದರೆ ಒಪ್ಪುವುದಿಲ್ಲ. ಪ್ರಕರಣಗಳನ್ನು ಹಿಂಪಡೆಯಲು ಅನುಮತಿ ನೀಡುವುದಿಲ್ಲ. ಅರ್ಜಿದಾರರ ಪರ ವಕೀಲರು ಪ್ರಭಾವಿ ವ್ಯಕ್ತಿಗಳೂ ಸೇರಿದಂತೆ ಕೆಲವು ರಾಜಕಾರಣಿಗಳ ವಿರುದ್ಧದ ಕ್ರಿಮಿನಲ್ ಪ್ರಕರಣಗಳನ್ನು ಅಪರಾಧ ದಂಡ ಸಂಹಿತೆ ಸೆಕ್ಷನ್ 321ಕ್ಕೆ ವಿರುದ್ಧವಾಗಿ ಸರ್ಕಾರ ಹಿಂಪಡೆದಿದೆ ಎಂದು ಹೇಳಿರುವುದು ಮೇಲ್ನೋಟಕ್ಕೆ ಸಮರ್ಥನೀಯವಾಗಿದೆ ಎಂದು ಹೇಳಿದೆ.

ಪಂಜಾಬ್ ಮಣಿಸಿ ಆರ್‌ಸಿಬಿ 4ನೇ ಬಾರಿಗೆ ಫೈನಲ್ ಪ್ರವೇಶ

ಒಮರ್ಜೈ 18ರನ್ ಗಳಿಸಿದ್ದು ಬಿಟ್ಟರೇ ಉಳಿದವರಿಂದ ನಿರೀಕ್ಷಿತ ಪ್ರದರ್ಶನ ಮೂಡಿ ಬಾರದ ಕಾರಣ ಪಂಜಾಬ್ 101 ರನ್‌ಗಳ ಅಲ್ಪ ಮೊತ್ತಕ್ಕೆ ಆಲೌಟಾಯಿತು. ಉಳಿದಂತೆ ಪ್ರಿಯಾಂಶ್ ಆರ್ಯ 7, ಜೋಶ್ ಇಂಗ್ಲಿಸ್ 4, ಕ್ಯಾಪ್ಟನ್ ಶ್ರೇಯಸ್ ಅಯ್ಯರ್ 2, ನೆಹಾಲ್ ವಧೇರಾ 8 ರನ್ ಗಳಿಸಿದರು. ಆರ್‌ಸಿಬಿ ಪರ ಜೋಶ್ ಹೇಜಲ್ ವುಡ್ ಮತ್ತು ಸುಯೇಶ್ ಶರ್ಮಾ ತಲಾ 3, ಯಶ್ ದಯಾಳ್ 2, ಭುವೇಶ್ವರ್ ಕುಮಾರ್, ರೊಮಾರಿಯೋ ಶೆಪರ್ಡ್ ತಲಾ ಒಂದೊಂದು ವಿಕೆಟ್ ಹಂಚಿಕೊಂಡರು. ಸುಯೇಶ್ ಶರ್ಮಾ ಅವರು ಅರ್ಹವಾಗಿ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಜೂ.3ರಂದು ಅಹಮದಾಬಾದ್‌ನಲ್ಲಿ ನಡೆಯುವ ಫೈನಲ್ ಪಂದ್ಯದ ಮೊದಲ ತಂಡವಾಗಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಅರ್ಹತೆ ಪಡೆದಿದೆ. ಮೇ 30 ರಂದು ಮುಂಬೈ ಇಂಡಿಯನ್ಸ್ ಮತ್ತು ಗುಜರಾತ್ ಜೈಂಟ್ಸ್ ನಡುವೆ ಎಲಿಮಿನೇಟರ್ ಪಂದ್ಯ ನಡೆಯಲಿದ್ದು, ಈ ಪಂದ್ಯದಲ್ಲಿ ಸೋತವರು ಟೂರ್ನಿಯಿಂದ ಹೊರ ಬೀಳಲಿದ್ದಾರೆ. ವಿಜೇತರು ಜೂ.1 ರಂದು ನಡೆಯುವ ಕ್ವಾಲಿಫೈಯರ್ 1ರಲ್ಲಿ ಪರಾಭವಗೊಂಡಿರುವ ಪಂಜಾಬ್ ಕಿಂಗ್ಸ್ ವಿರುದ್ಧ ಆಡಲಿದ್ದಾರೆ. ಈ ಪಂದ್ಯದ ವಿಜೇತರು ಆರ್‌ಸಿಬಿ ಜೊತೆಗೆ ಪ್ರಶಸ್ತಿ ಸುತ್ತಿನಲ್ಲಿ ಸೆಣೆಸಲಿದ್ದಾರೆ.

ಮೈಸೂರಲ್ಲಿ ಸಂಭ್ರಮಾಚರಣೆ



ಮೈಸೂರಲ್ಲಿ ಕ್ರಿಕೆಟ್ ಅಭಿಮಾನಿಗಳ ಸಂಭ್ರಮಾಚರಣೆ.

ಮೈಸೂರು, ಮೇ 29(ಎಂಕೆ)– ರಾಯಲ್ ಚಾಲೆಂಜರ್ಸ್ ಬೆಂಗಳೂರು(ಆರ್‌ಸಿಬಿ) ತಂಡ ಫೈನಲ್ ಪ್ರವೇಶಿದ್ದಕ್ಕೆ ಮೈಸೂರಿನಲ್ಲಿ ಕ್ರಿಕೆಟ್ ಅಭಿಮಾನಿಗಳು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದ್ದಾರೆ.

ನಗರದ ಚಾಮರಾಜ ಜೋಡಿ ರಸ್ತೆಯಲ್ಲಿ ಗುರುವಾರ ರಾತ್ರಿ ಆರ್‌ಸಿಬಿ ಟೀ ಶರ್ಟ್ ಧರಿಸಿ ಜಮಾವಣೆಗೊಂಡ ಕ್ರಿಕೆಟ್ ಅಭಿಮಾನಿಗಳು, ಮೊದಲ ಕ್ವಾಲಿಫೈಯರ್ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ವಿರುದ್ಧ ಆರ್‌ಸಿಬಿ ಗೆಲುವು ದಾಖಲಿಸುತ್ತಿದ್ದಂತೆ 'ಈ ಸಲ ಕಪ್ ನಮ್ದೆ' ಎಂದು ಸಂಭ್ರಮಿಸಿದರು. 9 ವರ್ಷಗಳ ನಂತರ ಆರ್‌ಸಿಬಿ ಐಪಿಎಲ್ ಫೈನಲ್ ಪ್ರವೇಶ ಮಾಡಿದ್ದು, ಈ ಬಾರೀ ಕಪ್ ಗೆಲ್ಲುವ ನೆಚ್ಚಿನ ತಂಡವಾಗಿದೆ. ಖಂಡಿತವಾಗಿಯೂ ಈ ಸಲ ಕಪ್ ನಮ್ಮದೇ ಆಗಲಿದೆ ಎನ್ನುತ್ತಲೇ ಆರ್‌ಸಿಬಿಗೆ ಜೈಕಾರ ಕೂಗಿದರು. ಕ್ರಿಕೆಟ್ ಅಭಿಮಾನಿಗಳಾದ ಜಿ ರಾಘವೇಂದ್ರ, ಕಿಶೋರ್ ಕುಮಾರ್, ಕಿರಣ್, ಹರೀಶ್ ನಾಯ್ಡು, ಮಾಯ, ಚಕ್ರಪಾಣಿ, ಸುಬ್ಬಣ್ಣ, ಹರೀಶ್ ನಾಯ್ಡು, ಮಹಾನ್ ಶ್ರೇಯಸ್, ಮಹೇಶ್‌ಕುಮಾರ್, ಮಂಜುನಾಥ್, ಮುಶೀರ, ಲಕ್ಷ್ಮಣ್ ಮತ್ತಿತರರಿದ್ದರು.

ಅಭಿಮಾನಿಗಳ ಸಂಭ್ರಮಾಚರಣೆ

ಬೆಂಗಳೂರು: ಗುರುವಾರ ನಡೆದ ಮೊದಲ ಕ್ವಾಲಿಫೈಯರ್ ಪಂದ್ಯದಲ್ಲಿ ಪಂಜಾಬ್ ಮಣಿಸಿ ಆರ್‌ಸಿಬಿ ಪ್ರಸಕ್ತ ಸಾಲಿನ ಐಪಿಎಲ್ ಫೈನಲ್ ಪ್ರವೇಶಿಸಿದ ಹಿನ್ನಲೆಯಲ್ಲಿ ಮೈಸೂರು, ಬೆಂಗಳೂರು, ರಾಯಚೂರು, ಬೆಳಗಾವಿ, ಹುಬ್ಬಳ್ಳಿ ಸೇರಿದಂತೆ ರಾಜ್ಯದ ವಿವಿಧೆಡೆ ಆರ್‌ಸಿಬಿ ಅಭಿಮಾನಿಗಳು ತಂಡದ ಪರ ಹಾಗೂ ಆಟಗಾರರ ಪರ ಘೋಷಣೆ ಕೂಗಿ, ಪಟಾಕಿ ಸಿಡಿಸಿ, ಸಿಹಿ ಹಂಚಿ ಕುಣಿದು ಕುಪ್ಪಳಿಸಿ ಸಂಭ್ರಮಾಚರಣೆ ನಡೆಸಿದರು.

ಅಮೆರಿಕಾ ಕೋರ್ಟ್ ತಡೆ

ತುರ್ತು ಆರ್ಥಿಕ ಅಧಿಕಾರ ಕಾಯ್ದೆ (IEEPA) ಅಡಿಯಲ್ಲಿ ಈ ಕ್ರಮ ಕೈಗೊಂಡಿದ್ದಾರೆ ಎಂದು ಅಮೆರಿಕದ ಕಮಾಂಡರ್–ಇನ್–ಚೀಫ್ ನ್ಯಾಯಾಲಯದ ಮುಂದೆ ಹೇಳಿದ್ದರು. ಆದರೆ, ನ್ಯಾಯಾಲಯವು ಈ ಕಾನೂನನ್ನು ಆರ್ಥಿಕ ಒತ್ತಡದ ಸಾಧನವಾಗಿ ಬಳಸಲಾಗುವುದಿಲ್ಲ ಎಂದು ತೀರ್ಪಿನಲ್ಲಿ ತಿಳಿಸಲಾಗಿದೆ. ಅದೇ ಸಮಯ ದಲ್ಲಿ, ಟ್ರಂಪ್ ಸರ್ಕಾರ 'ಭಾರತ–ಪಾಕ್ ಉದ್ವಿಗ್ನತೆ' ವಿಷಯವನ್ನು ಉಲ್ಲೇಖಿಸಿ, ಸುಂಕ ಪ್ರಾಧಿಕಾರದಿಂದಾಗಿ ಟ್ರಂಪ್ ಸರ್ಕಾರದಿಂದ ಭಾರತ ಮತ್ತು ಪಾಕಿಸ್ತಾನದ ನಡುವಿನ ಇತ್ತೀಚಿನ ಕದನ ವಿರಾಮ ಒಪ್ಪಂದವನ್ನು ಸಾಧಿಸಲು ಸಾಧ್ಯವಾಯಿತು ಎಂದು ಟ್ರಂಪ್ ಸರ್ಕಾರದಿಂದ ವಾದ ಮಂಡಿಸಲಾಯಿತು. ಆದರೆ, ಕದನ ವಿರಾಮ ಒಪ್ಪಂದ ಕ್ರೆಡಿಟ್ ತೆಗೆದುಕೊಳ್ಳುವುದು ಬೇಡ ಎಂದು ಈ ವಾದವನ್ನೂ ನ್ಯಾಯಾಲಯ ತಿರಸ್ಕರಿಸಿತು. ಒಟ್ಟಾರೆ, ಟ್ರಂಪ್ ಆಡಳಿತವು ಮಾಡಿದ ಎಲ್ಲಾ ವಾದ–ಹೇಳಿಕೆಗಳನ್ನು ನ್ಯಾಯಾಲಯ ತಿರಸ್ಕರಿಸಿರುವುದು ಗಮನಾರ್ಹ. ಐದು ಸಣ್ಣ ಯುಎಸ್ ಆಮದು ವ್ಯವಹಾರಗಳು ಮತ್ತು ಒರೆಗಾನ್ ಅಟಾರ್ನಿ ಜನರಲ್ ಡಾನ್ ರೇಫೀಲ್ಡ್ ನೇತೃತ್ವದ 13 ರಾಜ್ಯಗಳ ಒಕ್ಕೂಟವು ಸುಂಕಗಳ ವಿರುದ್ಧ ಮೊಕದ್ದಮೆ ಹೂಡಿದ್ದು, ಅವು ಕಾನೂನು ಬಾಹಿರ, ಅಜಾಗರೂಕ ಮತ್ತು ಆರ್ಥಿಕವಾಗಿ ಹಾನಿಕಾರಕವೆಂದು ಹೇಳಿಕೊಂಡಿದೆ.

ಸಿದ್ದರಾಮಯ್ಯ ದಿಢೀರ್ ಭೇಟಿ

ಸೌಹಾರ್ದತೆ ನೆಲೆಗೊಳಿಸುವ ಕುರಿತು ಚರ್ಚಿಸಿದ್ದೇನೆ' ಎಂದು ಬರೆದುಕೊಂಡಿದ್ದಾರೆ. ಅದೇ ವೇಳೆ ಬಿ.ಕೆ ಹರಿಪ್ರಸಾದ್ ಎಕ್ಸ್‌ನಲ್ಲಿ ಪೋಸ್ಟ್ ಮಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಂದು ನನ್ನ ನಿವಾಸಕ್ಕೆ ಸೌಹಾರ್ದಿತ ಭೇಟಿ ನೀಡಿದರು. ಮಂಗಳೂರು ಮತ್ತು ಕರಾವಳಿ ಕರ್ನಾಟಕದಲ್ಲಿ ಹೆಚ್ಚುತ್ತಿರುವ ಧಾರ್ಮಿಕ ಧ್ರುವೀಕರಣದ ಕುರಿತು ಗಂಭೀರ ಚರ್ಚೆ ನಡೆಯಿತು. ಶಾಂತಿ, ಬಾಂಧವ್ಯ ಮತ್ತು ಸಂವಿಧಾನಾತ್ಮಕ ಮೌಲ್ಯಗಳನ್ನು ಕಾಪಾಡುವ ಅಗತ್ಯದ ಬಗ್ಗೆ ಸಮಾಲೋಚನೆ ಮಾಡಲಾಯಿತು. ಈ ಭೇಟಿಗೆ ರಾಜಕೀಯ ಉದ್ದೇಶ ಇದೆ ಎಂಬ ಊಹಾಪೋಹಗಳು ಸಂಪೂರ್ಣ ನಿರಾಧಾರ ಎಂದು ಬರೆದುಕೊಂಡಿದ್ದಾರೆ.

ಆದರೆ, ಮುಖ್ಯಮಂತ್ರಿಗಳೇ ಬಿ.ಕೆ.ಹರಿಪ್ರಸಾದ್ ಅವರ ನಿವಾಸಕ್ಕೆ ಭೇಟಿ ನೀಡಿರುವುದು ರಾಜಕೀಯ ವಲಯದಲ್ಲಿ ಹಲವಾರು ಚರ್ಚೆಗಳಿಗೆ ಗ್ರಾಸವಾಗಿದೆ. ದಕ್ಷಿಣ ಕನ್ನಡದ ಮುಸ್ಲೀಮರು ಸಾಲು ಸಾಲು ಹತ್ಯೆಗಳಿಂದ ಬೇಸತ್ತು, ಕಾಂಗ್ರೆಸ್ ಪಕ್ಷದಲ್ಲಿನ ತಮ್ಮ ಹುದ್ದೆಗಳಿಗೆ ರಾಜೀನಾಮೆ ಘೋಷಿಸಿರುವುದು ಕಾಂಗ್ರೆಸ್‌ನಲ್ಲಿ ತಲ್ಲಣವನ್ನುಂಟು ಮಾಡಿದೆ. ಅಲ್ಲದೇ ಅಲ್ಲಿನ ಮುಸ್ಲಿಂ ಮುಖಂಡರು ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಮತ್ತು ಗೃಹ ಸಚಿವ ಡಾ.ಜಿ.ಪರಮೇಶ್ವರ್ ವಿರುದ್ಧವೂ ಕಿಡಿಕಾರಿದ್ದಾರೆ. ಈ ಹಿನ್ನಲೆಯಲ್ಲಿ ಕರಾವಳಿ ಮೂಲದವರಾದ ಹರಿಪ್ರಸಾದ್ ಮುಖಾಂತರ ದಕ್ಷಿಣ ಕನ್ನಡದ ಸಮಸ್ಯೆ ಪರಿಹಾರಕ್ಕೆ ಪ್ರಯತ್ನಿಸುತ್ತಿದ್ದಾರೆ ಎಂದು ಮೂಲವೊಂದು ತಿಳಿಸಿದೆ.

ಅದೇ ವೇಳೆ ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಕೂಗು ಮತ್ತೆ ಮುನ್ನಲೆಗೆ ಬಂದಿರುವುದರಿಂದ ಹರಿಪ್ರಸಾದ್ ಬೆಂಬಲ ಪಡೆಯಲು ಸಿದ್ದರಾಮಯ್ಯ ಅವರ ನಿವಾಸಕ್ಕೆ ಭೇಟಿ ನೀಡಿದ್ದಾರೆ. ಶೀಘ್ರದಲ್ಲೇ ಸಂಪುಟ ಪುನಾರಚನೆಯಾಗಲಿದ್ದು, ಆ ವೇಳೆ ಹರಿಪ್ರಸಾದ್ ಅವರಿಗೆ ಪ್ರಮುಖ ಖಾತೆ ನೀಡುವ ಬಗ್ಗೆಯೂ ಚರ್ಚೆ ನಡೆದಿದೆ ಎಂದು ಮತ್ತೊಂದು ಮೂಲ ತಿಳಿಸಿದೆ.

ಕಾಲಾವಕಾಶ ಕೇಳಿದ ಲೋಕಾಯುಕ್ತ ಎಸ್ಪಿ

ನೀಡಬೇಕೆಂದು ನ್ಯಾಯಾಲಯಕ್ಕೆ ಅಫಿಡವಿಟ್ ಸಲ್ಲಿಸಿದರು. ಇದಕ್ಕೆ ಆಕ್ಷೇಪಣೆ ವ್ಯಕ್ತಪಡಿಸಿದ ದೂರುದಾರ ಸ್ನೇಹಮಯಿ ಕೃಷ್ಣ, ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ನಾಲ್ವರು ಆರೋಪಿಗಳ ಆರೋಪ ಸಾಬೀತಾಗಿಲ್ಲ ಎಂದು ಈಗಾಗಲೇ ಲೋಕಾಯುಕ್ತರು ಮಧ್ಯಂತರ ವರದಿ ಸಲ್ಲಿಸಿದ್ದಾರೆ. ಆದರೆ ಈ ನಾಲ್ವರು ಆರೋಪಿಗಳ ಆರೋಪ ಸಾಬೀತು ಮಾಡಲು ನನಗೆ ಅವಕಾಶ ನೀಡಬೇಕೆಂದು ಮನವಿ ಮಾಡಿದರು.

ಲೋಕಾಯುಕ್ತರು ಉದ್ದೇಶಪೂರ್ವಕವಾಗಿ ವಿಚಾರಣೆಯನ್ನು ವಿಳಂಬ ಮಾಡುತ್ತಿದ್ದಾರೆ. ಅಂತಿಮ ವರದಿ ಸಲ್ಲಿಕೆಗೆ ಹಲವು ಬಾರಿ ಅವಕಾಶ ನೀಡಿದರೂ ಈ ತನಕ ಹಲವು ಕಾರಣ ನೀಡಿ ಅಂತಿಮ ವರದಿ ಸಲ್ಲಿಕೆಗೆ ಸಮಯ ಕೇಳುತ್ತಲೇ ಇದ್ದಾರೆ. ಈ ಹಿನ್ನೆಲೆಯಲ್ಲಿ ಲೋಕಾಯುಕ್ತ ತನಿಖಾಧಿಕಾರಿ ಟಿ.ಜೆ.ಉದೇಶ್ ಅವರನ್ನು ಬದಲಾವಣೆ ಮಾಡಬೇಕೆಂದು ನ್ಯಾಯಾಲಯವನ್ನು ಕೋರಿದರು. ಅಲ್ಲದೆ 2016ರಿಂದ 2024 ರವರೆಗೆ ಮುಡಾದಲ್ಲಿ ಹಂಚಿಕೆಯಾಗಿರುವ ಅಕ್ರಮ ನಿವೇಶನ ಮಂಜೂರಾತಿ ಪ್ರಕರಣ ಸಂಬಂಧ ಪ್ರತ್ಯೇಕವಾಗಿ ಎಫ್‌ಐಆರ್ ದಾಖಲಿಸುವಂತೆ ಸ್ನೇಹಮಯಿ ಕೃಷ್ಣ ನ್ಯಾಯಾಧೀಶರಲ್ಲಿ ಮನವಿ ಮಾಡಿದರು.

ನಾಲ್ವರು ಆರೋಪಿಗಳ ವಿರುದ್ಧ ದೂರುದಾರರು ಆರೋಪ ಸಾಬೀತು ಮಾಡುವ ವಿಚಾರ, ತನಿಖಾಧಿಕಾರಿಗಳನ್ನು ಬದಲಾವಣೆ ಮಾಡುವ ವಿಚಾರ ಹಾಗೂ ಪ್ರತ್ಯೇಕವಾಗಿ ಎಫ್‌ಐಆರ್ ದಾಖಲಿಸುವ ವಿಚಾರಗಳ ಬಗ್ಗೆ ಲೋಕಾಯುಕ್ತರು ತಕರಾರು ಅರ್ಜಿ ಸಲ್ಲಿಸಬೇಕು ಎಂದು ನ್ಯಾಯಾಧೀಶರಾದ ಸಂತೋಷ್ ಗಜಾನನ ಭಟ್ ಆದೇಶ ನೀಡಿ ಮುಂದಿನ ವಿಚಾರಣೆಯನ್ನು ಜೂನ್ 17ಕ್ಕೆ ಮುಂದೂಡಿದರು.

ಐವರಿಗೆ 20 ವರ್ಷ ಕಠಿಣ ಶಿಕ್ಷೆ

ರಾತ್ರಿ ಪಹರೆ ಪೊಲೀಸರಿಗೆ ಸಿಕ್ಕಿಬಿದ್ದರು: ಅಂದು ರಾತ್ರಿ 11 ಗಂಟೆ ಸುಮಾರಿನಲ್ಲಿ ದೇವರಾಜ ಠಾಣೆ ಪೊಲೀಸರು ರಾತ್ರಿ ಪಹರೆ ಬಂದ ವೇಳೆ ನ್ಯೂ ಶ್ರೀ ಪದಮ್ ಬ್ಯಾಂಗಲ್ ಸ್ಟೋರ್ ಮುಂಭಾಗ ನಾಲ್ವರು ನಿಂತಿರುವುದನ್ನು ಗಮನಿಸಿ ವಿಚಾರಿಸಲು ಮುಂದಾದಾಗ ಅವರೆಲ್ಲಾ ಓಡಿ ಹೋಗಿದ್ದಾರೆ. ಏನೋ ಅನಾಹುತ ಆಗಿರಬೇಕೆಂದು ಫುಟ್‌ಪಾತ್‌ನಲ್ಲಿ ಬಿದ್ದಿದ್ದ ಮಹಿಳೆಯನ್ನು ಗಮನಿಸಲಾಗಿ ಆಕೆ ಮೃತಪಟ್ಟಿರುವುದು ಗೊತ್ತಾಗಿದೆ. ಅದೇ ವೇಳೆ ಅಲ್ಲಿಗೆ ಲಷ್ಕರ್ ಠಾಣೆಯ ಪಹರೆ ಪೊಲೀಸರು ಬಂದಿದ್ದು, ಅತ್ಯಾಚಾರವೆಸಗಿ ಕೊಲೆ ಮಾಡಿರಬಹುದೆಂದು ಮೇಲ್ನೋಟಕ್ಕೆ ಕಂಡುಬಂದ ಕಾರಣ ಪೊಲೀಸರು ಹಿರಿಯ ಅಧಿಕಾರಿಗಳಿಗೆ ವಿಷಯ ತಿಳಿಸಿದ್ದಾರೆ. ತಕ್ಷಣವೇ ನಗರ ಪೊಲೀಸ್ ಆಯುಕ್ತರೂ ಸೇರಿದಂತೆ ಹಿರಿಯ ಅಧಿಕಾರಿಗಳು, ಶ್ವಾನದಳ, ಬೆರಳಚ್ಚು ತಜ್ಞರು ರಾತ್ರೋರಾತ್ರಿ ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿದ್ದಾರೆ. ಪೊಲೀಸ್ ಶ್ವಾನ ಅಂದು ರಾತ್ರಿ 2 ಗಂಟೆ ವೇಳೆಗಾಗಲೇ ನಾಲ್ವರು ಕಾಮುಕರನ್ನು ಪತ್ತೆ ಮಾಡಿದ್ದು, ಅವರನ್ನು ವಶಕ್ಕೆ ಪಡೆದ ಪೊಲೀಸರು, ತೀವ್ರ ವಿಚಾರಣೆಗೊಳಪಡಿಸಿ, ಮರು ದಿನ ಬೆಳಗ್ಗೆ ಪ್ರಮುಖ ಕಾಮುಕ ರಫಿಕ್ ಅಹಮದ್‌ನನ್ನು ಬಂಧಿಸಿದ್ದಾರೆ.

ಸದರಿ ಸ್ಥಳ ಲಷ್ಕರ್ ಠಾಣೆ ವ್ಯಾಪ್ತಿಗೆ ಸೇರಿದ್ದರಿಂದ ಅಂದಿನ ಪೊಲೀಸ್ ಇನ್ಸ್‌ಪೆಕ್ಟರ್ ಸುರೇಶ್ ಕುಮಾರ್ ಪ್ರಕರಣದ ತನಿಖೆ ನಡೆಸಿದ್ದಾರೆ. ಸ್ನೇಹ ಮೆನ್ಸ್‌ವೇರ್ ಮತ್ತು ನ್ಯೂ ಶ್ರೀ ಪದಮ್ ಬ್ಯಾಂಗಲ್ ಸ್ಟೋರ್‌ನಲ್ಲಿ ಅಳವಡಿಸಿದ್ದ ಸಿಸಿ ಕ್ಯಾಮರಾಗಳಲ್ಲಿ ಈ ಕಾಮುಕರು ನಿತ್ರಾಣಳಾಗಿದ್ದ ಮಹಿಳೆ ಜೊತೆ ತಮ್ಮ ಕಾಮತೃಷೆ ತೀರಿಸಿಕೊಂಡಿರುವ ದೃಶ್ಯಗಳು ದಾಖಲಾಗಿತ್ತು. ಇವರ ವಿರುದ್ದ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಲಾಗಿ, ವಿಚಾರಣೆ ನಡೆಸಿದ ನ್ಯಾಯಾಧೀಶರು ಐವರಿಗೂ 20 ವರ್ಷ ಕಠಿಣ ಸಜೆ ಹಾಗೂ ತಲಾ 5,000 ರೂ. ದಂಡ ವಿಧಿಸಿ ಇಂದು ತೀರ್ಪು ನೀಡಿದ್ದಾರೆ. ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕ ಕೆ.ನಾಗರಾಜ್ ವಾದ ಮಂಡಿಸಿದ್ದರು.

ಸಾಮೂಹಿಕ ಅತ್ಯಾಚಾರದಿಂದ ಮೃತಪಟ್ಟ ಮಹಿಳೆ ಯಾರೆಂಬುದು ಈವರೆವಿಗೂ ಪತ್ತೆಯಾಗಲೇ ಇಲ್ಲ. ಆಕೆ ಅನಾಥಳಾಗಿದ್ದು, ರಸ್ತೆ ಬದಿ ಆಶ್ರಯ ಪಡೆದಿರಬಹುದು ಎಂದು ಹೇಳಲಾಗಿದೆ.

ಮೆಟ್ರಿಕ್ ಪೂರ್ವ ಹಾಸ್ಟೆಲ್‌ಗಳ ಪ್ರವೇಶಕ್ಕೆ ಅರ್ಜಿ ಆಹ್ವಾನ

ಮೈಸೂರು, ಮೇ 29–ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿ ನಿಲಯಗಳಲ್ಲಿ ಪ್ರವೇಶಕ್ಕಾಗಿ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ–1, 2ಎ, 2ಬಿ, 3ಎ, 3ಬಿ, ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ಮತ್ತು ಇತರೆ ಜನಾಂಗಗಳಿಗೆ ಸೇರಿದ ವಿದ್ಯಾರ್ಥಿಗಳಿಂದ 2025–26ನೇ ಸಾಲಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಇಲಾಖೆಯ ವೆಬ್‌ಸೈಟ್ https://shp.karnataka.gov.in/bcwd ನ್ನು ಸಂಪರ್ಕಿಸಿ ಆನ್‌ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸಬೇಕು. ಅರ್ಜಿ ಸಲ್ಲಿಸಲು ಜೂ.16 ಕೊನೆಯ ದಿನಾಂಕವಾಗಿರುತ್ತದೆ. ಮಾಹಿತಿಗಾಗಿ ಸಹಾಯವಾಣಿ ಸಂಖ್ಯೆ 8050770004 ಮತ್ತು 8050770005 ಸಂಪರ್ಕಿಸಬಹುದು.

ಕನ್ನಡಕ್ಕೆ ಬೂಕರ್ ಗರಿ: ಸುತ್ತೂರು ಶ್ರೀಗಳು ಪ್ರಶಂಸೆ





ಸುತ್ತೂರು ಶ್ರೀಗಳು

ಮೈಸೂರು, ಮೇ29–ಕನ್ನಡದ ಖ್ಯಾತ ಕತೆಗಾರರು ಹಾಗೂ ವಿಚಾರವಾದಿಗಳು ಆದ ಶ್ರೀಮತಿ ಬಾನು ಮುಷ್ತಾಕ್ (ಹಾರ್ಟ್ ಆಫ್ ಲ್ಯಾಂಪ್ ಕೃತಿಯ ಮೂಲ ಲೇಖಕರು) ಮತ್ತು ಶ್ರೀಮತಿ ದೀಪಾ ಭಾಸ್ತಿ (ಇಂಗ್ಲಿಷ್ ಅನುವಾದ ರಚಿಸಿದವರು) ಅವರಿಗೆ ಅಂತಾರಾಷ್ಟ್ರೀಯ ಖ್ಯಾತಿಯ ಬೂಕರ್ ಪ್ರಶಸ್ತಿ ಲಭಿಸಿರುವುದು ಕರ್ನಾಟಕಕ್ಕೆ ಹೆಮ್ಮೆಯ ಸಂಗತಿ ಎಂದು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರು ಹೇಳಿದರು.

ಹಾಸನ ಮೂಲದ ಶ್ರೀಮತಿ ಬಾನು ಮುಷ್ತಾಕ್‌ರವರು ಖ್ಯಾತ ವಕೀಲರು, ಬರಹಗಾರರು, ಹೋರಾಟಗಾರರು, ಪರ್ತಕರ್ತರು, ರಾಜಕೀಯದಲ್ಲಿಯೂ ಹೆಜ್ಜೆ ಇಟ್ಟವರು. ಸಮುದಾಯದ ಸಂಪ್ರದಾಯವಾದಿ ನಿಲುವುಗಳ ನಡುವೆಯೂ ತಮ್ಮ ದನಿಯನ್ನು ಎಲ್ಲರಿಗೂ ಕೇಳುವಂತೆ ಮೊಳಗಿಸಿದವರು.

ಮಹಿಳೆಯರ ದುಃಖ–ದುಮ್ಮಾನಗಳಿಗೆ ಮಾತಾದವರು. ದಲಿತ ಚಳುವಳಿ, ರೈತ ಚಳುವಳಿಯಂಥ ಜನಪರ ಹೋರಾಟಗಳಲ್ಲಿಯೂ ಸಕ್ರಿಯವಾಗಿ ಭಾಗವಹಿಸಿದವರು. ಶ್ರೀಮತಿ ದೀಪಾ ಭಾಸ್ತಿಯವರು ಕನ್ನಡದ ಹಣತೆಯನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಬೆಳಗಿದ ಪತ್ರಕರ್ತರು, ಲೇಖಕರು, ಅನುವಾದಕರು. ಇವರು ಇಂಗ್ಲಿಷ್ ಪತ್ರಿಕಾರಂಗದಲ್ಲಿ ಕೆಲಸ ಮಾಡಿದ ಬಳಿಕ ಮಡಿಕೇರಿಗೆ ಮರಳಿ ಬಂದು ಫ್ರೀಲ್ಯಾನ್ಸ್ ಲೇಖಕರಾದರು. ಕೊಡಗಿನ ಗೌರಮ್ಮ, ಶಿವರಾಮ ಕಾರಂತ ಮೊದಲಾದವರ ಬರಹಗಳನ್ನು ಇಂಗ್ಲಿಷ್ ಓದುಗರಿಗೆ ತಲುಪಿಸಿರುವವರು.

ಈ ಇಬ್ಬರು ಜನಪರ ಲೇಖಕಿಯರ ಸಂಯುಕ್ತ ಪರಿಶ್ರಮದಿಂದ ಕರ್ನಾಟಕಕ್ಕೆ ಬೂಕರ್ ಪ್ರಶಸ್ತಿ ಲಭಿಸಿದೆ. ಈ ಮೂಲಕ ಅಂತಾರಾಷ್ಟ್ರೀಯ ಮಟ್ಟದಲ್ಲಿ ಕನ್ನಡದ ದನಿ ಕೇಳುವಂತಾಯಿತು. ಇವರ ಸಾಹಿತ್ಯ ಸೇವೆ ಇದೇ ರೀತಿ ಮುಂದುವರಿಯುತ್ತಿರಲೆಂದು ಅವರು ದೇವರಲ್ಲಿ ಪ್ರಾರ್ಥಿಸಿದ್ದಾರೆ.

ಇಮ್ಮಾವು ಬಳಿ ನಿರ್ಮಾಣವಾಗುವ ಚಿತ್ರನಗರಿ ಜಾಗಕ್ಕೆ ಕಾಂಪೌಂಡ್ ನಿರ್ಮಾಣ ಕಾಮಗಾರಿ ಆರಂಭ

ವಾರ್ತಾ ಇಲಾಖೆಯಿಂದ 110 ಎಕರೆ ಪ್ರದೇಶ ಲೋಕೋಪಯೋಗಿ ಇಲಾಖೆಗೆ ಹಸ್ತಾಂತರ, ಉಳಿದ 50 ಎಕರೆ ಸ್ವಾಧೀನಕ್ಕೆ ಮುಂದುವರಿದ ಪ್ರಕ್ರಿಯೆ

ಮೈಸೂರು, ಮೇ 29(ಆರ್‌ಕೆ)– ಮೈಸೂರು ಹೊರವಲಯದಲ್ಲಿ ಬಹು ನಿರೀಕ್ಷಿತ ಚಿತ್ರನಗರಿ ನಿರ್ಮಾಣ ಕನಸು ಕಡೆಗೂ ನನಸಾಗುವ ಕಾಲ ಸಮೀಪಿಸಿದೆ.

ಮೈಸೂರು ಜಿಲ್ಲೆ, ನಂಜನಗೂಡು ತಾಲೂಕು, ಇಮ್ಮಾವು ಬಳಿ ಕೈಗಾರಿಕಾ ವಲಯದಲ್ಲಿ ಚಿತ್ರನಗರಿ (ಫಿಲ್ಮ್ ಸಿಟಿ) ನಿರ್ಮಾಣ ಮಾಡಲು ಮುಂದಾಗಿರುವ ರಾಜ್ಯ ಸರ್ಕಾರವು, ಕಳೆದ ಬಜೆಟ್‌ನಲ್ಲಿ ಯೋಜನೆಗೆ ಅನುದಾನ ಮೀಸಲಿರಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಆಶಯದಂತೆ ಜಿಲ್ಲಾಡಳಿತವು ಕೆಐಎಡಿಬಿ, ಕಂದಾಯ ಇಲಾಖೆ, ವಾರ್ತಾ ಮತ್ತು ಸಾರ್ವಜನಿಕ ಮಾಹಿತಿ ಇಲಾಖೆ ಮೂಲಕ ಇಮ್ಮಾವು ಬಳಿ 160 ಎಕರೆ ಭೂಮಿ ಗುರುತಿಸಿದ್ದು, ಈಗಾಗಲೇ 110 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಲೋಕೋಪಯೋಗಿ ಇಲಾಖೆಗೆ ಹಸ್ತಾಂತರಿಸಿದೆ.



ಕೆಲ ರೈತರು ತಾವೇ ಮಾಲೀಕರೆಂದು ಭೂಮಿಗೆ ಕ್ಲೇಮು ಮಾಡಿ ಅಡ್ಡಿಪಡಿಸುತ್ತಿರುವುದರಿಂದ ಹಸ್ತಾಂತರ ಪ್ರಕ್ರಿಯೆ ವಿಳಂಬವಾಗುತ್ತಿದೆ. ಮುಖ್ಯಮಂತ್ರಿಗಳ ನಿರ್ದೇಶನದಂತೆ 110 ಎಕರೆ ಪ್ರದೇಶಕ್ಕೆ ಕಾಂಪೌಂಡ್ ನಿರ್ಮಾಣ ಕಾಮಗಾರಿಯ ಟೆಂಡರ್ ಪ್ರಕ್ರಿಯೆ ಮುಗಿಸಿ, ಲೋಕೋಪಯೋಗಿ ಇಲಾಖೆ ಈ ಕೆಲಸ ಆರಂಭಿಸಿದೆ.

3.6 ಕಿ.ಮೀ ಉದ್ದದ 110 ಎಕರೆ ಪ್ರದೇಶದ ಸುತ್ತ 5 ಅಡಿ ಕಾಂಪೌಂಡ್ ವಾಲ್ ನಿರ್ಮಿಸಿ ಅದರ ಮೇಲೆ ಒಂದೂವರೆ ಅಡಿ ಸೋಲಾರ್ ತಂತಿ ಬೇಲಿ ಅಳವಡಿಸಲು ಗುತ್ತಿಗೆದಾರ ಅಶೋಕ ಎಂಬುವರಿಗೆ ಕಾಮಗಾರಿ ವಹಿಸಲಾಗಿದೆ.

7.10 ಕೋಟಿ ರೂ. ಕಾಂಪೌಂಡ್ ನಿರ್ಮಾಣ ಕಾಮಗಾರಿಯನ್ನು 7 ತಿಂಗಳೊಳಗಾಗಿ ಪೂರ್ಣಗೊಳಿಸಬೇಕೆಂಬ ಷರತ್ತಿನನ್ವಯ ಗುತ್ತಿಗೆದಾರನಿಗೆ ಲೋಕೋಪಯೋಗಿ ಇಲಾಖೆಯು ಕಾರ್ಯಾದೇಶ ನೀಡಿದ್ದು, ಕಾಮಗಾರಿ ಆರಂಭಕ್ಕೆ ಮುನ್ನ ಸ್ಥಳದಲ್ಲಿ ಗಿಡಗಂಟಿ ತೆಗೆದು ಸ್ವಚ್ಛಗೊಳಿಸುವ ಕೆಲಸ ಆರಂಭಿಸಲಾಗಿದೆ. ಉಳಿದಂತೆ ಬಾಕಿ ಇರುವ 50 ಎಕರೆ ಭೂಮಿ ಸ್ವಾಧೀನಪಡಿಸಿಕೊಂಡು ಹಸ್ತಾಂತರವಾದ ಬಳಿಕ ಅದರ ಕಾಂಪೌಂಡ್ ಕೆಲಸ ಪೂರ್ಣಗೊಳಿಸಿ ಚಿತ್ರನಗರಿ ನಿರ್ಮಾಣಕ್ಕೆ ಶಂಕುಸ್ಥಾಪನೆ ಮಾಡಲಾಗುವುದು ಎಂದು ಪಿಡಬ್ಲ್ಯೂಡಿ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಸಿದ್ದರಾಜು ತಿಳಿಸಿದ್ದಾರೆ.

ಚಿತ್ರನಗರಿಯ ಪ್ರಧಾನ ಕಾಮಗಾರಿಗಳನ್ನು ಕಾಂಪೌಂಡ್ ಕೆಲಸ ಪೂರ್ಣಗೊಂಡ ಬಳಿಕ ಡಿಪಿಆರ್‌ನಂತೆ ಎಸ್ಟಿಮೇಟ್ ತಯಾರಿಸಿ ಕೈಗೆತ್ತಿಕೊಳ್ಳಲಾಗುವುದು ಎಂದು ವಾರ್ತಾ ಇಲಾಖೆ ಹಿರಿಯ ಸಹಾಯಕ ನಿರ್ದೇಶಕ ಟಿ.ಕೆ.ಹರೀಶ್ ತಿಳಿಸಿದ್ದಾರೆ.

ರಸ್ತೆ ನಿರ್ಮಾಣ ಕಾಮಗಾರಿಗೆ ಶಾಸಕ ಜಿ.ಟಿ.ದೇವೇಗೌಡರಿಂದ ಭೂಮಿಪೂಜೆ




ಮೈಸೂರು ತಾಲೂಕು ಜಯಪುರ ಹೋಬಳಿಯ ದೊಡ್ಡಹುಂಡಿ ಗ್ರಾಮದ ಮುರುಡಬಸವೇಶ್ವರ ದೇವಾಲಯದಿಂದ ಡಿ.ಸಾಲುಂಡಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ 1.5 ಕೋಟಿ ರೂ. ವೆಚ್ಚದ ರಸ್ತೆ ನಿರ್ಮಾಣ ಕಾಮಗಾರಿಗೆ ಶಾಸಕ ಜಿ.ಟಿ.ದೇವೇಗೌಡರು ಗುರುವಾರ ಭೂಮಿಪೂಜೆ ನೆರವೇರಿಸಿದರು. ಈ ವೇಳೆ ಎಪಿಎಂಸಿ ಮಾಜಿ ಸದಸ್ಯ ಕೋಟೆಹುಂಡಿ ಮಹದೇವು, ಮುಖಂಡರಾದ ಮಾಕಿ ಮಹದೇವು, ಮರೀಗೌಡ, ಕೃಷ್ಣಮೂರ್ತಿ, ಧನಗಹಳ್ಳಿ ಸ್ವಾಮಿ ಮತ್ತು ಧನಗಹಳ್ಳಿ ಗ್ರಾಮ ಪಂಚಾಯಿತಿ ಸದಸ್ಯರು ಉಪಸ್ಥಿತರಿದ್ದರು.

ನಾಳೆ ಭಾರತೀಯ ಭವಿಷ್ಯದ ಕೌಶಲಗಳ ಸಂಸ್ಥೆ ಉದ್ಘಾಟನೆ

ಮೈಸೂರು: ಭಾರತೀಯ ಭವಿಷ್ಯದ ಕೌಶಲಗಳ ಸಂಸ್ಥೆ ಉದ್ಘಾಟನಾ ಸಮಾರಂಭವನ್ನು ಮೇ 31ರಂದು ಬೆಳಗ್ಗೆ 10.30 ಗಂಟೆಗೆ ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

ಶ್ರೀ ಆದಿಚುಂಚನಗಿರಿ ಮಠ ಮುಖ್ಯ ಪೀಠಾಧಿಪತಿಗಳಾದ ಶ್ರೀ ಡಾ. ನಿರ್ಮಲಾನಂದನಾಥ ಸ್ವಾಮೀಜಿ ದಿವ್ಯ ಸಾನ್ನಿಧ್ಯದಲ್ಲಿ ಎಸ್‌ಜೆಬಿ ಮತ್ತು ಬಿಜಿಎಸ್ ಸಮೂಹ ಸಂಸ್ಥೆಗಳು, ಆಸ್ಪತ್ರೆಗಳ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಡಾ.ಪ್ರಕಾಶ್‌ನಾಥ ಸ್ವಾಮೀಜಿ, ರಾಜ್ಯಪಾಲರಾದ ಥಾವರ್‌ಚಂದ್ ಗೆಹ್ಲೋಟ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದು, ಕೆಎಸ್‌ಒಯು ಕುಲಪತಿ ಪ್ರೊ.ಶರಣಪ್ಪ ವಿ.ಹಲ್ಸೆ, ಎಥ್ನೋಟೆಚ್ ಗ್ರೂಪ್‌ನ ಸಿಇಒ ಡಾ.ಕಿರಣ್ ರಾಜಣ್ಣ, ಕೆಎಸ್‌ಡಿಸಿಯ ನಾಗರಾಜ ಇನ್ನಿತರರು ಉಪಸ್ಥಿತರಿರುವರು.

ಪ್ರೊ.ಕೆ.ಎಸ್.ರಂಗಪ್ಪರಿಗೆ ಅಭಿನಂದನೆ



ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿಗಳಾದ ಪ್ರೊ.ಕೆ.ಎಸ್.ರಂಗಪ್ಪ ಅವರ ಜನ್ಮದಿನದ ಅಂಗವಾಗಿ, ಮೈಸೂರಿನ ಸೆನೆಟ್ ಭವನದಲ್ಲಿ ಅನಿಕೇತನ ಸೇವಾ ಟ್ರಸ್ಟ್ ಮತ್ತು ವೀರವನಿತೆ ರಾಣಿ ಚೆನ್ನಮ್ಮ ಸ್ವಯಂ ಸೇವಾ ಸಂಘದ ವತಿಯಿಂದ ಅವರನ್ನು ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಅನಿಕೇತನ ಸೇವಾ ಟ್ರಸ್ಟ್‌ನ ಅಧ್ಯಕ್ಷರು ಮತ್ತು ನಗರಪಾಲಿಕೆ ಮಾಜಿ ಸದಸ್ಯ ಕೆ.ವಿ.ಮಲ್ಲೇಶ್ ಹಾಗೂ ವೀರವನಿತೆ ರಾಣಿ ಚೆನ್ನಮ್ಮ ಸ್ವಯಂಸೇವಾ ಸಂಘದ ಕಾರ್ಯದರ್ಶಿ ಎ.ಪಿ.ವಿರೂಪಾಕ್ಷ ಇದ್ದರು.


ಮಲಬಾರ್ ಗ್ರೂಪ್‌ನಿಂದ ಸಿಎಸ್‌ಆರ್ ಉಪಕ್ರಮಗಳಿಗೆ 150 ಕೋಟಿ ರೂ. ಮೀಸಲು



ಮೈಸೂರಿನ ಬಿ.ಎನ್.ರಸ್ತೆಯಲ್ಲಿರುವ ಶೋ ರೂಂನಲ್ಲಿ ವಿಶ್ವ ಹಸಿವು ದಿನವನ್ನು ಆಚರಿಸಲಾಯಿತು. ಈ ವೇಳೆ ಮಲಬಾರ್ ಗ್ರೂಪ್‌ನಿಂದ ಸಿಎಸ್‌ಆರ್ ಉಪಕ್ರಮಗಳಿಗೆ 150 ಕೋಟಿ ರೂ. ಮೀಸಲಿಡಲಾಯಿತು. ಕಾರ್ಯಕ್ರಮದಲ್ಲಿ ಕರ್ನಾಟಕ ಪೊಲೀಸ್ ಅಕಾಡೆಮಿ ಉಪನಿರ್ದೇಶಕರೂ ಆದ ಡಿವೈಎಸ್ಪಿ ಸಂದೇಶ್‌ಕುಮಾರ್, ಮೈಸೂರು ಜಿಲ್ಲಾ ಆಸ್ಪತ್ರೆಯ ನೋಡಲ್ ಅಧಿಕಾರಿ ಡಾ.ಮೋಹನ್ ಕಾಕೋಳಾ, ರೋಟರಿ ಕ್ಲಬ್ ಆಫ್ ಹೆರಿಟೇಜ್ ಅಧ್ಯಕ್ಷ ರಾಜೇಶ್, ಮಲಬಾರ್ ಗೋಲ್ಡ್ & ಡೈಮಂಡ್ಸ್‌ನ ದಕ್ಷಿಣ ವಲಯ ಮುಖ್ಯಸ್ಥ ಪಿ.ಶರಫುದ್ದೀನ್, ಸಹಾಯಕ ಮುಖ್ಯಸ್ಥ ಮುಹಮ್ಮದ್ ಅಂಶಾಜ್ ಮತ್ತಿತರರು ಉಪಸ್ಥಿತರಿದ್ದರು.

ಜೂ.1 ಬಸವ ಬಳಗ ಟ್ರಸ್ಟ್ ಉದ್ಘಾಟನೆ: ಬಸವ ಜಯಂತಿ

ಮೈಸೂರು, ಮೇ29(ಜಿಎ)–ಮೈಸೂರಿನ ಯಾಂದಳ್ಳಿ ರಸ್ತೆಯಲ್ಲಿರುವ ಜೆಎಸ್‌ಎಸ್ ಬಡಾವಣೆ 2ನೇ ಹಂತದಲ್ಲಿ ಅಸ್ತಿತ್ವಕ್ಕೆ ಬಂದಿರುವ ಬಸವ ಬಳಗ ಟ್ರಸ್ಟ್ (ಮೈಸೂರು ಪೂರ್ವ ವಲಯ)ನ ಉದ್ಘಾಟನೆ ಹಾಗೂ ಬಸವ ಜಯಂತಿ ಕಾರ್ಯಕ್ರಮ ಜೂ.1ರಂದು ಏರ್ಪಡಿಸಲಾಗಿದೆ ಎಂದು ಅಧ್ಯಕ್ಷ ಶಿವಸ್ವಾಮಿ ತಿಳಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇದಕ್ಕೂ ಮುನ್ನ ಮೇ 30ರಂದು ಸಂಜೆ 7.30ಕ್ಕೆ ಬಸವ ರಥಕ್ಕೆ ಗುರುಶಾಂತ ಸ್ವಾಮೀಜಿ ಚಾಲನೆ ನೀಡುವರು. ಜೂ.1ರಂದು ಮಧ್ಯಾಹ್ನ 3.30ಕ್ಕೆ ಶಿವ ಕಥೆಯನ್ನು ಬದನವಾಳು ಬಿ.ಶಿವಕುಮಾರ ಶಾಸ್ತ್ರಿ ನೆರವೇರಿಸುವರು. ಸರ್ದಾರ್ ವಲ್ಲಭ ಬಾಯ್ ಪಟೇಲ್ ನಗರದ ಮುಖ್ಯ ದ್ವಾರದಿಂದ ನಂದಿಧ್ವಜ ಮೆರವಣಿಗೆಯೊಡನೆ ಬಸವ ಉತ್ಸವ ನಡೆಯಲಿದೆ ಎಂದರು.

ಸಂಜೆ 6ಕ್ಕೆ ಸಭಾ ಕಾರ್ಯಕ್ರಮವಿದ್ದು, ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶಂಕರ ಮಹಾದೇವ ಬಿದರಿ, ಶಾಸಕ ಹೆಚ್.ಎಂ. ಗಣೇಶ್ ಪ್ರಸಾದ್, ಎಡಿಸಿ ಡಾ.ಪಿ.ಶಿವರಾಜು, ಹೆಚ್.ವಿ. ಬಸವರಾಜು, ಬಿ.ಕೆ.ಬಸವರಾಜು ಇನ್ನಿತರರು ಭಾಗವಹಿಸುವವರು. ಈ ವೇಳೆ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕ ಪಡೆದ ಬಸವ ಬಳಗ ಟ್ರಸ್ಟ್ ಸದಸ್ಯರ ಪ್ರತಿಭಾವಂತ ಮಕ್ಕಳನ್ನು ಪುರಸ್ಕರಿಸಲಾಗುವುದು. ವೀರಶೈವ–ಲಿಂಗಾಯತ ಸಮುದಾಯದ ಸಾಧಕರನ್ನು ಅಭಿನಂದಿಸಲಾಗುತ್ತದೆ ಎಂದರು. ಸುದ್ದಿಗೋಷ್ಠಿಯಲ್ಲಿ ಡಿ.ಲೋಹಿತ್, ಶ್ರೀಕಂಠಮೂರ್ತಿ, ಮಹದೇವಸ್ವಾಮಿ, ನಾಗಣ್ಣ, ಟಿ.ಜಿ.ನಾಗೇಂದ್ರ, ದೇವಪ್ಪ, ಪ್ರಭುಸ್ವಾಮಿ, ಕುಮಾರಣ್ಣ ಉಪಸ್ಥಿತರಿದ್ದರು.

ನಾಳೆ ಕಲಾಮಂದಿರದಲ್ಲಿ 'ವಜ್ರೇಶ್ವರಿಯ ಮುತ್ತು ಕನ್ನಡಿಗರ ಸ್ವತ್ತು' ಕಾರ್ಯಕ್ರಮ

ಮೈಸೂರು, ಮೇ29(ಜಿಎ)–ಡಾ.ರಾಜ್‌ಕುಮಾರ್ ಅವರ 97ನೇ ಜಯಂತಿ, ಪಾರ್ವತಮ್ಮ ರಾಜ್‌ಕುಮಾರ್ ಅವರ 8ನೇ ವರ್ಷದ ಪುಣ್ಯಸ್ಮರಣೆ ಅಂಗವಾಗಿ ಮೇ31ರ ಸಂಜೆ 5ಕ್ಕೆ ನಗರದ ಕಲಾಮಂದಿರದಲ್ಲಿ ಡಾ.ರಾಜ್‌ಕುಮಾರ್ ಕಲಾ ಸೇವಾ ಟ್ರಸ್ಟ್ ವತಿಯಿಂದ 'ವಜ್ರೇಶ್ವರಿಯ ಮುತ್ತು ಕನ್ನಡಿಗರ ಸ್ವತ್ತು' ಕಾರ್ಯಕ್ರಮ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಟ್ರಸ್ಟ್ ಅಧ್ಯಕ್ಷ ಬಿ.ಎಸ್. ಜಯರಾಮರಾಜು ಈ ವಿಷಯ ತಿಳಿಸಿ, ಅಂದು ಡಾ.ರಾಜ್‌ಕುಮಾರ್ ಅವರು ಹಾಡಿರುವ ಕನ್ನಡ ಚಿತ್ರಗೀತೆಗಳ ಲೈವ್ ಕಾರ್ಯಕ್ರಮ ಇರಲಿದೆ. ಎಲ್ಲರಿಗೂ ಉಚಿತ ಪ್ರವೇಶವಿದೆ. ತಮ್ಮ ಜೊತೆಗೆ ಸುರೇಶ್, ರಾಮ್‌ದಾಸ್, ಡಾ.ಸುರೇಂದ್ರನ್, ಚಂದ್ರಶೇಖರ್, ಅಶ್ವಿನಿ, ತೇಜಸ್ವಿನಿ, ಶ್ರುತಿ, ಅನಿತಾ ಒಟ್ಟು 28 ಗೀತೆಗಳನ್ನು ಹಾಡಲಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಸುರೇಶ್, ಚಂದ್ರಶೇಖರ್, ಲತಾ ಬಾಲಕೃಷ್ಣ ಉಪಸ್ಥಿತರಿದ್ದರು.

ಹುಟ್ಟುಹಬ್ಬ ಆಚರಣೆ



ಮೈಸೂರಿನ ಬುದ್ಧವಿಹಾರದಲ್ಲಿ ಬುದ್ಧ ಪೂರ್ಣಿಮೆ ಅಂಗವಾಗಿ ಭಾರತೀಯ ಬೌದ್ಧ ಮಹಾಸಭಾ ದಕ್ಷಿಣ ವಲಯ ಮಹಾಘಟಕದ ಪ್ರಧಾನ ಕಾರ್ಯದರ್ಶಿ, ಸಾವಿತ್ರಿಬಾಯಿ ಫುಲೆ ರಾಷ್ಟ್ರ ಪ್ರಶಸ್ತಿ, ಒನಕೆ ಓಬವ್ವ ಜಿಲ್ಲಾ ಪ್ರಶಸ್ತಿ, ಚೈತನ್ಯ ನವಚೈತನ್ಯ ಪ್ರಶಸ್ತಿ ಪುರಸ್ಕೃತರಾದ ಚೂಡಾಮಣಿಯವರ ಹುಟ್ಟುಹಬ್ಬವನ್ನು ಆಚರಿಸಲಾಯಿತು. ಈ ವೇಳೆ ಕಲ್ಯಾಣ ಸಿರಿ ಬಂತೇಜಿ, ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಶಿವಣ್ಣ ಮತ್ತಿತರರಿದ್ದರು.

ಮಳೆಗಾಲದಲ್ಲಿ ಮಕ್ಕಳ ಬಗ್ಗೆ ಎಚ್ಚರಿಕೆ ವಹಿಸಿ

ಮುತ್ತತ್ತಿಯಲ್ಲಿ ಮುಳುಗಿ ಮೃತಪಟ್ಟವರ ಕುಟುಂಬದವರಿಗೆ 8 ಲಕ್ಷ ಪರಿಹಾರ ವಿತರಣೆ

ಮೈಸೂರು, ಮೇ 29– ಇತ್ತೀಚೆಗೆ ಕೃಷ್ಣರಾಜ ವಿಧಾನಸಭಾ ಕ್ಷೇತ್ರಕ್ಕೆ ಒಳಪಡುವ ವಾರ್ಡ್ ನಂ.54ರ ಕನಕಗಿರಿ ಮೂಲದ ನಾಲ್ವರು ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲೂಕಿನ ಹಲಗೂರು ಹೋಬಳಿಯಲ್ಲಿ ಬರುವ ಮುತ್ತತ್ತಿ ಬಳಿ ಕಾವೇರಿ ನದಿಯಲ್ಲಿ ಆಕಸ್ಮಿಕವಾಗಿ ಬಿದ್ದು ಮೃತಪಟ್ಟವರ ಕುಟುಂಬಗಳಿಗೆ ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ಪರಿಹಾರ ವಿತರಿಸಿದರು.

ಮೃತಪಟ್ಟ ಸಂದರ್ಭದಲ್ಲೂ ಎಂ.ಕೆ ಸೋಮಶೇಖರ್ ಶವಾಗಾರಕ್ಕೆ ತೆರಳಿ, ನಂತರ ಅಂತ್ಯಸಂಸ್ಕಾರದಲ್ಲೂ ಪಾಲ್ಗೊಂಡು ಕುಟುಂಬಕ್ಕೆ ಸಾಂತ್ವನ ಹೇಳಿದ್ದರು. ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಮೃತಪಟ್ಟವರ ಕುಟುಂಬಗಳ ಆರ್ಥಿಕ ಸ್ಥಿತಿಗತಿಗಳನ್ನು ಮನವರಿಕೆ ಮಾಡಿ, ನಾಲ್ಕು ಜನರ ಕುಟುಂಬಕ್ಕೂ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಹಣ ಮಂಜೂರು ಮಾಡಿಸಲು ಮುತುವರ್ಜಿ ವಹಿಸಿ, ಅದರಂತೆ ತಲಾ 2 ಲಕ್ಷದಂತೆ ಒಟ್ಟು 8 ಲಕ್ಷ ರೂ ಪರಿಹಾರ ದೊರಕುವಂತೆ ಮಾಡಿದರು.



ಮುತ್ತತ್ತಿಯಲ್ಲಿ ಮೃತಪಟ್ಟವರ ಕುಟುಂಬದವರಿಗೆ ಪರಿಹಾರ ವಿತರಿಸಲಾಯಿತು.

ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅವರ ಕಚೇರಿ ಜನನಿಯಲ್ಲಿ ಮೃತಪಟ್ಟವರ ಕುಟುಂಬಗಳಿಗೆ ಹಣ ಮಂಜೂರಾತಿ ಆದೇಶ ಪತ್ರಗಳನ್ನು ವಿತರಿಸಿದರು.

ಈ ವೇಳೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ.ಸೋಮಶೇಖರ್, ವಾರ್ಡ್ ಅಧ್ಯಕ್ಷ ಕೇಬಲ್ ಮಹದೇವು, ಆಶ್ರಯ ಸಮಿತಿ ಸದಸ್ಯರಾದ ಗುಣಶೇಖರ್, ಮಹ್ಮದ್ ಫಾರೂಖ್, ಕಾಂಗ್ರೆಸ್ ಮುಖಂಡರಾದ ಸಿದ್ದು, ಹರೀಶ್ ಗಂಧನಹಳ್ಳಿ, ಮಂಜುನಾಥ್, ಮಧುರಾಜ್, ನಾಗ ಮಹದೇವ ಮತ್ತಿತರರು ಉಪಸ್ಥಿತರಿದ್ದರು.

ಜೂ.1ರಿಂದ ಜೇಸಿಯಾನ

ನಾಳೆ ಜೆಎಸ್‌ಎಸ್ ಓಪನ್ ಡೇ ಕಾರ್ಯಕ್ರಮ

ಮೈಸೂರು, ಮೇ29(ಜಿಎ)–ಮೈಸೂರಿನ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿವಿಯಲ್ಲಿ ಜೂ.1 ಮತ್ತು 2 ರಂದು ಜೇಸಿಯಾನ–ಸಾಂಸ್ಕೃತಿಕ ಚಟುವಟಿಕೆಗಳು ಮತ್ತು ಪ್ರತಿಭಾ ಪ್ರದರ್ಶನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಪ್ರಾಚಾರ್ಯ ಡಾ.ನಟರಾಜ್ ತಿಳಿಸಿದರು.


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮದ ಮುನ್ನ ದಿನವಾದ ಮೇ 31ರಂದು ಬೆಳಗ್ಗೆ 10 ಗಂಟೆಗೆ ಜೆಎಸ್‌ಎಸ್ ಓಪನ್ ಡೇ (ಮುಕ್ತದಿನ) ಇರಲಿದೆ. ಜೆಎಸ್‌ಎಸ್ ವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟ್‌ಸೂರ್‌ಮಠ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ ಎಂದರು.

ಜೂ.1ರಂದು ಸಂಜೆ 6ಗಂಟೆಗೆ ವಿವಿಧ ಕಾಲೇಜು ವಿದ್ಯಾರ್ಥಿಗಳು ಸಾಂಸ್ಕೃತಿಕ ಪ್ರದರ್ಶನ ನೀಡಲಿದ್ದಾರೆ. ಖ್ಯಾತ ಸಂಗೀತ ಸಂಯೋಜಕ ರಘುದೀಕ್ಷಿತ್ ಲೈವ್ ಸಂಗೀತ ಕಾರ್ಯಕ್ರಮವಿರಲಿದೆ. ಜೂ.2 ರಂದು ಸಂಜೆ 6ಗಂಟೆಗೆ ವಿದ್ಯಾರ್ಥಿಗಳು ವಿವಿಧ ಸಾಂಸ್ಕೃತಿಕ ಪ್ರದರ್ಶನ ನೀಡಲಿದ್ದಾರೆ. ಗಾಯಕ ಜೋಡಿಯಾದ ಸುಕೃತಿ ಕಕ್ಕರ್ ಮತ್ತು ಪ್ರಕೃತಿ ಕಕ್ಕರ್ ಅವರಿಂದ ಆಕರ್ಷಕ ಪ್ರದರ್ಶನವಿರಲಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಕುಲಸಚಿವ ಡಾ.ಹರೀಶ್, ಡೀನ್‌ಗಳಾದ ಡಾ.ನಾಗೇಂದ್ರಪ್ರಸಾದ್, ಡಾ.ಅನಿಲ್ ಕುಮಾರ್ ಉಪಸ್ಥಿತರಿದ್ದರು.

ದೇಶ - ವಿದೇಶ

ಪಾಕ್ ನಟಿ ಮಹಿರಾ ಖಾನ್‌ಗೆ ಭದ್ರತಾ ಸಿಬ್ಬಂದಿಯಿಂದಲೇ ಲೈಂಗಿಕ ಕಿರುಕುಳ

ಲಂಡನ್: ಪಾಕಿಸ್ತಾನದ ಖ್ಯಾತ ನಟಿ ಮಹಿರಾ ಖಾನ್ ತಮ್ಮ ನೂತನ ಚಿತ್ರ 'ಲವ್ ಗುರು' ಪ್ರಚಾರಕ್ಕಾಗಿ ಲಂಡನ್‌ಗೆ ತೆರಳಿದ್ದ ವೇಳೆ ಅವರ ಭದ್ರತಾ ಸಿಬ್ಬಂದಿಯೇ ಲೈಂಗಿಕ ಕಿರುಕುಳ ನೀಡಿರುವ ಬಗ್ಗೆ ವರದಿಯಾಗಿದೆ.



ಚಿತ್ರದ ನಾಯಕ ಹುಮಾಯೂನ್ ಸಯೀದ್ ಕೂಡ ಅವರೊಂದಿಗೆ ಹಾಜರಿದ್ದರು. ಈ ವೇಳೆ ಆಕ್ರೋಶಗೊಂಡ ನಟಿ ಜನಸಂದಣಿ ನಡುವೆ ಏನೂ ಮಾಡಲಾಗದೇ ಚಿತ್ರಮಂದಿರದೊಳಗೆ ಹೋದರು. ನಟಿ ಮಹಿರಾ ಖಾನ್ ಲವ್ ಗುರು ಚಿತ್ರದ ಪ್ರಚಾರಕ್ಕಾಗಿ ಲಂಡನ್‌ನ ಇಲ್ಫೋರ್ಡ್‌ನಲ್ಲಿರುವ ಇಂಡೋ–ಪಾಕ್ ಸೂಪರ್ ಮಾರ್ಕೆಟ್‌ನಲ್ಲಿ ನಡೆದ ಕಾರ್ಯಕ್ರಮಕ್ಕೆ ತೆರಳಿದ್ದರು. ಈ ವೇಳೆ ಅಲ್ಲಿ ನೂರಾರು ಮಂದಿ ಅದಾಗಲೇ ಸೇರಿದ್ದರು. ನಟಿ ತುಂಬಾ ಪ್ರಯಾಸಪಟ್ಟು ಜನರ ನಡುವೆಯೇ ತಳ್ಳಾಟ ನೂಕಾಟದ ನಡುವೆ ಕಾರ್ಯಕ್ರಮದ ವೇದಿಕೆಗೆ ಹೋದರು. ಆದರೆ, ಈ ನಡುವೆಯೇ ಅವರ ಭದ್ರತಾ ಸಿಬ್ಬಂದಿಯೇ ಮಹಿರಾ ಖಾನ್ ದೇಹ ಮುಟ್ಟಿ ಲೈಂಗಿಕ ಕಿರುಕುಳ ನೀಡಿದ್ದಾರೆ ಎನ್ನಲಾಗಿದೆ. ತುಂಬಾ ನೂಕುನುಗ್ಗಲು ಇದ್ದ ಕಾರಣ ಜನ ನಟಿಯತ್ತ ನುಗ್ಗುತ್ತಿದ್ದರು. ಇದನ್ನೇ ತಮ್ಮ ಕುಕೃತ್ಯಕ್ಕೆ ಬಳಸಿಕೊಂಡ ಭದ್ರತಾ ಸಿಬ್ಬಂದಿ ಅವರನ್ನು ರಕ್ಷಿಸುವ ನೆಪದಲ್ಲಿ ಅವರ ಮೈಮುಟ್ಟಿ ವಿಕೃತಿ ಮೆರೆದಿದ್ದಾರೆ.

ಜಲಪಾತದ ಮೇಲಿಂದ ಮರಬಿದ್ದು ಇಬ್ಬರ ಸಾವು

ಡೆಹ್ರಾಡೂನ್: ಜಲಪಾತ ವೀಕ್ಷಣೆಗೆ ತೆರಳಿದ್ದ ಪ್ರವಾಸಿಗರ ಮೇಲೆ ಮರ ಬಿದ್ದ ಪರಿಣಾಣ ಇಬ್ಬರು ಪ್ರವಾಸಿಗರು ಸ್ಥಳದಲ್ಲಿಯೇ ಸಾವನ್ನಪ್ಪಿರುವ ಘಟನೆ ನಡೆದಿದೆ. ಉತ್ತರಾಖಂಡದ ರಾಜಧಾನಿ ಡೆಹ್ರಾಡೂನ್ ಜಿಲ್ಲೆಯ ಚಕ್ರತದಲ್ಲಿರುವ ಜನಪ್ರಿಯ ಜಲಪಾತವಾದ ಟೈಗರ್ ಫಾಲ್ಸ್‌ನಲ್ಲಿ ಈ ಭೀಕರ ಘಟನೆ ನಡೆದಿದ್ದು, ಜಲಪಾತದಲ್ಲಿ ಸ್ನಾನ ಮಾಡುತ್ತಿದ್ದಾಗ ಮರ ಬಿದ್ದು ದೆಹಲಿಯ ಮಹಿಳೆ ಸೇರಿದಂತೆ ಇಬ್ಬರು ಪ್ರವಾಸಿಗರು ಸಾವನ್ನಪ್ಪಿದ್ದಾರೆ. ಮೃತರನ್ನು ದೆಹಲಿಯ ಶಹದಾರ ಪ್ರದೇಶದ ಅಲ್ಕಾ ಆನಂದ್ ಮತ್ತು ಚಕ್ರತದ ಗೀತಾರಾಮ್ ಜೋಶಿ (48) ಎಂದು ಗುರುತಿಸಲಾಗಿದೆ. ವಿಚಾರ ತಿಳಿದ ಕೂಡಲೇ ಸ್ಥಳಕ್ಕಾಗಮಿಸಿ ಸ್ಥಳ ಪರಿಶೀಲನೆ ನಡೆಸಿದ ಚಕ್ರತ ಪೊಲೀಸ್ ಠಾಣೆಯ ಉಸ್ತುವಾರಿ ಚಂದ್ರಶೇಖರ್ ನೌಟಿಯಾಲ್, ಆನಂದ್ ತನ್ನ ಮಗಳು ಮತ್ತು ಆಕೆಯ ಭಾವಿ ಪತಿಯೊಂದಿಗೆ ಬಂದಿದ್ದರು. ಆದರೆ ಜೋಶಿ ತನ್ನ ಪತ್ನಿ ಮತ್ತು ಮಗಳೊಂದಿಗೆ ಅಲ್ಲಿದ್ದರು. ಅವರು ಇತರ ಪ್ರವಾಸಿಗರೊಂದಿಗೆ ಜಲಪಾತದಲ್ಲಿ ಸ್ನಾನ ಮಾಡುತ್ತಿದ್ದಾಗ ಸುಮಾರು 60 ಮೀಟರ್ ಎತ್ತರದಿಂದ ಜಲಪಾತದ ಜೊತೆಗೆ ಮರ ಉರುಳಿತು. ಈ ವೇಳೆ ಅಲ್ಕಾ ಆನಂದ್ ಮತ್ತು ಚಕ್ರತದ ಗೀತಾರಾಮ್ ಜೋಶಿ ಅವರ ಮೇಲೆ ಮರ ಬಿದ್ದು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಉಳಿದ ಮೂವರು ಸಣ್ಣ ಪುಟ್ಟ ಗಾಯಗಳೊಂದಿಗೆ ಪ್ರಾಣಾಪಾಯದಿಂದ ಪಾರಾಗಿದ್ದಾರೆ.



ಭಾರತೀಯರಿಗೆ ವೀಸಾ ಮುಕ್ತ ಪ್ರಯಾಣಕ್ಕೆ ಫಿಲಿಪೈನ್ಸ್ ಅವಕಾಶ

ಫಿಲಿಪೈನ್ಸ್: ಭಾರತೀಯರಿಗೆ ಫಿಲಿಪೈನ್ಸ್ ವೀಸಾ ಮುಕ್ತ ಪ್ರಯಾಣಕ್ಕೆ ಅವಕಾಶ ನೀಡುವುದಾಗಿ ಘೋಷಿಸಿದೆ. ಇಂದಿನ ಕಾಲದಲ್ಲಿ ವೀಸಾದ ಪ್ರಾಮುಖ್ಯತೆ ಹೆಚ್ಚಿದೆ ಹೆಚ್ಚಿನ ದೇಶಗಳಲ್ಲಿ ಇದರ ಬಗ್ಗೆ ಕಠಿಣ ನಿಯಮಗಳನ್ನು ಕೂಡ ಮಾಡಲಾಗಿದೆ. ಆದರೆ ಕೆಲವು ದೇಶಗಳು ತಮ್ಮ ಪ್ರವಾಸದೋದ್ಯಮವನ್ನು ಹೆಚ್ಚಿಸಲು ವೀಸಾ ಮುಕ್ತ ಪ್ರವೇಶ ಸೌಲಭ್ಯಗಳನ್ನು ನೀಡಲು ಮುಂದಾಗಿದೆ.



ಇದರಲ್ಲಿ ಥೈಲೆಂಡ್, ವಿಯೆಟ್ನಾಂ, ಸಿಂಗಾಪುರ ಸೇರಿವೆ ಮತ್ತು ಈಗ ಫಿಲಿಪೈನ್ಸ್ ಕೂಡ ಈ ಪಟ್ಟಿಗೆ ಸೇರ್ಪಡೆಯಾಗಿದೆ. ಪ್ರವಾಸೋದ್ಯಮವನ್ನು ಉತ್ತೇಜಿಸಲು ಫಿಲಿಪೈನ್ಸ್, ಭಾರತೀಯ ನಾಗರಿಕರಿಗೆ ಎರಡು ಹೊಸ ವೀಸಾ ಮುಕ್ತ ಪ್ರವೇಶ ಆಯ್ಕೆಗಳನ್ನು ಪರಿಚಯಿಸಿದೆ. ನವದೆಹಲಿಯಲ್ಲಿರುವ ಫಿಲಿಪೈನ್ಸ್ ರಾಯಭಾರ ಕಚೇರಿ ಈ ಘೋಷಿಸಿದೆ. ಈಗ ಭಾರತೀಯ ಪಾಸ್‌ಪೋರ್ಟ್ ಹೊಂದಿರುವವರಿಗೆ ಫಿಲಿಪೈನ್ಸ್‌ನ ಸುಮಧುರವಾದ ಕಡಲತೀರಗಳು ಮತ್ತು ದ್ವೀಪಗಳಲ್ಲಿ ತಮ್ಮ ರಜೆಯನ್ನು ಕಳೆಯಲು ವೀಸಾ ಅಗತ್ಯವಿಲ್ಲ ಮತ್ತು ಪ್ರಯಾಣವು ಹೆಚ್ಚು ಸುಲಭವಾಗುತ್ತದೆ. 14 ದಿನಗಳ ವೀಸಾ ಮುಕ್ತ ಪ್ರವೇಶ ಈಗ ಭಾರತೀಯ ಪ್ರವಾಸಿಗರು ವೀಸಾ ಇಲ್ಲದೆ ಫಿಲಿಪೈನ್ಸ್‌ಗೆ ಭೇಟಿ ನೀಡಬಹುದು, ಈ ಸೌಲಭ್ಯವನ್ನು ಪ್ರವಾಸದ ಉದ್ದೇಶದಿಂದ ಮಾತ್ರ ಒದಗಿಸಲಾಗುತ್ತಿದೆ.

ಅಮರನಾಥ ಯಾತ್ರೆಗೆ 42,000 ಕೇಂದ್ರ ಸಶಸ್ತ್ರ ಪೊಲೀಸರು

ನವದೆಹಲಿ: ಜಮ್ಮು ಮತ್ತು ಕಾಶ್ಮೀರದಲ್ಲಿ ಆರಂಭವಾಗಲಿರುವ ವಾರ್ಷಿಕ ಅಮರನಾಥ ಯಾತ್ರೆಗಾಗಿ 42,000 ಕೇಂದ್ರ ಸಶಸ್ತ್ರ ಪೊಲೀಸ್ ಪಡೆ ಸಿಬ್ಬಂದಿಯನ್ನೊಳಗೊಂಡ 580 ತುಕಡಿಗಳ ನಿಯೋಜನೆಗೆ ಕೇಂದ್ರ ಸರ್ಕಾರ ಆದೇಶಿಸಿದೆ. 580 ತುಕಡಿಗಳ ಪೈಕಿ 424 ತುಕಡಿಗಳನ್ನು ಕೇಂದ್ರಾಡಳಿತ ಪ್ರದೇಶಕ್ಕೆ ಕಳುಹಿಸಲಾಗುತ್ತಿದೆ. ಆಪರೇಷನ್ ಸಿಂಧೂರ್ ಸಮಯದಲ್ಲಿ ಕೇಂದ್ರಾಡಳಿತ ಪ್ರದೇಶಕ್ಕೆ ಸ್ಥಳಾಂತರಗೊಂಡ ಸುಮಾರು 80 ತುಕಡಿಗಳು ಸೇರಿದಂತೆ ಉಳಿದವುಗಳನ್ನು ಯಾತ್ರಾ ಮಾರ್ಗ, ಯಾತ್ರಿಕರು ಮತ್ತು ಶ್ರೀನಗರ ಮತ್ತಿತರ ಪ್ರದೇಶಗಳಿಗೆ ಸ್ಥಳಾಂತರಗೊಳಿಸಲಾಗುವುದು. ಜೂನ್ 2ನೇ ವಾರದೊಳಗೆ ಜಮ್ಮು–ಕಾಶ್ಮೀರದಲ್ಲಿ ಕರ್ತವ್ಯಕ್ಕೆ ನಿಯೋಜನೆಯಾಗುವಂತೆ ಕೇಂದ್ರ ಗೃಹ ಸಚಿವಾಲಯ ಈ ಪಡೆಗಳಿಗೆ ಆದೇಶಿಸಿದೆ. ಅಮರನಾಥ ಯಾತ್ರೆಯು ಜು.3ರಂದು ಪ್ರಾರಂಭವಾಗಿ ಆ.9ರಂದು ಕೊನೆಗೊಳ್ಳಲಿದೆ. ಏ.22ರ ಪಹಲ್ಗಾಮ್ ಉಗ್ರರ ದಾಳಿಯಲ್ಲಿ 26 ಜನರು, ಹೆಚ್ಚಾಗಿ ಪ್ರವಾಸಿಗರು ಸಾವನ್ನಪ್ಪಿದ ಹಿನ್ನೆಲೆಯಲ್ಲಿ ಈ ಬಾರಿಯ ಅಮರನಾಥ ಯಾತ್ರೆಗೆ ಸುಮಾರು 580 ಕೇಂದ್ರ ಸಶಸ್ತ್ರ ಪೊಲೀಸ್ ಪಡೆಯ ಸಿಬ್ಬಂದಿ ನಿಯೋಜಿಸಲು ಕೇಂದ್ರ ಗೃಹ ಸಚಿವಾಲಯ ನಿರ್ಧರಿಸಿದೆ.



ಡೊನಾಲ್ಡ್ ಟ್ರಂಪ್ ಆಡಳಿತದಿಂದ ಎಲಾನ್ ಮಸ್ಕ್ ನಿರ್ಗಮನ

ವಾಷಿಂಗ್ಟನ್: ಅನಿರೀಕ್ಷಿತ ಬೆಳವಣಿಗೆಯಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತದಿಂದ ನಿರ್ಗಮಿಸುತ್ತಿರುವುದಾಗಿ ಸ್ಪೇಸ್ ಎಕ್ಸ್ ಒಡೆತನದ ಬಿಲಿಯನೇರ್ ಎಲಾನ್ ಮಸ್ಕ್ ಘೋಷಿಸಿದ್ದಾರೆ.



ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ತೆರಿಗೆ ನೀತಿಯನ್ನು ಟೀಕಿಸಿದ ಒಂದು ದಿನದ ಬಳಿಕ ವಿಶ್ವದ ಶ್ರೀಮಂತ ವ್ಯಕ್ತಿ ಎಲೋನ್ ಮಸ್ಕ್ ಅವರು ಅಮೆರಿಕದ ಸರ್ಕಾರಿ ದಕ್ಷತೆ ಇಲಾಖೆಯ ಮುಖ್ಯಸ್ಥ ಹುದ್ದೆಯಿಂದ ಕೆಳಗೆ ಇಳಿದಿದ್ದಾರೆ. ಈ ಕುರಿತು ತಮ್ಮದೇ ಒಡೆತನದ ಸಾಮಾಜಿಕ ಮಾಧ್ಯಮ 'ಎಕ್ಸ್' ಖಾತೆಯಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ. ವಿಶೇಷ ಸರ್ಕಾರಿ ಉದ್ಯೋಗಿಯಾಗಿ ನನ್ನ ನಿಗದಿತ ಅವಧಿ ಕೊನೆಗೊಂಡಿದೆ. ಅನಗತ್ಯ ವೆಚ್ಚಗಳನ್ನು ಕಡಿತ ಮಾಡಲು ಅವಕಾಶ ನೀಡಿದ್ದಕ್ಕಾಗಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಧನ್ಯವಾದಗಳು ಎಂದು ತಿಳಿಸಿದ್ದಾರೆ. ಅಮೆರಿಕ ಸರ್ಕಾರದ ಕಾರ್ಯದಕ್ಷತಾ ಇಲಾಖೆ (ಡಿಒಜಿಇ) ಕಾಲಕ್ರಮೇಣ ಬಲಗೊಳ್ಳಲಿದ್ದು, ಸರ್ಕಾರದ ಕಾರ್ಯವಿಧಾನ ಭಾಗವಾಗಿದೆ ಎಂದು ಹೇಳಿದ್ದಾರೆ.

ತೆರಿಗೆ ಬಿಲ್‌ಗೆ ಸಂಬಂಧಿಸಿ ಉಂಟಾಗಿರುವ ಭಿನ್ನಾಭಿಪ್ರಾಯದಿಂದ ಟ್ರಂಪ್ ಆಡಳಿತವನ್ನು ತೊರೆಯಲು ಮಸ್ಕ್ ನಿರ್ಧರಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮಳೆಯಿಂದ ಚಿಕ್ಲಿಹೊಳೆ ಭರ್ತಿ

ಹಾಲ್ನೊರೆ ರೀತಿ ಹರಿಯುತ್ತಿರುವ ಜಲಪಾತ ನೋಡಲು ಹೆಚ್ಚಿನ ಪ್ರವಾಸಿಗರು ಆಗಮಿಸುವ ನಿರೀಕ್ಷೆ



ಮಡಿಕೇರಿ ಮೇ 29– ಕುಶಾಲನಗರ ಸಮೀಪದ ರಂಗಸಮುದ್ರ ಬಳಿ ಇರುವ ಪ್ರಸಿದ್ಧ ಪ್ರವಾಸಿ ತಾಣವಾಗಿಯೂ ಗುರುತಿಸಿಕೊಂಡಿರುವ ಜಿಲ್ಲೆಯ ಅತಿ ಸಣ್ಣ ಜಲಾಶಯ ಚಿಕ್ಲಿಹೊಳೆ ಭರ್ತಿಯಾಗಿದೆ. ಜಲಾಶಯದ ಜಲಾನಯನ ಪ್ರದೇಶಗಳಲ್ಲಿ ವ್ಯಾಪಕ ಮಳೆ ಸುರಿಯುತ್ತಿರುವ ಹಿನ್ನೆಲೆಯಲ್ಲಿ ಜಲಾಶಯ ಸಂಪೂರ್ಣ ಭರ್ತಿಯಾಗಿದ್ದು ಹೆಚ್ಚುವರಿ ನೀರು ಅರ್ಧ ಚಂದ್ರಾಕೃತಿಯ ಮೂಲಕ ನದಿಗೆ ಹರಿಯುತ್ತಿದೆ.

0.18 ಟಿಎಂಸಿ ನೀರು ಸಂಗ್ರಹಣ ಸಾಮರ್ಥ್ಯ ಹೊಂದಿರುವ ಜಲಾಶಯ ಈ ಬಾರಿ ಮೇ ತಿಂಗಳ ಕೊನೆಯ ವಾರದಲ್ಲೇ ಭರ್ತಿಯಾಗುವ ಮೂಲಕ ಕೃಷಿಕರ ಮೊಗದಲ್ಲಿ ಮಂದಹಾಸ ಮೂಡಿಸಿದೆ. ಇದೀಗ ಜಲಾಶಯ ಭರ್ತಿಯಾಗಿರುವ ಹಿನ್ನೆಲೆಯಲ್ಲಿ ಮಾನ್ಸೂನ್ ಟೂರಿಸಂ ಹೆಸರಲ್ಲಿ ಅಧಿಕ ಸಂಖ್ಯೆಯಲ್ಲಿ ಪ್ರವಾಸಿಗರು ಇತ್ತ ಕಡೆ ಆಗಮಿಸುತ್ತಿದ್ದಾರೆ. ಜಲಾಶಯದಿಂದ ಹಾಲ್ನೊರೆ ರೀತಿಯಲ್ಲಿ ನೀರು ನದಿ ಪಾತ್ರಕ್ಕೆ ಹರಿಯುತ್ತಿದ್ದು ಈ ನಯನ ಮನೋಹರ ದೃಶ್ಯಕ್ಕೆ ಪ್ರವಾಸಿಗರ ಸಹಿತ ಜಿಲ್ಲೆಯ ಸ್ಥಳೀಯರು ಕೂಡ ಸಾಕ್ಷಿಗಳಾಗುತ್ತಿದ್ದಾರೆ. ಕಳೆದ ವರ್ಷ ಜುಲೈ ಮೊದಲ ವಾರದಲ್ಲಿ ಚಿಕ್ಲಿಹೊಳೆ ಜಲಾಶಯ ಭರ್ತಿಯಾಗಿತ್ತು ಎಂಬುದನ್ನು ಇಲ್ಲಿ ಸ್ಮರಿಸಬಹುದು.

ನಿರ್ಲಕ್ಷ್ಯದಿಂದ ಹೊರಬರಲಿ: ಚಿಕ್ಲಿಹೊಳೆ ಜಲಾಶಯದ ಒಳಭಾಗದಲ್ಲಿರುವ ಕಟ್ಟಡ ಸಂಪೂರ್ಣ ಶಿಥಿಲಾವಸ್ಥೆಗೆ ತಲುಪಿದ್ದು, ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಇಂದೋ ನಾಳೆಯೋ ಕುಸಿದು ಬೀಳುವ ಹಂತ ತಲುಪಿದೆ. ಸುಮಾರು 2137 ಹೆಕ್ಟೇರ್ ಭೂಮಿ ಕೃಷಿಗೆ ನೀರು ಪೂರೈಸಬೇಕಿದ್ದ ಈ ಜಲಾಶಯ ಸರ್ಕಾರದ ಅವಕೃಪೆಗೆ ಸಿಲುಕಿದೆ ಎಂಬ ಆರೋಪ ಕೇಳಿ ಬಂದಿದೆ. ನೀರಾವರಿ ಇಲಾಖೆ ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ಚಿಕ್ಲಿಹೊಳೆ ಜಲಾಶಯದ ಸೌಂದರ್ಯ ಸವಿಯಲು ಬರುವ ಪ್ರವಾಸಿಗರಿಗೆ ಯಾವುದೇ ಸೌಕರ್ಯವಿಲ್ಲದೇ ಇರುವುದು ಕಂಡು ಬರುತ್ತಿದೆ. ಚಿಕ್ಲಿಹೊಳೆ ಜಲಾಶಯವನ್ನು ಅಭಿವೃದ್ಧಿಪಡಿಸಿದ್ದಲ್ಲಿ ಪ್ರವಾಸಿಗರ ಮೆಚ್ಚಿನ ತಾಣವಾಗುವುದರಲ್ಲಿ ಅಚ್ಚರಿ ಇಲ್ಲ. ಆದರೆ ಈ ಬಗ್ಗೆ ಸಂಬಂಧಿಸಿದ ಇಲಾಖಾಧಿಕಾರಿಗಳು ತಮ್ಮ ಉದಾಸೀನ ಮನೋಭಾವದಿಂದ ಹೊರಬಂದು ಚಿಕ್ಲಿಹೊಳೆ ಜಲಾಶಯದ ಅಭಿವೃದ್ಧಿಗೆ ಮುಂದಾಗಬೇಕಿದೆ.

ಇಂದು ತಾಪಂ ತ್ರೈಮಾಸಿಕ ಕೆಡಿಪಿ ಸಭೆ

ಮಡಿಕೇರಿ: ಮಡಿಕೇರಿ ವಿಧಾನಸಭಾ ಕ್ಷೇತ್ರದ ಶಾಸಕ ಡಾ.ಮಂತರ್ ಗೌಡ ಅವರ ಅಧ್ಯಕ್ಷತೆಯಲ್ಲಿ ಮಡಿಕೇರಿ ತಾ.ಪಂ ತ್ರೈಮಾಸಿಕ ಕೆಡಿಪಿ ಸಭೆಯು ಮೇ 30ರಂದು ಮಧ್ಯಾಹ್ನ 3 ಗಂಟೆಗೆ ನಗರದ ಜಿಲ್ಲಾ ಪಂಚಾಯತಿ ಸಭಾಂಗಣದಲ್ಲಿ ನಡೆಯಲಿದೆ ಎಂದು ತಾ. ಪಂಚಾಯಿತಿ ಇಒ ಶೇಖರ್ ತಿಳಿಸಿದ್ದಾರೆ.

ಕೊಡಗಿನಲ್ಲಿ ತಗ್ಗಿದ ಮಳೆಯ ಆರ್ಭಟ

ಮುಂದುವರಿದ ಮನೆ ಕುಸಿತ, ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರ



ನಿರಾಶ್ರಿತರಿಗೆ ಅಧಿಕಾರಿಗಳು ಆಹಾರದ ಕಿಟ್‌ಗಳನ್ನು ವಿತರಿಸಿದರು.

ಮಡಿಕೇರಿ, ಮೇ 29– ಕೊಡಗು ಜಿಲ್ಲೆಯಲ್ಲಿ ಮಳೆಯ ಅಬ್ಬರ ಕಡಿಮೆಯಾಗಿದ್ದರೂ, ಮನೆ ಹಾನಿ ಪ್ರಕರಣಗಳು ವರದಿಯಾಗಿವೆ.

ಶಾಂತಳ್ಳಿ ಹೋಬಳಿ ತಲ್ತಾರೆ ಶೆಟ್ಟಳ್ಳಿ ಗ್ರಾಮ ನಿವಾಸಿ ಸುಶೀಲ ಎಂಬವರ ಮನೆ ಭಾರಿ ಮಳೆ ಗಾಳಿಯಿಂದ ಹಾನಿಯಾಗಿದೆ. ಸೋಮವಾರಪೇಟೆ ತಾಲೂಕು ಶನಿವಾರ ಸಂತೆ ಹೋಬಳಿ ದೊಡ್ಡಹನಕೋಡು ಗ್ರಾಮದ ನಿವಾಸಿ ಈರಮ್ಮ ಎಂಬವರ ಮನೆ ಮಳೆಯಿಂದ ಹಾನಿಯಾಗಿದೆ.

ಪ್ರಸ್ತುತ ಮನೆ ಮಂದಿಯನ್ನು ಸುರಕ್ಷಿತ ಸ್ಥಳಗಳಿಗೆ ತೆರಳಲು ಸೂಚಿಸಲಾಗಿದೆ. ಈ ಕುಟುಂಬಗಳಿಗೆ ಸೋಮವಾರಪೇಟೆ ತಹಶೀಲ್ದಾರ್ ಮತ್ತು ಕಂದಾಯ ಇಲಾಖೆ ಅಧಿಕಾರಿಗಳು ಆಹಾರದ ಕಿಟ್‌ಗಳನ್ನು ವಿತರಿಸಿದ್ದಾರೆ.

ಕುಶಾಲನಗರ ತಾಲೂಕು ನೆಲ್ಯಹುದಿಕೇರಿ ಗ್ರಾಮದ ನಿವಾಸಿ ಲೀಲಾವತಿ ಎಂಬವರ ಮನೆ ಮಳೆಯಿಂದ ಹಾನಿಯಾಗಿದೆ. ಕುಶಾಲನಗರ ತಹಶೀಲ್ದಾರ್ ಮತ್ತು ಕಂದಾಯ ಇಲಾಖೆ ಅಧಿಕಾರಿಗಳು ಮಳೆಹಾನಿ ಪರಿಶೀಲನೆ ನಡೆಸಿ, ಈ ಕುಟುಂಬಕ್ಕೂ ಆಹಾರದ ಕಿಟ್‌ಗಳನ್ನು ವಿತರಿಸಿದ್ದಾರೆ. ಶನಿವಾರ ಸಂತೆ ಹೋಬಳಿ ದೊಡ್ಡಹನಕೊಡು ಗ್ರಾಮದ ನಿವಾಸಿ ಸುಬ್ಬಯ್ಯ ಎಂಬವರ ಮನೆಯ ಮೇಲೆ ಭಾರಿ ಮಳೆ ಗಾಳಿಗೆ ಮರ ಮುರಿದು ಬಿದ್ದಿದ್ದು, ಮನೆಗೆ ಶೇ.50 ಹಾನಿಯಾಗಿದೆ. ಈ ಮನೆ ಮಳೆಗಾಲ ವಾಸಕ್ಕೆ ಯೋಗ್ಯವಿಲ್ಲದ ಕಾರಣ ಸುರಕ್ಷಿತ ಸ್ಥಳಕ್ಕೆ ತೆರಳುವಂತೆ ಕಂದಾಯ ಇಲಾಖೆ ಅಧಿಕಾರಿಗಳು ಸೂಚಿಸಿದ್ದಾರೆ.

ಉಪ ವಿಭಾಗಾಧಿಕಾರಿ ವಿನಾಯಕ ನರ್ವಾಡೆ ಅವರು ಭಾಗಮಂಡಲ ಹೋಬಳಿಯ ಪ್ರವಾಹ ಪೀಡಿತ ಬೆಂಗೂರು ಗ್ರಾಮದ ದೋಣಿ ಕಡವು ಪ್ರದೇಶಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಗ್ರಾಮಸ್ಥರ ಉಪಯೋಗಕ್ಕೆ ಸ್ಥಳದಲ್ಲಿ ಸಿಬ್ಬಂದಿ ಸಹಿತ ದೋಣಿ ವ್ಯವಸ್ಥೆ ಮಾಡಲಾಗಿದೆ ಎಂದು ಇದೇ ಸಂದರ್ಭ ಕಂದಾಯ ಇಲಾಖೆ ಅಧಿಕಾರಿಗಳು ಮಾಹಿತಿ ನೀಡಿದರು. ಭಾಗಮಂಡಲದ ತ್ರಿವೇಣಿ ಸಂಗಮ ಹಾಗೂ ಪದಕಲ್ಲು ಗ್ರಾಮದಲ್ಲಿ ಮಳೆಯಿಂದ ಹಾನಿಗೊಳಗಾಗಿರುವ ಭಾಸ್ಕರ್ ಎಂಬುವರ ಮನೆಯನ್ನು ಉಪ ವಿಭಾಗಾಧಿಕಾರಿಗಳು ಪರಿಶೀಲನೆ ನಡೆಸಿದರು.

ಮಳೆಗಾಲದಲ್ಲಿ ಮುಂಜಾಗೃತಾ ಕ್ರಮವಾಗಿ ಕಾಳಜಿ ಕೇಂದ್ರಕ್ಕೆ ಕಾಯ್ದಿರಿಸಿದ ಚೇರಂಬಾಣೆ ಗ್ರಾಮದ ಬಾಲಕರ ವಸತಿ ಭವನ, ಭಾಗಮಂಡಲ ಗ್ರಾಮದ ಐಟಿಐ ಕಾಲೇಜು ಹಾಗೂ ಭಾಗಮಂಡಲ ಗ್ರಾಮದ ಕಾಶಿ ಮಠದಲ್ಲಿನ ಮೂಲಭೂತ ಸೌಕರ್ಯಗಳನ್ನು ಉಪ ವಿಭಾಗಧಿಕಾರಿ ವಿನಾಯಕ ನರ್ವಾಡೆ ಪರಿಶೀಲಿಸಿದರು.

ಶ್ರೀ ಓಂಕಾರೇಶ್ವರ ದೇವಾಲಯದ ಪುಷ್ಕರಣಿ ಬಹುತೇಕ ಭರ್ತಿ



ಮಡಿಕೇರಿ: ನಗರ ವ್ಯಾಪ್ತಿಯಲ್ಲಿ ಧಾರಾಕಾರ ಮಳೆ ಸುರಿದ ಹಿನ್ನೆಲೆಯಲ್ಲಿ ಮಡಿಕೇರಿಯ ಇತಿಹಾಸ ಪ್ರಸಿದ್ಧ ಶ್ರೀ ಓಂಕಾರೇಶ್ವರ ದೇವಾಲಯದ ಪುಷ್ಕರಣಿ ಬಹುತೇಕ ಭರ್ತಿಯಾಗಿದೆ.

ಪುಷ್ಕರಣಿಯ ಮೇಲಿನ ಮೆಟ್ಟಿಲಿನ ವರೆಗೆ ನೀರು ತುಂಬಿದ್ದು, ಮತ್ತಷ್ಟು ಮಳೆ ಸುರಿದಲ್ಲಿ ಪುಷ್ಕರಣಿಯ ಪಕ್ಕದಲ್ಲೇ ಇರುವ ರಸ್ತೆಗೆ ನೀರು ಹರಿಯಲಿದೆ. ಪುಷ್ಕರಣಿಯ ಸುತ್ತಲೂ ಕಬ್ಬಿಣದ ರಕ್ಷಣಾ ತಡೆಗೋಡೆ ಇರುವ ಹಿನ್ನೆಲೆಯಲ್ಲಿ ದೇವಾಲಯಕ್ಕೆ ಆಗಮಿಸುವ ಭಕ್ತರಿಗೆ ಯಾವುದೇ ತೊಂದರೆ ಎದುರಾಗಿಲ್ಲ. ಎರಡು ದಶಕಗಳ ಬಳಿಕ ಮೇ ಕೊನೆಯ ವಾರದಲ್ಲಿ ಪುಷ್ಕರಣಿ ಭರ್ತಿಯಾಗುತ್ತಿರುವುದು ವಿಶೇಷವಾಗಿದೆ.

ಎಸ್‌ಎಸ್‌ಎಲ್‌ಸಿಯಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನ



ಮಡಿಕೇರಿ, ಮೇ 29– ಎಸ್‌ಎಸ್‌ಎಲ್‌ಸಿಯಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದ ಮಡಿಕೇರಿ ನಿವಾಸಿ ಎಂ.ಎನ್.ತನ್ಮಯಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬೆಂಗಳೂರಿನಲ್ಲಿ ನಡೆದ ಸಮಾರಂಭದಲ್ಲಿ ಸನ್ಮಾನಿಸಿ ಗೌರವಿಸಿದರು.

ಮಡಿಕೇರಿ ವಕೀಲರ ಸಂಘದ ಅಧ್ಯಕ್ಷ ಎಂ.ಎ. ನಿರಂಜನ್–ಸೌಮ್ಯ ದಂಪತಿ ಪುತ್ರನಾಗಿರುವ ತನ್ಮಯಿ ಮೈಸೂರು ಶ್ರೀ ರಾಮಕೃಷ್ಣ ವಿದ್ಯಾಲಯದ ವಿದ್ಯಾರ್ಥಿಯಾಗಿದ್ದಾರೆ.

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 625 ಅಂಕಗಳನ್ನು ಪಡೆದು ತನ್ಮಯಿ ರಾಜ್ಯಕ್ಕೇ ಪ್ರಥಮ ಸ್ಥಾನ ಪಡೆದಿದ್ದರು.

ಸಮಾಜದ ಒಳಿತಿಗೆ ಉತ್ತಮ ಕಾರ್ಯಗಳು ನಡೆಯಬೇಕು



'ಮಾಸಿಕ ತತ್ತ್ವ ಚಿಂತನಾ ಗೋಷ್ಠಿ ಹೊಂಬೆಳಕು ಕಿರಣ್ ಕಾರ್ಯಕ್ರಮ ಉದ್ಘಾಟನೆ ಸಂದರ್ಭ.

ವಿರಾಜಪೇಟೆ: ಮನುಷ್ಯ ಉತ್ತಮ ಆರೋಗ್ಯವಂತನಾಗಲು ದೇಹವೇ ದೇಗುಲ. ಧ್ಯಾನ ಮಾಡುವುದು, ಧ್ಯಾನದಿಂದ ಸಮಾಧಾನ ಆತ್ಮ ಶಕ್ತಿ ಹಾಗು ಮನಸಿನಲ್ಲಿ ಸಮಾಜದ ಒಳಿತಿಗಾಗಿ ಉತ್ತಮ ಕಾರ್ಯಗಳು ನಡೆಯುವಂತಾಗಬೇಕು ಎಂದು ಬೆಂಗಳೂರು ಸಮುದಾಯ ದಂತ ವೈದ್ಯ ಡಾ.ಶಿವಕುಮಾರ್ ಹೇಳಿದರು.

ಸಮೀಪದ ಅರಮೇರಿ ಕಳಂಚೇರಿ ಶ್ರೀ ಮಠದ ಲಿಂಗರಾಜೇಂದ್ರ ಭವನದ ಸಭಾಂಗಣದಲ್ಲಿ ನಡೆದ 'ಮಾಸಿಕ ತತ್ತ್ವ ಚಿಂತನಾ ಗೋಷ್ಠಿ ಹೊಂಬೆಳಕು ಕಿರಣ 231'ರ ಕಾರ್ಯಕ್ರಮದಲ್ಲಿ ಜೀವನ ಅನ್ನೋದು ಅನೇಕ ವಿಚಾರ ಗಳನ್ನು ತಿಳಿದುಕೊಳ್ಳುವಂತದ್ದು ಶರೀರವನ್ನು ಕಡೆಗಣಿಸದೆ ಹೆಚ್ಚು ಸಾಧನೆ ಮಾಡುವಂತಾಗಬೇಕು. ಶಿಕ್ಷಣ ಜ್ಞಾನವನ್ನು ಸಂಪಾದಿಸಿಕೊಳ್ಳುವಂತದ್ದು. ಹೊಟ್ಟೆ ಪಾಡಿಗೋಸ್ಕರ ಜ್ಞಾನರ್ಜನೆ ಅಲ್ಲ. ಜೀವನದ ಮೌಲ್ಯ ಆಧಾರಿತ ಜ್ಞಾನದಿಂದ ಸಮಾಜಕ್ಕೆ ಒಳಿತಾಗಲಿದೆ ಎಂದರು.

ಜನರ ಮನಸ್ಸನ್ನು ಪರಿವರ್ತನೆ ಮಾಡುವಂತ ಮಹತ್ವದ ಕಾರ್ಯಕ್ರಮವಾಗಿದೆ. ಇನ್ನು ಹೆಚ್ಚು ಜನರಿಗೆ ತಲುಪುವಂತಾಗಲಿ ಎಂದಲ್ಲದೆ ಮನುಷ್ಯ ದುಷ್ಚಟಗಳನ್ನು ದೂರಮಾಡಿ ಯೋಗ, ಧ್ಯಾನ ಮತ್ತು ಉತ್ತಮ ಅಹಾರ ಸೇವಿಸುವ ಮೂಲಕ ಆರೋಗ್ಯವೇ ಸಂಪತ್ತು ಕಾಣಲು ಸಾಧ್ಯವಾಗುತ್ತದೆ ಎಂದು ಕಾರ್ಯಕ್ರಮ ಉದ್ಘಾಟಿಸಿದ ಪತ್ರಕರ್ತ ಮಂಜುನಾಥ್ ತಿಳಿಸಿದರು.

ಸಾನಿಧ್ಯ ವಹಿಸಿದ್ದ ಅರಮೇರಿ ಕಳಂಚೇರಿ ಶ್ರೀ ಮಠದ ಪೀಠಾಧಿಪತಿ ಶಾಂತಮಲ್ಲಿಕಾರ್ಜುನ ಸ್ವಾಮೀಜಿ ಸಭೆಯನ್ನುದ್ದೇಶಿಸಿ ಆರೋಗ್ಯ ಅನ್ನೋದು ಪ್ರತಿಯೊಬ್ಬರಿಗೂ ಅವಶ್ಯ, ತಾಂತ್ರಿಕತೆ ಆಧುನಿಕ ಶಿಕ್ಷಣ ಇದೆಲ್ಲಾ ಹೆಚ್ಚಾಗಿರುವುದರಿಂದ ಮಾನಸಿಕ ಒತ್ತಡ ಜಾಸ್ತಿಇರುವುದರಿಂದ ನಾವು ಅವುಗಳ ಕೈಗೊಂಬೆ ಆಗುತ್ತಿದ್ದೇವೆ. ಪ್ರಾಮಾಣಿಕತೆ ಶಿಸ್ತು ಶ್ರಮ ಮತ್ತು ಶ್ರದ್ಧೆಯಿಂದ ಅಧ್ಯಾತ್ಮಿಕತೆ ಚಿಂತನೆ ನಡೆಸುವುವ ಮೂಲಕ ಗಮನಹರಿಸಿದರೆ ನಮ್ಮ ಆರೋಗ್ಯ ಹೆಚ್ಚು ಉತ್ತಮವಾಗಿರಲು ಸಾಧ್ಯವಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ವಿರಾಜಪೇಟೆ ವೈದ್ಯ ಡಾ.ಎಸ್.ವಿ.ನರಸಿಂಹನ್ ಸ್ವಾಗತಿಸಿ, ನಿರೂಪಿಸಿದರು, ಗೋಣಿಕೊಪ್ಪಲು ಕಾಳಿಮಾಡ ಡಾ.ಮೋಟಯ್ಯ ಪ್ರಾರ್ಥಿಸಿದರೆ, ಸಾಹಿತಿ ಕಿಗ್ಗಾಲು ಗಿರೀಶ್ ವಂದಿಸಿದರು.

ಕಾಡಾನೆ ದಾಳಿಯಿಂದ ಸಾವನ್ನಪ್ಪಿದ ಕುಟುಂಬಕ್ಕೆ ಪರಿಹಾರ ವಿತರಣೆ



ಅಣ್ಣಯ್ಯ ಕುಟುಂಬಕ್ಕೆ 5 ಲಕ್ಷ ರೂ. ಪರಿಹಾರದ ಚೆಕ್ ಹಸ್ತಾಂತರ ಮಾಡಲಾಯಿತು.

ಮಡಿಕೇರಿ, ಮೇ 29– ಗೋಣಿಕೊಪ್ಪ ಸಮೀಪದ ದೇವರಪುರ ಬಳಿ ಕಾಡಾನೆ ದಾಳಿಗೆ ಸಿಲುಕಿ ಜೀವ ಕಳೆದುಕೊಂಡಿದ್ದ ಕೂಲಿ ಕಾರ್ಮಿಕ ಅಣ್ಣಯ್ಯ ಕುಟುಂಬಕ್ಕೆ ಪ್ರಥಮ ಹಂತದ 5 ಲಕ್ಷ ರೂ. ಪರಿಹಾರ ಚೆಕ್ ಹಸ್ತಾಂತರ ಮಾಡಲಾಯಿತು.

ರಾಜ್ಯ ವನ್ಯಜೀವಿ ಮಂಡಳಿ ಸದಸ್ಯ ಸಂಕೇತ್ ಪೂವಯ್ಯ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ತೀತಿರ ಧರ್ಮಜ ಉತ್ತಪ್ಪ, ಎ.ಸಿ.ಎಫ್ ಗೋಪಾಲ್, ಬಾನಂಡ ಪೃಥ್ವಿ ಅವರುಗಳು ಚೆಕ್ ಹಸ್ತಾಂತರಿಸಿ ಕುಟುಂಬಕ್ಕೆ ಸಾಂತ್ವನ ಹೇಳಿದರು.

ವಿರಾಜಪೇಟೆ ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಅವರು ಮೃತ ಅಣ್ಣಯ್ಯ ಅವರ ಮನೆಗೆ ಶೀಘ್ರದಲ್ಲೇ ಭೇಟಿ ನೀಡಿ 2ನೇ ಹಂತದ 15 ಲಕ್ಷ ರೂ.ಗಳ ಪರಿಹಾರದ ಚೆಕ್ ಅನ್ನು ಹಸ್ತಾಂತರ ಮಾಡಲಿದ್ದಾರೆ ಎಂದು ಇದೇ ಸಂದರ್ಭ ಸಂಕೇತ್ ಪೂವಯ್ಯ ಮಾಹಿತಿ ನೀಡಿದರು. ಮೇ 21ರಂದು ದೇವರಪುರ ಸಮೀಪ ಕಾಡಾನೆ ತುಳಿತಕ್ಕೊಳಗಾಗಿ ಕೂಲಿ ಕಾರ್ಮಿಕ ಅಣ್ಣಯ್ಯ ಸಾವನ್ನಪ್ಪಿದ್ದರು.

ಮುಂದುವರೆದ ಪೌರಕಾರ್ಮಿಕರ ಮುಷ್ಕರ

ಕುಡಿಯುವ ನೀರು, ಬೀದಿ ದೀಪ ಹೊರತು ಪಡಿಸಿ ಉಳಿದ ಸೇವೆಗಳು ಸ್ಥಗಿತ, ಸಾರ್ವಜನಿಕರ ಪರದಾಟ



ತಮ್ಮ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿದ ಪೌರಕಾರ್ಮಿಕರು ಮನವಿ ಸಲ್ಲಿಸಿ ಪ್ರತಿಭಟನೆ ನಡೆಸಿದರು.

ಚಾಮರಾಜನಗರ, ಮೇ 29– ಪೌರ ವೃಂದದ ನೌಕರರನ್ನು ಸರ್ಕಾರಿ ನೌಕರರೆಂದು ಘೋಷಿಸುವುದು ಸೇರಿದಂತೆ ಹಲವು ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಜಿಲ್ಲಾದ್ಯಂತ ನಗರ ಸ್ಥಳೀಯ ಸಂಸ್ಥೆಗಳ ಸಿಬ್ಬಂದಿ ನಡೆಸುತ್ತಿರುವ ಮುಷ್ಕರ 3ನೇ ದಿನಕ್ಕೆ ಕಾಲಿಟ್ಟಿದ್ದು, ಜಿಲ್ಲೆಯಲ್ಲಿ ಕುಡಿಯುವ ನೀರು, ಬೀದಿ ದೀಪ ಹೊರತುಪಡಿಸಿ ಉಳಿದೆಲ್ಲಾ ಕೆಲಸಗಳು ಸ್ಥಗಿತಗೊಂಡಿದೆ.

ಚಾಮರಾಜನಗರ– ಕೊಳ್ಳೇಗಾಲ ನಗರ ಸಭೆ, ಯಳಂದೂರು– ಹನೂರು ಪಟ್ಟಣ ಪಂಚಾಯಿತಿ, ಗುಂಡ್ಲುಪೇಟೆ ಪುರಸಭೆಯ ಸಿಬ್ಬಂದಿ ಸೇವೆಗೆ ಗೈರಾಗಿ, ಅನಿರ್ದಿಷ್ಟಾವಧಿ ಮುಷ್ಕರವನ್ನು ಮಂಗಳವಾರ ಬೆಳಗ್ಗೆಯಿಂದ ಆರಂಭಿಸಲಾಗಿದೆ. ಹೀಗಾಗಿ, ಜಿಲ್ಲಾದ್ಯಂತ ಸ್ಥಳೀಯ ಆಡಳಿತ ಸೇವೆ ಅಸ್ತವ್ಯಸ್ತವಾಗಿದೆ.

ಸಾರ್ವಜನಿಕರ ಪರದಾಟ: ಪ್ರತಿನಿತ್ಯ ನಗರಸಭೆ, ಪಟ್ಟಣ ಪಂಚಾಯಿತಿ, ಪುರಸಭೆಗಳಿಗೆ ಇ–ಸ್ವತ್ತು ಖಾತೆ ಬದಲಾವಣೆ, ಜನನ–ಮರಣ ಪ್ರಮಾಣ ಪತ್ರ, ಕಂದಾಯ ಪಾವತಿ ಸೇರಿದಂತೆ ಇನ್ನಿತರ ಹತ್ತು ಹಲವು ಕೆಲಸಗಳಿಗೆ ನೂರಾರು ಸಾರ್ವಜನಿಕರು ಭೇಟಿ ನೀಡುತ್ತಿದ್ದರು. ಆದರೆ, 3 ದಿನಗಳಿಂದ ಸ್ಥಳೀಯ ಆಡಳಿತ ಸೇವೆಯೂ ಸ್ಥಗಿತಗೊಂಡಿರುವುದರಿಂದ ಗ್ರಾಮೀಣ ಪ್ರದೇಶ ಹಾಗೂ ದೂರದ ಊರುಗಳಿಂದ ಬಂದಿದ್ದ ಸಾರ್ವಜನಿಕರು ನಿತ್ಯದ ಕೆಲಸಗಳಿಗೆ ಪರದಾಡುವಂತಾಯಿತು.

ಕಸದ ರಾಶಿ: ಮುಷ್ಕರದ ಕಾರಣ ನಗರದಲ್ಲಿ ಮನೆ–ಮನೆಗಳಿಂದ ಕಸ ಸಂಗ್ರಹ ನಡೆಯಲಿಲ್ಲ ಹಾಗೂ ರಸ್ತೆ ಬದಿಯಲ್ಲಿ ಸಂಗ್ರಹವಾಗಿರುವ ಕಸವನ್ನು ಎತ್ತುವ ಕೆಲಸವೂ ನಡೆಯಲಿಲ್ಲ. ಇದರ ಜೊತೆಗೆ ಒಳಚರಂಡಿ ಸ್ವಚ್ಛತೆ, ಎಂಜಿನಿಯರಿಂಗ್ ಕೆಲಸಗಳೂ ನಡೆಯಲಿಲ್ಲ. ನಗರಸಭೆ ಕಚೇರಿಯೊಳಗೆ ಆಯುಕ್ತರು ಬಿಟ್ಟರೆ ಉಳಿದೆಲ್ಲರೂ ಪ್ರತಿಭಟನೆಯಲ್ಲಿ ತೊಡಗಿದ್ದರು. ಹೀಗಾಗಿ ನಾಗರೀಕರ ಸೇವೆಗಳೆಲ್ಲ ಬಂದ್ ಆಗಿವೆ.

ಮುಷ್ಕರ ಸ್ಥಗಿತಗೊಳಿಸಲು ಮನವಿ: ಜಿಲ್ಲಾ ಕೇಂದ್ರ ಚಾಮರಾಜನಗರದ ನಗರಸಭೆಯ ಕಚೇರಿ ಮುಂಭಾಗ ನಡೆಯುತ್ತಿರುವ ಧರಣಿ ಸ್ಥಳಕ್ಕೆ ಜಿಲ್ಲಾ ನಗರಾಭಿವೃದ್ಧಿ ಕೋಶ ಯೋಜನಾ ನಿರ್ದೇಶಕರಾದ ಪಿ. ಸುಧಾ, ಎಇಇ ರಾಮಚಂದ್ರ ಭೇಟಿ ನೀಡಿ ಪ್ರತಿಭಟನಾಕಾರ ನೌಕರರಿಂದ ಮನವಿ ಸ್ವೀಕರಿಸಿದರು.

> ನೌಕರರ ಸಮಸ್ಯೆಗಳು ರಾಜ್ಯ ಮಟ್ಟದಲ್ಲಿ ಇತ್ಯಾರ್ಥವಾಗಬೇಕಿದೆ. ಜಿಲ್ಲೆಯಲ್ಲಿ ಸಾರ್ವಜನಿಕರಿಗೆ ಕಳೆದೆರಡು ದಿನಗಳಿಂದ ಆಗುತ್ತಿರುವ ತೊಂದರೆಗಳ ಬಗ್ಗೆ ಸರ್ಕಾರಕ್ಕೆ ಈಗಾಗಲೇ ವರದಿ ನೀಡಲಾಗಿದೆ.
>
> –ಶಿಲ್ಪಾನಾಗ್, ಜಿಲ್ಲಾಧಿಕಾರಿ.

ನಂತರ ಮಾತನಾಡಿ, ತಮ್ಮ ಮನವಿಯನ್ನು ಜಿಲ್ಲಾಧಿಕಾರಿಗಳ ಮುಖಾಂತರ ಸರ್ಕಾರಕ್ಕೆ ಕಳುಹಿಸಿ ಕೊಡಲಾಗುವುದು. ಸರ್ಕಾರ ತಮ್ಮ ಬೇಡಿಕೆಗಳನ್ನು ಈಡೇರಿಸಲಿದೆ. ಮುಷ್ಕರ ಕೈ ಬಿಟ್ಟು ಇಂದಿನಿಂದ ಕರ್ತವ್ಯಕ್ಕೆ ಹಾಜರಾಗುವಂತೆ ಮನವಿ ಮಾಡಿದರು.

ಮುಷ್ಕರ ಕೈ ಬಿಡಲು ನಕಾರ: ರಾಜ್ಯದ ಸಮಿತಿ ಆದೇಶ ಬರುವವರೆಗೂ ಮುಷ್ಕರ ಕೈ ಬಿಡುವುದಿಲ್ಲ. ನಮ್ಮ ಮುಷ್ಕರ ಮುಂದುವರೆಯುವುದು ಎಂದು ಇದೇ ವೇಳೆ ಪ್ರತಿಭಟನಾಕಾರರು ತಿಳಿಸಿದರು.

ಮಹಾನಗರ ಪಾಲಿಕೆ, ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಗಳ ಪೌರ ನೌಕರರನ್ನು ರಾಜ್ಯ ಸರ್ಕಾರಿ ನೌಕರರೆಂದು ಪರಿಗಣಿಸಬೇಕು. ನಗದು ರಹಿತ ಆರೋಗ್ಯ ಚಿಕಿತ್ಸಾ ಸೌಲಭ್ಯ ಯೋಜನೆಯಾದ ಜ್ಯೋತಿ ಸಂಜೀವಿನಿಯನ್ನು ಪೌರ ನೌಕರರಿಗೂ ವಿಸ್ತರಿಸಬೇಕು ಎಂದು ಆಗ್ರಹಿಸಿದರು.

ಮುಷ್ಕರದಲ್ಲಿ ವೆಂಕಟನಾಯಕ, ಮಂಜುನಾಥ್, ಜಯನಾಯಕ್, ಶಿವಶಂಕರ್ ಆರಾಧ್ಯ, ಸುಷ್ಮಾ, ಪುಷ್ಪ, ಮಂಗಳಗೌರಿ, ನಾಗರಾಜು, ನಿತಿನ್, ಸಂತೋಷ, ಜಿ.ರಾಜಪ್ಪ ಸೇರಿದಂತೆ ಇತರ ನೌಕರರು ಭಾಗವಹಿಸಿದ್ದರು.

ಎಸ್‌ಎಸ್‌ಎಲ್‌ಸಿಯಲ್ಲಿ ಶೇ.100ರಷ್ಟು ಸಾಧನೆ

ಸಿಎಂ ಸಮ್ಮುಖದಲ್ಲಿ ಮುಡಿಗುಂಡ ಸರ್ಕಾರಿ ಆದರ್ಶ ಶಾಲೆಯ ಮುಖ್ಯ ಶಿಕ್ಷಕಿಗೆ ಸನ್ಮಾನ



ಸಾಧಕ ಶಿಕ್ಷಕರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಸಮ್ಮುಖದಲ್ಲಿ ಅಭಿನಂದಿಸಲಾಯಿತು.

ಕೊಳ್ಳೇಗಾಲ: ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.100ರಷ್ಟು ಫಲಿತಾಂಶ ಪಡೆದ ಜಿಲ್ಲೆಯ ಏಕೈಕ ಸರ್ಕಾರಿ ಶಾಲೆ ಎಂಬ ಕೀರ್ತಿಗೆ ಬಾಜನವಾಗಿರುವ ಇಲ್ಲಿನ ಮುಡಿಗುಂಡದ ಸರ್ಕಾರಿ ಆದರ್ಶ ವಿದ್ಯಾಲಯಕ್ಕೆ ರಾಜ್ಯ ಸರ್ಕಾರದಿಂದ ಸನ್ಮಾನದ ಗೌರವ ಲಭಿಸಿದೆ.

ಬೆಂಗಳೂರಿನ ಆಡುಗೋಡಿಯಲ್ಲಿ ಗುರುವಾರ ನಡೆದ ಶಾಲಾ ಪ್ರಾರಂಭೋತ್ಸವ 2025–26 ಕಾರ್ಯಕ್ರಮದಲ್ಲಿ ರಾಜ್ಯದ ಮುಖ್ಯಮಂತ್ರಿ ಸಿದ್ಧರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಶಿಕ್ಷಣ ಸಚಿವ ಮಧು ಬಂಗಾರಪ್ಪ, ಸಾರಿಗೆ ಸಚಿವ ರಾಮಲಿಂಗಾರೆಡ್ಡಿಯವರು ಶಾಲೆಯ ಮುಖ್ಯ ಶಿಕ್ಷಕಿ ಆರ್. ಪ್ರಿಯದರ್ಶಿನಿ ಅವರನ್ನು ಸನ್ಮಾನಿಸಿದ್ದಾರೆ.

ಇಲ್ಲಿನ ಮುಡಿಗುಂಡದ ಸರ್ಕಾರಿ ಆದರ್ಶ ವಿದ್ಯಾಲಯ 2024–25ನೇ ಸಾಲಿನ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಯಲ್ಲಿ ಶೇ.100ರಷ್ಟು ಫಲಿತಾಂಶ ಪಡೆದಿದ್ದು, ಜಿಲ್ಲೆಯಲ್ಲಿ 100ರಷ್ಟು ಫಲಿತಾಂಶ ಪಡೆದ ಏಕೈಕ ಸರ್ಕಾರಿ ಶಾಲೆಯಾಗಿದೆ.

ಅಲ್ಲದೇ, ಶೇ.100ರಷ್ಟು ಫಲಿತಾಂಶ ಪಡೆದ ಸರ್ಕಾರಿ ಪ್ರೌಢಶಾಲೆಗಳ ಪೈಕಿ ವಿಭಾಗವಾರು ಗರಿಷ್ಠ ಸಂಖ್ಯೆಯಲ್ಲಿ ಪರೀಕ್ಷೆ ಬರೆದ ಮಕ್ಕಳ ಸಂಖ್ಯೆಯನ್ನು ಆಧರಿಸಿ ರಾಜ್ಯದ ಒಟ್ಟು 10 ಸರ್ಕಾರಿ ಪ್ರೌಢಶಾಲೆಗಳನ್ನು ಆಯ್ಕೆ ಮಾಡಲಾಗಿದ್ದು, ಅದರಲ್ಲಿ ಸ್ಥಳೀಯ ಆದರ್ಶ ವಿದ್ಯಾಲಯವನ್ನು ಸಹ ಆಯ್ಕೆ ಮಾಡಿ ಮುಖ್ಯಮಂತ್ರಿಗಳ ಸಮ್ಮುಖದಲ್ಲಿ ಅಭಿನಂದಿಸಿರುವುದು ಜವಾಬ್ದಾರಿ ಹೆಚ್ಚಿಸಿದೆ ಎಂದು ಸನ್ಮಾನಿತ ಮುಖ್ಯ ಶಿಕ್ಷಕರಾದ ಪ್ರಿಯದರ್ಶಿನಿ ತಿಳಿಸಿದರು.

ಇಂದು ವಿನೂತನ ಕಾರ್ಯಕ್ರಮಗಳ ಮೂಲಕ ಶಾಲಾ ಪ್ರಾರಂಭೋತ್ಸವ

ಚಾಮರಾಜನಗರ: 2025–26ನೇ ಸಾಲಿನ ಶೈಕ್ಷಣಿಕ ವರ್ಷವು ಮೇ 30ರಿಂದ ಪ್ರಾರಂಭವಾಗುತ್ತಿದ್ದು ವಿನೂತನವಾಗಿ ಶೈಕ್ಷಣಿಕ ವರ್ಷದ ಶಾಲಾ ಪ್ರಾರಂಭೋತ್ಸವವನ್ನು ಹಮ್ಮಿಕೊಳ್ಳಲಾಗಿದೆ.

ಪ್ರಾರಂಭದ ದಿನದಂದು ವಿದ್ಯಾರ್ಥಿಗಳು ಶಾಲೆಗೆ ಬರುವಂತೆ ಎಲ್ಲಾ ರೀತಿಯ ಪೂರ್ವ ಸಿದ್ಧತೆ ಮಾಡಿಕೊಳ್ಳಲು ಈಗಾಗಲೇ ಶಿಕ್ಷಕರಿಗೆ ಮಾರ್ಗದರ್ಶನ ನೀಡಲಾಗಿದೆ. ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರ ಸುತ್ತೋಲೆ ಪ್ರಕಾರ 2025–26ನೇ ಸಾಲಿನಲ್ಲಿ ಪಿ.ಎಂ. ಪೋಷಣ್ (ಮಧ್ಯಾಹ್ನ ಉಪಹಾರ ಯೋಜನೆ) ಮತ್ತು ಕ್ಷೀರಭಾಗ್ಯ ಯೋಜನೆ ಹಾಗೂ ಪೌಷ್ಠಿಕ ಆಹಾರ ವಿತರಣೆಯನ್ನು ಶಾಲಾ ಪ್ರಾರಂಭೋತ್ಸವದ ದಿನದಂದೇ ಅನುಷ್ಠಾನಗೊಳಿಸಲಾಗುತ್ತಿದೆ. ಅಡುಗೆ ಪರಿಕರಗಳನ್ನು ಸ್ವಚ್ಛಗೊಳಿಸಿಕೊಳ್ಳುವುದು, ಬಿಸಿಯೂಟದ ಆಹಾರ ಪದಾರ್ಥಗಳು ಉತ್ತಮ ಗುಣಮಟ್ಟ ಹೊಂದಿರುವ ಬಗ್ಗೆ ಕಡ್ಡಾಯವಾಗಿ ಖಾತರಿಪಡಿಸಿಕೊಂಡು ಎಲ್ಲಾ ರೀತಿಯ ಮುನ್ನೆಚ್ಚರಿಕೆ ಕ್ರಮಗಳನ್ನು ಕಡ್ಡಾಯವಾಗಿ ಪಾಲಿಸಲು ತಿಳಿಸಲಾಗಿದೆ.

ಕಮಲಹಾಸನ್ ಹೇಳಿಕೆ ಖಂಡಿಸಿ ಕರ್ನಾಟಕ ಸೇನಾಪಡೆ ಪ್ರತಿಭಟನೆ



ಕಮಲಹಾಸನ್ ಹೇಳಿಕೆಯನ್ನು ಖಂಡಿಸಿ ಕರ್ನಾಟಕ ಸೇನಾಪಡೆ ಪ್ರತಿಭಟನೆ ನಡೆಯಿತು.

ಚಾಮರಾಜನಗರ: ಬಹುಭಾಷಾ ನಟ ಕಮಲಹಾಸನ್ ಕನ್ನಡ ಭಾಷೆ ಬಗ್ಗೆ ವಿವಾದಾತ್ಮಕ ಹೇಳಿಕೆ ನೀಡಿದ್ದನ್ನು ಖಂಡಿಸಿ ಕರ್ನಾಟಕ ಸೇನಾಪಡೆ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಯಿತು.

ನಗರದ ಭುವನೇಶ್ವರಿ ವೃತ್ತದಲ್ಲಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿಯಲ್ಲಿ ರಸ್ತೆ ತಡೆ ನಡೆಸಿ, ನಟ ಕಮಲ್ ಭಾವಚಿತ್ರಕ್ಕೆ ಟೊಮ್ಯಾಟೊ ಹೊಡೆದು ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆ ನೇತೃತ್ವ ವಹಿಸಿದ್ದ ಕರ್ನಾಟಕ ಸೇನಾ ಪಡೆ ಅಧ್ಯಕ್ಷ ಚಾ.ರಂ. ಶ್ರೀನಿವಾಸಗೌಡ ಮಾತನಾಡಿ, ಸಾವಿರಾರು ವರ್ಷಗಳ ಭವ್ಯ ಇತಿಹಾಸವಿರುವ, ಸ್ವತಂತ್ರ ಲಿಪಿ ಹೊಂದಿರುವ, ಶಾಸ್ತ್ರೀಯ ಸ್ಥಾನಮಾನ ಹೊಂದಿರುವ ಶ್ರೀಮಂತ ಭಾಷೆ ಕನ್ನಡ. ಕೋಟ್ಯಾಂತರ ಕನ್ನಡಿಗರ ಜೀವನಾಡಿ ಆಗಿರುವ ಹೆಮ್ಮೆಯ ಕನ್ನಡ ಭಾಷೆಗೆ ಕಮಲಹಾಸ್ ಅವರು ತಮಿಳಿನಿಂದ ಕನ್ನಡ ಹುಟ್ಟಿದ್ದು ಎಂದು ಹೇಳಿ ಕನ್ನಡ ಭಾಷೆಗೆ ಅವಮಾನಿಸಿದ್ದಾರೆ ಎಂದು ತೀವ್ರವಾಗಿ ಖಂಡಿಸಿದರು.

ಕೂಡಲೇ ಕಮಲಹಾಸನ್ ಕನ್ನಡಿಗರ ಹಾಗೂ ಕನ್ನಡ ಭಾಷೆಯ ಬಗ್ಗೆ ಕ್ಷಮೆ ಕೋರಬೇಕು ಇಲ್ಲದಿದ್ದಲ್ಲಿ ಮುಂದಿನ ವಾರ ತೆರೆ ಕಾಣಲಿರುವ ಅವರ ಸಿನಿಮಾವನ್ನು ರಾಜ್ಯಾದ್ಯಂತ ಬಹಿಷ್ಕಾರ ಮಾಡುತ್ತೇವೆ. ಒಂದು ವೇಳೆ ಚಿತ್ರ ಬಿಡುಗಡೆ ಮಾಡಿದ್ರೆ ಚಿತ್ರಮಂದಿರಕ್ಕೆ ನುಗ್ಗಿ ಪೋಸ್ಟರ್ ಹರಿದು ತಡೆಯುವುದಾಗಿ ಚಾ.ರಂ.ಶ್ರೀನಿವಾಸಗೌಡ ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ನಿಜಧ್ವನಿಗೋವಿಂದ, ನರಸಿಂಹ ಮೂರ್ತಿ ಇತರರು ಭಾಗವಹಿಸಿದ್ದರು.

ಗುಂಡ್ಲುಪೇಟೆಯಲ್ಲಿ ಅಡ್ಡಾದಿಡ್ಡಿ ವಾಹನಗಳ ಪಾರ್ಕಿಂಗ್‌ಗೆ ಬ್ರೇಕ್

ಜಾಗೃತಿ ಮೂಡಿಸುವುದರಿಂದ 500 ರಿಂದ ಸಾವಿರ ರೂ. ದಂಡ



ಗುಂಡ್ಲುಪೇಟೆ ಪಟ್ಟಣದಲ್ಲಿ ಅಡ್ಡಾದಿಡ್ಡಿ ಪಾರ್ಕಿಂಗ್ ಮಾಡಿದ್ದ ಮಾಲೀಕರಿಗೆ ಪೊಲೀಸರು ದಂಡ ವಿಧಿಸಿ ಜಾಗೃತಿ ಮೂಡಿಸುತ್ತಿರುವುದು.

ಗುಂಡ್ಲುಪೇಟೆ ಮೇ 29 (ಸೋಮ್.ಜಿ)– ಪಟ್ಟಣದ ರಸ್ತೆಬದಿಗಳಲ್ಲಿ ಅಡ್ಡಾದಿಡ್ಡಿ ಪಾರ್ಕಿಂಗ್ ಮಾಡುತ್ತಿದ್ದ ವಾಹನ ಸವಾರರಿಗೆ ಪೊಲೀಸರು ಗುರುವಾರ ಬಿಸಿ ಮುಟ್ಟಿಸಿದ್ದಾರೆ.

ಅಡ್ಡಾದಿಡ್ಡಿಯಾಗಿ ರಾಷ್ಟ್ರೀಯ ಹೆದ್ದಾರಿಯ ಪಕ್ಕದಲ್ಲಿ ದ್ವಿಚಕ್ರ ವಾಹನ ಹಾಗೂ ಇತರೆ ವಾಹನಗಳನ್ನು ನಿಲ್ಲಿಸುತ್ತಿದ್ದರಿಂದ ಸುಗಮ ಸಂಚಾರಕ್ಕೆ ಅಡಚಣೆಯಾಗುತ್ತಿತ್ತು. ಇದರಿಂದ ಆಗುತ್ತಿದ್ದ ಅನಾನುಕೂಲ ತಪ್ಪಿಸಲು ಪೊಲೀಸ್ ಇಲಾಖೆ ಆಯ್ದ ಸ್ಥಳಗಳಲ್ಲಿ ನೋ ಪಾರ್ಕಿಂಗ್ ಬೋರ್ಡ್ ಅಳವಡಿಸಿ ಅಲ್ಲಿ ನಿಲ್ಲಿಸುವ ವಾಹನಗಳಿಗೆ ದಂಡ ವಿಧಿಸುತ್ತಿದ್ದರೂ ಸಾರ್ವಜನಿಕರು ಇನ್ನೂ ಎಚ್ಚತ್ತುಕೊಳ್ಳದಿರುವುದು ಪೊಲೀಸರಿಗೆ ತಲೆನೋವಾಗಿ ಪರಿಣಮಿಸಿತ್ತು.

ಪಟ್ಟಣದಲ್ಲಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿ ಬದಿಗಳಲ್ಲಿರುವ ಬ್ಯಾಂಕುಗಳು, ವಾಣಿಜ್ಯ ಮಳಿಗೆಗಳು ಹಾಗೂ ಸರ್ಕಾರಿ ಕಚೇರಿಗಳಿಗೆ ಹೋಗುವವರು ಪ್ರತಿ ದಿನವೂ ಬೆಳಗ್ಗೆ 10 ರಿಂದ ಸಂಜೆಯವರೆಗೆ ಇವುಗಳ ಎದುರು ತಮ್ಮ ವಾಹನಗಳನ್ನು ನಿಲ್ಲಿಸುತ್ತಿದ್ದಾರೆ. ಎಲ್ಲೆಂದರಲ್ಲಿ ಅಡ್ಡಾದಿಡ್ಡಿ ಪಾರ್ಕಿಂಗ್ ಮಾಡುತ್ತಿದ್ದುದರಿಂದ ಪಟ್ಟಣದ ರಸ್ತೆಗಳಲ್ಲಿ ಸುಗಮ ಸಂಚಾರಕ್ಕೆ ಅಡಚಣೆಯುಂಟಾಗುತ್ತಿತ್ತು. ಅಲ್ಲದೆ ಪಾದಚಾರಿ ಮಾರ್ಗವೂ ಹಾಳಾಗಿರುವುದರಿಂದ ಜನರು ಸಹಾ ಹೆದ್ದಾರಿಯಲ್ಲಿ ಸಾಗುವಂತಾಗಿ ವೇಗವಾಗಿ ಸಾಗುವ ವಾಹನಗಳಿಗೆ ಸಿಲುಕಿ ಅಪಘಾತಕ್ಕೊಳಗಾಗುತ್ತಿದ್ದರು.

ಈ ಬಗ್ಗೆ ವ್ಯಾಪಕ ದೂರುಗಳು ಕೇಳಿಬಂದ ಹಿನ್ನೆಲೆಯಲ್ಲಿ ಪೊಲೀಸರು ಇತ್ತೀಚಿಗೆ ಆಯ್ದ ಸ್ಥಳಗಳಲ್ಲಿ ನೋ ಪಾರ್ಕಿಂಗ್ ಬೋರ್ಡ್ ಅಳವಡಿಸಿದ್ದಾರೆ. ಎಚ್ಚರಿಕೆಯನ್ನು ಉಲ್ಲಂಘಿಸಿ ವಾಹನ ನಿಲ್ಲಿಸುವ ವಾಹನಗಳ ಸವಾರರಿಗೆ 500 ರೂಪಾಯಿ ದಂಡ ವಿಧಿಸುವ ಮೂಲಕ ಬಿಸಿ ಮುಟ್ಟಿಸುತ್ತಿದ್ದಾರೆ. ಆದರೂ ಬ್ಯಾಂಕ್ ಹಾಗೂ ಕಚೇರಿಗಳಿಗೆ ಹೋಗುವ ಪ್ರಯಾಣಿಕರು ತಮ್ಮ ವಾಹನಗಳನ್ನು ಅಲ್ಲಿಯೇ ನಿಲ್ಲಿಸುತ್ತಿರುವುದು ಪೊಲೀಸರಿಗೆ ತಲೆನೋವಾಗಿ ಪರಿಣಮಿಸುತ್ತಿದೆ.

ಬ್ಯಾಂಕಿನ ಅಧಿಕಾರಿಗಳಿಗೆ ಬಿಸಿ ಮುಟ್ಟಿಸಿದ ಪೊಲೀಸರು: ಗುರುವಾರ ದಿಢೀರ್ ಕಾರ್ಯಾಚರಣೆ ನಡೆಸಿದ ಪೊಲೀಸರು ಪಟ್ಟಣದ ಕೆನರಾ ಬ್ಯಾಂಕ್, ಕರ್ನಾಟಕ ಬ್ಯಾಂಕ್ ಮುಂಭಾಗದಲ್ಲಿ ನೋ ಪಾರ್ಕಿಂಗ್ ಬೋರ್ಡ್ ಅಳವಡಿಸಿದ್ದರೂ ಬ್ಯಾಂಕುಗಳಿಗೆ ಹೋಗುವವರು ತಮ್ಮ ವಾಹನಗಳನ್ನು ರಸ್ತೆ ಬದಿಯಲ್ಲಿ ನಿಲ್ಲಿಸುತ್ತಿರುವ ಹಿನ್ನೆಲೆಯಲ್ಲಿ ಪೊಲೀಸರು ಬ್ಯಾಂಕಿನವರೇ ತಮ್ಮಲ್ಲಿಗೆ ಬರುವ ಗ್ರಾಹಕರು ರಸ್ತೆ ಬದಿಗಳಲ್ಲಿ ವಾಹನ ನಿಲ್ಲಿಸದಂತೆ ನೋಡಿಕೊಳ್ಳಬೇಕು ಎಂದು ಖಡಕ್ ಸೂಚನೆ ನೀಡಿದ್ದಾರೆ.

ಈ ಕುರಿತು 'ಮೈಸೂರುಮಿತ್ರ'ನೊಂದಿಗೆ ಮಾತನಾಡಿದ ಸರ್ಕಲ್ ಇನ್ಸ್‌ಪೆಕ್ಟರ್ ಜಯಕುಮಾರ್, ಸದ್ಯ ಪ್ರತಿ ದಿನವೂ ಗಸ್ತು ನಡೆಸಿ ನೋ ಪಾರ್ಕಿಂಗ್ ಏರಿಯಾಗಳಲ್ಲಿ ವಾಹನ ನಿಲ್ಲಿಸುವ ಸವಾರರಿಗೆ ಜಾಗೃತಿ ಮೂಡಿಸುವ ಜತೆಗೆ ತಲಾ 500 ರಿಂದ 1000 ರೂ. ದಂಡ ವಿಧಿಸಲಾಗುತ್ತಿದೆ. ಜತೆಗೆ ಏಕಮುಖ ಸಂಚಾರ ರಸ್ತೆಯಲ್ಲಿ ಸಾಗುವ, ಹೆಲ್ಮೆಟ್ ಇಲ್ಲದ ಹಾಗೂ ಅಪ್ರಾಪ್ತ ಚಾಲಕರಿಗೂ ದಂಡ ವಿಧಿಸಲಾಗುತ್ತಿದ್ದು ಮುಂದಿನ ದಿನಗಳಲ್ಲಿ ಇದರ ಮೊತ್ತವನ್ನು ಹೆಚ್ಚಿಸಲಾಗುವುದು. ಹೆದ್ದಾರಿ ಬದಿಯಲ್ಲಿರುವ ಬ್ಯಾಂಕು ಹಾಗೂ ಕಚೇರಿಗಳವರು ತಮ್ಮಲ್ಲಿ ಬರುವ ಗ್ರಾಹಕರ ವಾಹನಗಳಿಗೆ ಪಾರ್ಕಿಂಗ್ ವ್ಯವಸ್ಥೆ ಮಾಡಬೇಕು. ಇಲ್ಲವೇ ನೋ ಪಾರ್ಕಿಂಗ್ ಪ್ರದೇಶದಲ್ಲಿ ವಾಹನಗಳನ್ನು ನಿಲ್ಲಿಸದಂತೆ ನೋಡಿಕೊಳ್ಳಬೇಕು ಎಂದು ಸೂಚನೆ ನೀಡಿದ್ದೇನೆ ಎಂದರು.

ಇದರೊಂದಿಗೆ ಬ್ಯಾಂಕಿನ ಮುಂಭಾಗದಲ್ಲಿನ ನೋ ಪಾರ್ಕಿಂಗ್ ಏರಿಯಾದಲ್ಲಿ ಸದ್ಯದಲ್ಲೇ ಬ್ಯಾರಿಕೇಡ್‌ಗಳನ್ನು ಹಾಕಲು ಮುಂದಾಗಿದ್ದೇವೆ. ಈ ಮೂಲಕ ಹೆದ್ದಾರಿಯಲ್ಲಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲು ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದ್ದೇವೆ ಎಂದರು.

ಕಾರ್ಯಾಚರಣೆಯಲ್ಲಿ ಮಹೇಶ್, ನಟೇಶ್, ಜಯಕುಮಾರ್ ಭಾಗವಹಿಸಿದ್ದರು.



ಹ್ಯಾಂಗ್‌ಮ್ಯಾನ್ ಆಗಿ ವಿನೋದ್ ಪ್ರಭಾಕರ್



ಬಹಳ ದಿನಗಳ ನಂತರ ಟೈಗರ್ ವಿನೋದ್ ಪ್ರಭಾಕರ್ ನಾಯಕರಾಗಿ ನಟಿಸಿರುವ ಚಿತ್ರ ಮಾದೇವ ಜೂನ್ 6 ರಂದು ಬಿಡುಗಡೆಯಾಗಲಿದೆ. ಈ ಕುರಿತು ನಡೆದ ಪತ್ರಿಕಾಗೋಷ್ಠಿಯಲ್ಲಿ ಚಿತ್ರತಂಡದ ಸದಸ್ಯರು ಮಾತನಾಡಿದರು.

ನಿರ್ದೇಶಕ ನವೀನ್ ರೆಡ್ಡಿ ಮಾತನಾಡಿ, 1980ರ ಕಾಲಘಟ್ಟದಲ್ಲಿ ನಡೆಯುವ ಕಥೆಯಿರೋ ಈ ಚಿತ್ರದಲ್ಲಿ ವಿನೋದ್ ಪ್ರಭಾಕರ್ ಒಬ್ಬ ಹ್ಯಾಂಗ್‌ಮ್ಯಾನ್ ಆಗಿ ಕಾಣಿಸಿಕೊಂಡಿದ್ದಾರೆ. ಒಟ್ಟು 3 ಕಾಲಘಟ್ಟದ ಕಥೆ ಚಿತ್ರದಲ್ಲಿದೆ. ಆಯಾ ಕಾಲಕ್ಕೆ ಹೊಂದುವಂಥ ಲೊಕೇಶನ್‌ಗಳಲ್ಲೇ ಚಿತ್ರದ ಚಿತ್ರೀಕರಣ ನಡೆಸಲಾಗಿದೆ. ನಾಯಕಿಯಾಗಿ ಸೋನಾಲ್ ಮೊಂತೆರೊ ಅಭಿನಯಿಸಿದ್ದು, ವಿಶೇಷ ಪಾತ್ರದಲ್ಲಿ ಶ್ರೀನಗರ ಕಿಟ್ಟಿ ಹಾಗೂ ಅತಿಥಿ ಪಾತ್ರದಲ್ಲಿ ಹಿರಿಯನಟಿ ಮಾಲಾಶ್ರೀ, ಶೃತಿ ನಟಿಸಿದ್ದಾರೆ. ಅಚ್ಯುತಕುಮಾರ್, ಕಾಕ್ರೋಚ್ ಸುಧೀ, ಮೈಕೋ ನಾಗರಾಜ್ ಚಿತ್ರದ ಇತರೆ ತಾರಾ ಬಳಗದಲ್ಲಿದ್ದಾರೆ. ಬಾಲಕೃಷ್ಣ ತೋಟ ಅವರ ಛಾಯಾಗ್ರಹಣ, ವಿಜಯ್ ಎಂ.ಕುಮಾರ್ ಅವರ ಸಂಕಲನ ಹಾಗೂ ಗುಣ ಅವರ ಕಲಾ ನಿರ್ದೇಶನವಿರುವ ಈ ಚಿತ್ರ ಜೂನ್ 6 ರಂದು ರಾಜ್ಯಾದ್ಯಂತ ಬಿಡುಗಡೆಯಾಗುತ್ತಿದೆ ಎಂದು ಹೇಳಿದರು.

ನಾಯಕ ವಿನೋದ್ ಪ್ರಭಾಕರ್ ಮಾತನಾಡುತ್ತಾ, ಕೋವಿಡ್ ಸಮಯದಲ್ಲಿ ನನಗೆ ನಿರ್ದೇಶಕರು ಈ ಕಥೆ ಹೇಳಿದರು. ಕಥೆ ಬಹಳ ಇಷ್ಟವಾಯಿತು. ನಿರ್ದೇಶಕರು ಹೇಳಿದ ಹಾಗೆ 80ರ ಕಾಲಘಟ್ಟದ ಕಥೆ. ಹ್ಯಾಂಗ್‌ಮ್ಯಾನ್ ಪಾತ್ರದಲ್ಲಿ ನಾನು ಅಭಿನಯಿಸಿದ್ದೇನೆ. ನನಗೆ ತಿಳಿದಿರುವ ಹಾಗೆ ಕನ್ನಡದಲ್ಲಿ ಹ್ಯಾಂಗ್‌ಮ್ಯಾನ್ ಕುರಿತಾಗಿ ಈವರೆಗೆ ಯಾವುದೇ ಸಿನಿಮಾ ಬಂದಿಲ್ಲ. ನಾನು ಈ ಚಿತ್ರದಲ್ಲಿ ಅಭಿನಯಿಸುವಾಗ ಕೆಲವು ಸನ್ನಿವೇಶಗಳು ನಮ್ಮ ತಂದೆ ಪ್ರಭಾಕರ್ ಅಭಿನಯದ ಜಿದ್ದು ಹಾಗೂ ಕರುಳಿನಕೂಗು ಚಿತ್ರಗಳು ನೆನಪಾದವು ಎಂದು ಹೇಳಿದರು.

ನಾಯಕಿ ಸೋನಾಲ್ ಮೊಂತೆರೊ ಮಾತನಾಡಿ, ಈ ಚಿತ್ರದಲ್ಲಿ ಹಳ್ಳಿ ಹುಡುಗಿ ಪಾರ್ವತಿಯಾಗಿ ನಾನು ಕಾಣಿಸಿಕೊಂಡಿದ್ದೇನೆ ಎಂದು ಹೇಳಿದರು. ನಿರ್ಮಾಪಕ ಕೇಶವ್ ಆರ್(ದೇವಸಂದ್ರ) ಅವರು ಮಾತನಾಡಿ, ಮಾದೇವ ನಮ್ಮ ಬ್ಯಾನರ್‌ನಿಂದ ಹೊರಬರುತ್ತಿರುವ ಮೊದಲ ಚಿತ್ರ. ತುಂಬಾ ಚೆನ್ನಾಗಿ ಮೂಡಿಬಂದಿದೆ ಎಂದು ಹೇಳಿದರು. ಸಂಗೀತ ನಿರ್ದೇಶಕ ಪ್ರದ್ಯೋತನ್ ಅವರು ಚಿತ್ರದ ಹಾಡುಗಳು ಹಾಗೂ ಸಂಗೀತದ ಬಗ್ಗೆ ಮಾಹಿತಿ ನೀಡಿದರು.

'ಮಾತೊಂದ ಹೇಳುವೆ' ಹೊಸ ಪ್ರೇಮಕಥೆ, ಜೂನ್ 20ಕ್ಕೆ ಬಿಡುಗಡೆ



ಹಲವು ಹೊಸತುಗಳಿಗೆ ಹೆಸರಾಗಿರುವ ಸ್ಯಾಂಡಲ್‌ವುಡ್ ಈಗ ಮತ್ತೊಂದು ಹೊಸತನಕ್ಕೆ ಸಾಕ್ಷಿಯಾಗಿದೆ. ಸಾಮಾಜಿಕ ಜಾಲತಾಣಗಳ ಮೂಲಕ ಮನೆ ಮಾತಾದ 'ಮಾತೊಂದ ಹೇಳುವೆ' ಹೊಸತನದ ಪ್ರೇಮಕಥೆಯೊಂದಿಗೆ ಕೌಟುಂಬಿಕ ಕಥಾಹಂದರ ಹೊಂದಿರುವ ಚಿತ್ರ. ಆರ್.ಜೆ. ಮಯೂರ್ ಕಡಿ ನಿರ್ದೇಶನದ ಜತೆಗೆ ನಾಯಕನಾಗೂ ನಟಿಸಿರೋ ಈ ಚಿತ್ರ ಜೂ.20ರಂದು ತೆರೆಕಾಣಲಿದೆ. ಈ ಚಿತ್ರದ ಬಿಡುಗಡೆ ದಿನಾಂಕವನ್ನು ವಿಶೇಷ ವಿಡಿಯೋ ಮೂಲಕ ಚಿತ್ರತಂಡ ಘೋಷಣೆ ಮಾಡಿತ್ತು. ಈಗ ಟ್ರೈಲರ್ ಡಿಕೋಡ್ ಸ್ಪರ್ಧೆ ಘೋಷಣೆ ಮಾಡಿದೆ. ಈ ಸ್ಪರ್ಧೆಯಲ್ಲಿ ಗೆದ್ದವರಿಗೆ ನಗದು ಬಹುಮಾನ ಕೂಡ ಇರುತ್ತದೆ. ಇದು ಕೂಡ ಸಾಮಾಜಿಕ ಜಾಲತಾಣಗಳಲ್ಲಿ ಮೆಚ್ಚುಗೆಗೆ ಪಾತ್ರವಾಗಿದೆ. ಜೂನ್ ತಿಂಗಳಲ್ಲಿ ಮಾತೊಂದ ಹೇಳುವೆ ರಾಜ್ಯಾದ್ಯಂತ ಬಿಡುಗಡೆಯಾಗಲಿದೆ.

ಚಿತ್ರದ ತಾರಾಗಣದಲ್ಲಿ ಮಯೂರ್ ಕಡಿ ಅವರ ಜೊತೆ ಅಪೂರ್ವ ಆರಾಧ್ಯ, ಗಿರೀಶ್ ಶಿವಣ್ಣ, ಪಿ.ಡಿ.ಸತೀಶ್ ಚಂದ್ರ, ಪ್ರತೀಕ್ ರಡ್ಡೆರ್, ವಿದ್ಯಾಸಾಗರ ದೀಕ್ಷಿತ್, ಕಾರ್ತಿಕ್ ಪತ್ತಾರ್, ಸುನಿಲ್ ಪತ್ರಿ, ಜ್ಯೋತಿ ಪುರಾಣಿಕ್ ಮುಂತಾದವರಿದ್ದಾರೆ.

ಚಿತ್ರದ ಕಥೆಯಲ್ಲಿ ನಾಯಕ ಉತ್ತರ ಕರ್ನಾಟಕ ಮೂಲದ ರೇಡಿಯೋ ಜಾಕಿ ಆಗಿರುತ್ತಾನೆ. ನಾಯಕಿ ಮೈಸೂರಿನಿಂದ ಧಾರವಾಡಕ್ಕೆ ಆಗಮಿಸುತ್ತಾಳೆ. ಇವರಿಬ್ಬರೂ ಭೇಟಿಯಾದಾಗ ನಡೆಯುವ ರೋಚಕ ಘಟನೆಗಳೇ ಈ ಚಿತ್ರದ ಜೀವಾಳ. ಇದೊಂದು ವಿಭಿನ್ನ ಪ್ರೇಮಕಥೆಯಾಗಿದ್ದು, ಕುಟುಂಬ ಸಮೇತ ನೋಡಬಹುದಾದ ಚಿತ್ರ. ಈ ಹಿಂದೆ ಚಿತ್ರ ಮಂದಿರಗಳು ಮಾತನಾಡುವ ವೀಡಿಯೊ ಮೂಲಕ ತಮ್ಮ ಚಿತ್ರದ ಟೈಟಲ್ ಬಿಡುಗಡೆ ಮಾಡಿದ್ದು ಜನರ ಗಮನ ಸೆಳೆದಿತ್ತು ಎನ್ನುತ್ತಾರೆ ನಿರ್ದೇಶಕ ಹಾಗೂ ನಾಯಕ ಮಯೂರ್ ಕಡಿ. ಮಹೇಶ್ವರ ಮೋಷನ್ ಪಿಕ್ಚರ್ಸ್ ನಿರ್ಮಾಣದ ಮಾತೊಂದ ಹೇಳುವೆ ಚಿತ್ರಕ್ಕೆ ಪ್ರಭು ಸವಣೂರ್ ಹಾಗೂ ಅವಿನಾಶ್ ಯು.ಎಸ್. ಸಹ ನಿರ್ಮಾಣವಿದೆ. ಪರ್ವತೇಶ್ ಪೋಳ ಅವರ ಛಾಯಾಗ್ರಹಣ, ಉಲ್ಲಾಸ್ ಕುಲಕರ್ಣಿ ಅವರ ಸಂಗೀತ ನಿರ್ದೇಶನ ಈ ಚಿತ್ರಕ್ಕಿದೆ.

ಸಸ್ಪೆನ್ಸ್, ಥ್ರಿಲ್ಲರ್ 'ಠಾಣೆ' ತೆರೆಗೆ





ಎಸ್.ಭಗತ್‌ರಾಜ್ ಅವರ ನಿರ್ದೇಶನದ ಹಾಗೂ ಪ್ರವೀಣ್ ನಾಯಕನಾಗಿ ನಟಿಸಿರುವ 'ಠಾಣೆ' ಚಿತ್ರದ ಟ್ರೇಲರ್ ಇತ್ತೀಚೆಗೆ ಬಿಡುಗಡೆಯಾಯಿತು. ದಿ.ಸುಧೀರ್ ಪತ್ನಿ ಮಾಲತಿ ಸುಧೀರ್ ಅವರು ಟ್ರೇಲರ್ ಬಿಡುಗಡೆಗೊಳಿಸಿ ಚಿತ್ರತಂಡಕ್ಕೆ ಶುಭ ಕೋರಿದರು. ಈ ಶುಕ್ರವಾರದಿಂದ ಠಾಣೆ ರಾಜ್ಯಾದ್ಯಂತ ತೆರೆಕಾಣುತ್ತಿದೆ,

ನಿರ್ದೇಶಕ ಭಗತ್‌ರಾಜ್ ಮಾತನಾಡುತ್ತಾ, ಆರಂಭದಿಂದಲೂ ಸಾಕಷ್ಟು ನಿರೀಕ್ಷೆ ಹುಟ್ಟಿಸಿರುವ ನಮ್ಮ ಚಿತ್ರ ಒಂದು ಪೊಲೀಸ್ ಸ್ಟೇಷನ್ ಸುತ್ತ ನಡೆಯುವ ಕಥಾಹಂದರ ಒಳಗೊಂಡಿದೆ. ಒಂದು ಪ್ರಮುಖ ಕೇಸ್ ಬಗ್ಗೆ ಆ ಠಾಣೆಯಲ್ಲಿ 4 ಪಾತ್ರಗಳ ನಡುವೆ ನಡೆಯುವ ಘಟನಾವಳಿಗಳೇ ಚಿತ್ರದ ಕಾನ್ಸೆಪ್ಟ್, ಈ ಚಿತ್ರದಲ್ಲಿ ತಂದೆ ಮಗನ, ಅಣ್ಣ ತಂಗಿಯ ಸೆಂಟಿಮೆಂಟ್ ಜತೆಗೊಂದು ಲವ್ ಸ್ಟೋರಿಯೂ ಇದೆ. ಈ ಚಿತ್ರಕ್ಕ 'ಕೇರಾಫ್ ಶ್ರೀರಾಮಪುರ' ಎಂಬ ಅಡಿಬರಹವಿದೆ ಎಂದರು.

ನಾನು ಮೂಲತಃ ರಂಗಭೂಮಿ ಕಲಾವಿದ. ನಾನೊಬ್ಬ ನಟನಾಗಬೇಕೆಂದು ಹೊರಟಾಗ ವೃತ್ತಿಯಲ್ಲಿ ಟೀಚರ್ ಆದ ನಮ್ಮ ತಾಯಿಯವರು ತಾವು ಜೀವಮಾನ ದುಡಿದ ಹಣವನ್ನೆಲ್ಲ ನನಗೆ ಕೊಟ್ಟಿದ್ದಾರೆ. ಅವರ ನಂಬಿಕೆ ಉಳಿಸಿಕೊಳ್ಳುತ್ತೇನೆ. ನಮ್ಮ ಚಿತ್ರದ ಟ್ರೇಲರನ್ನು ಮಾಲತಿ ಸುಧೀರ್ ಅಮ್ಮನವರು ರಿಲೀಸ್ ಮಾಡಿದ್ದು ಶೋಭೆ ತಂದಿದೆ. ಈ ಚಿತ್ರದಲ್ಲಿ ನನ್ನ ಪಾತ್ರದ ಹೆಸರು ಕಾಳಿ ಎಂದು ನಾಯಕ ಪ್ರವೀಣ್ ತಿಳಿಸಿದರು.

ನಾಯಕ ಪ್ರವೀಣ್ ತಾಯಿ, ನಿರ್ಮಾಪಕಿ ಗಾಯತ್ರಿ ಅವರು ನನ್ನ ಮಗನಿಗೆ ನಿಮ್ಮ ಸಪೋರ್ಟ್ ಬೇಕಿದೆ ಎಂದು ಹೇಳಿದರು. ಉಳಿದಂತೆ ಕಲಾವಿದರಾದ ರೋಹಿತ್ ನಾಗೇಶ್, ಪಿ.ಡಿ.ಸತೀಶ್‌ಚಂದ್ರ, ಸಂಗೀತ ನಿರ್ದೇಶಕಿ ಮಾನಸ ಹೊಳ್ಳ ಹಾಗೂ ವಿತರಕ ವಿಜಯ್ ಬನಹಟ್ಟಿ ಸೇರಿದಂತೆ ಚಿತ್ರತಂಡದ ಸದಸ್ಯರು ಠಾಣೆ ಚಿತ್ರದ ಕುರಿತಂತೆ ಮಾತನಾಡಿದರು. ಪ್ರಶಾಂತ್ ಸಾಗರ್ ಅವರ ಛಾಯಾಗ್ರಹಣ ಹಾಗೂ ಸುರೇಶ್ ಅರಸ್ ಅವರ ಸಂಕಲನ ಈ ಚಿತ್ರಕ್ಕಿದೆ.

ನಂದಗೋಕುಲದಲ್ಲಿ ರವಿಚೇತನ್

ಇದು ಪ್ರತಿಯೊಬ್ಬ ತಂದೆಯ ಕಥೆ



ಮಕ್ಕಳನ್ನು ಹೀರೋ ಮಾಡಬೇಕೆಂದು ಹೋರಾಡುವ ಪ್ರತಿಯೊಬ್ಬ ತಂದೆಯ ಕಥೆ ಎಂಬ ಟ್ಯಾಗ್ ಲೈನ್ ಒಳಗೊಂಡ ಅಪ್ಪಟ ಸಂಸಾರಿಕ ಕಥಾಹಂದರ ಹೊಂದಿದ ನಂದಗೋಕುಲ ಜೂನ್ 4ರಿಂದ ಪ್ರಸಾರವಾಗಲಿದೆ. ನಟ ರವಿಚೇತನ್ ಇದರಲ್ಲಿ ನೆಗೆಟಿವ್ ಶೇಡ್ ಇರೋ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ದಿನಸಿ ಅಂಗಡಿಯಲ್ಲಿ ಕೆಲಸ ಮಾಡೋ ನಂದಕುಮಾರ್ ಅನಾಥನಾದರೂ ಛಲಗಾರ. ಅಂಗಡಿ ಮಾಲೀಕರ ತಂಗಿ ಗಿರಿಜಾಳನ್ನು ಪ್ರೀತಿಸಿ ಅವರ ಇಷ್ಟಕ್ಕೆ ವಿರುದ್ಧವಾಗಿ ಮದುವೆಯಾಗುತ್ತಾನೆ. ನಂತರ ತಾನೂ ಸಹ ಗಿರಿಜಾ ಸ್ಟೋರ್ಸ್ ಎಂಬ ದಿನಸಿ ಅಂಗಡಿ ತೆರೆದು ಅದರಲ್ಲಿ ಯಶಸ್ವಿಯಾಗಿ ನಂದಗೋಕುಲ ಎಂಬ ಮನೆಯನ್ನು ಕಟ್ಟುತ್ತಾನೆ. ಎದುರು ಮನೆಯಲ್ಲೇ ತವರು ಮನೆಯಿದ್ದರೂ, ಗಿರಿಜಾ ಪ್ರತಿಕ್ಷಣವೂ ಕೊಂಕು, ದ್ವೇಷದ ಮಾತುಗಳನ್ನು ಎದುರಿಸಬೇಕಾಗುತ್ತದೆ

ಹೀಗೆ ಎರಡು ಕುಟುಂಬಗಳ ನಡುವಿನ ದ್ವೇಷದ ಕಿಡಿ ಅವರ ಮಕ್ಕಳ ಮೇಲೆ ಹೇಗೆ ಪರಿಣಾಮ ಬೀರುತ್ತದೆ, ಎಲ್ಲರೂ ಜೊತೆಯಾಗಿ ಸಂತೋಷದಿಂದ ಬಾಳಬೇಕು ಎಂಬ ಕನಸು ಕಾಣುವ ನಂದಕುಮಾರ್ ಕನಸು ನನಸಾಯಿತೇ ಎಂಬುದನ್ನು ನಂದಗೋಕುಲದ ಮೂಲಕ ನಿರ್ದೇಶಕರು ಹೇಳೋ ಪ್ರಯತ್ನ ಮಾಡಿದ್ದಾರೆ. ಕೂಡು ಕುಟುಂಬದ ಮೇಲೆ ಯಾರ ದೃಷ್ಟಿ ತಾಗುತ್ತದೆ? ತಲೆಮಾರುಗಳ ನಡುವಿನ ತಲ್ಲಣಗಳನ್ನು ಹೇಳುವ ಕುಟುಂಬದ ಕಥೆ ಹೊಂದಿದ ನಂದಗೋಕುಲ ಧಾರಾವಾಹಿಯ ಪತ್ರಿಕಾಗೋಷ್ಠಿ ಇತ್ತೀಚೆಗೆ ನಡೆಯಿತು. ಈ ಸಂದರ್ಭದಲ್ಲಿ ಹಾಜರಿದ್ದ ಇಡೀ ಧಾರಾವಾಹಿ ತಂಡ ಮಾಧ್ಯಮಗಳೊಂದಿಗೆ ತಮ್ಮ ಅನುಭವಗಳನ್ನು ಹಂಚಿಕೊಂಡರು.


ಬಣ್ಣ ಟಾಕೀಸ್ ಬ್ಯಾನರ್ ಅಡಿ ನಿರ್ಮಾಣವಾಗುತ್ತಿರುವ ನಂದಗೋಕುಲದ ಪ್ರಮುಖ ತಾರಾಗಣದಲ್ಲಿ ಅರವಿಂದ್ ರಾವ್, ಅಮೃತಾ ನಾಯ್ಡು, ರವಿಚೇತನ್, ರಘು ಮಂಡ್ಯ, ಅಭಿಷೇಕ್‌ದಾಸ್, ಯಶವಂತ್, ವಿಜಯ್‌ಚಂದ್ರ ಊರ್ಜಿತ ವಲ್ತಾಜೆ, ಅರ್ಚನಾ ಗಾಯಕ್ವಾಡ್, ನವ್ಯಾ, ಮೇಘಾ, ಕೃಷ್ಣಪ್ರಿಯ ಹಾಗೂ ಶೈಲಜಾ ನಟಿಸಿದ್ದಾರೆ.



ಸಿನಿಪದಬಂಧ-578



ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು ____________

ವಿಳಾಸ ____________

ದೂರವಾಣಿ ಸಂಖ್ಯೆ ____________

ಎಡದಿಂದ ಬಲಕ್ಕೆ

1. ಕಾಣಿಕೆ ತಂದಿರುವೆ ಎಂದು ಹಾಡಿದ ಕಲ್ಪನಾ "ಪ್ರಣಯ ರಾಜ"ನನ್ನು ಹೀಗೆಂದಳು ! 7
5. ತೂಕವಿರಿಸಿಕೊಂಡಿರುವ ನಟಿ 3
6. ಹ್ಯಾಟ್ರಿಕ್ ಹೀರೋನನ್ನು ಪ್ರೀತಿಯಿಂದ ಕರೆಯಿರಿ 3
7. ರಾಜಾಹುಲಿ ನಟ 2
8. ಪ್ರಪಂಚ ಅಲ್ಲೋಲ – ಕಲ್ಲೋಲವಾದರೂ ಸರಿ ರವಿಚಂದ್ರನ್ ಬಲು ಕಿಲಾಡಿ 5
9. ಅಂಬರೀಷ್ ಸೋತು ಹೋಗದವನು 3
11. ರವಿಶಂಕರ್ ಮಾಡಿದ ಸಂಚಾರ 3
12. ಶಿವರಾಜ್‌ಕುಮಾರ್ ಅಭಿನಯದ "ರಾಕ್ಷಸ" 3
14. ವಿಷ್ಣುವರ್ಧನ್ – ರೂಪಿಣಿ ಅಭಿನಯಕ್ಕೆ ಭಾರ್ಗವ ನಿರ್ದೇಶಕ 5
16. ಮತ್ಸರದಲ್ಲಿ ಸಿಕ್ಕ ವೃಕ್ಷ 2
18. ರಥ ನಡೆಸುವ "ದರ್ಶನ್" 3
19. ಹಲೋ ಡ್ಯಾಡಿ ಚಿತ್ರದ ನಾಯಕಿ ದೇವಲೋಕದ ಕಾಮಧೇನು 3
20. ಕರ್ಫ್ಯೂ ಚಿತ್ರದ ನಿರ್ದೇಶಕ 7

ಮೇಲಿನಿಂದ ಕೆಳಕ್ಕೆ

1. ಈ ಲೋಕವೆಲ್ಲಾ ಸಂಗೀತದಿಂದ ಆವರಿಸಿದೆ 4
2. ವಿಷ್ಣುವಿನ ಹತ್ತು ವೇಷ 5
3. ಎಸ್.ಮಹೇಂದರ್ – ಶೃತಿ ಅಭಿನಯದ ಚಿತ್ರ 4
4. ಡಾ. ರಾಜಕುಮಾರ್ ಕಂಡ ದ್ವಿಸಪ್ನ 6
8. ನಟ ಶ್ರೀನಾಥ್‌ಗಿರುವ ಬಿರುದು 5
10. ರತ್ನನ ಪದಗಳು ಎಂದೊಡನೆ ನೆನಪಾಗುವ ಕವಿ 6
13. ಶಶಿಕುಮಾರ್ ಮೊದಲನೆಯ ನವರಸದರಸ 5
15. ಶಂಕರ್‌ನಾಗ್ – ಭವ್ಯ ಅಭಿನಯದ ಚಿತ್ರ 4
17. ಶೃಂಗಾರ ಕಾವ್ಯ ಬರೆದ ನಟ 4

ಸಿನಿ ಪದಬಂಧ 577ರ ಉತ್ತರ


ಕ	ಮ	ಲ್	ಹಾ	ಸ	ನ್					
ಲ್ಯಾ			ಲುಂ			ಕ್ಷೀ		ಶು		ಧ್ರು
ಣ		ಕ	ಡ	ಲ	ತೀ	ರ	ದ	ಭಾ	ರ್ಗ	ವ
ರೇ	ಖಾ		ತ					ಶ		ತಾ
ಖೆ		ನ	ವ	ಭಾ	ರ	ತ		ಯ		ರೆ
			ರು		ಹ		ಚೋ			
ಪ		ಪ		ರ	ವಿ	ಕಿ	ರ	ಣ್		ಓಂ
ಕ್ಕಾ		ರಿ					ಚಿ		ದಾ	ದಾ
ಕ	ರಿ	ಮ	ಲೆ	ಯ	ಕ	ಗ್ಗ	ತ್ತ	ಲು		ಗಿ
ಳ್ಳ		ಳ		ಮ			ಚೋ			ಬಾ
					ದೇ	ವ	ರ	ಮ	ಕ್ಕ	ಳು

ವಿಜೇತರು: ಎನ್.ಶಿವಪ್ಪ, ನಂ.263, 6ನೇ ಕ್ರಾಸ್, ನಂದಗೋಕುಲ ಬಡಾವಣೆ, ಗೋಕುಲಂ 3ನೇ ಹಂತ, ಮೈಸೂರು

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಶಿವಂ ಶಿವಂ ಸನಾತನಂ

45 ಚಿತ್ರದಲ್ಲಿ ಶಿವನ ಹಾಡು



ಬಹು ದಿನಗಳ ನಂತರ ಸ್ಯಾಂಡಲ್‌ವುಡ್‌ನಲ್ಲಿ ಮಲ್ಟಿ ಸ್ಟಾರರ್ ಚಿತ್ರವೊಂದು ನಿರ್ಮಾಣವಾಗುತ್ತಿದೆ. ಹ್ಯಾಟ್ರಿಕ್ ಹೀರೋ ಡಾ.ಶಿವರಾಜ್ ಕುಮಾರ್, ರಿಯಲ್ ಸ್ಟಾರ್ ಉಪೇಂದ್ರ ಹಾಗೂ ರಾಜ್ ಬಿ. ಶೆಟ್ಟಿ ಹೀಗೆ ಮೂವರು ಸೂಪರ್ ಸ್ಟಾರ್‌ಗಳು ನಟಿಸಿರುವ 45 ಚಿತ್ರದ ಮೊದಲ ಸಾಂಗ್ ಇತ್ತೀಚೆಗೆ ಬಿಡುಗಡೆಯಾಯಿತು,

ಅರ್ಜುನ್ ಜನ್ಯ ಅವರ ಚೊಚ್ಚಲ ನಿರ್ದೇಶನದ ಈ ಚಿತ್ರವನ್ನು ಎಂ.ರಮೇಶ್ ರೆಡ್ಡಿ ಅವರು ಸೂರಜ್ ಪ್ರೊಡಕ್ಷನ್ಸ್ ಅಡಿ ನಿರ್ಮಿಸುತ್ತಿದ್ದಾರೆ. ಶಿವನ ಮಹಿಮೆ ಹೇಳುವ ಈ ಹಾಡಲ್ಲಿ ಬಹುತೇಕ ಸಂಸ್ಕೃತ ಪದಗಳನ್ನೇ ಉಪಯೋಗಿಸಲಾಗಿದೆ, ಶಿವಂ ಶಿವಂ ಸನಾತನಂ, ಹರಂ ಹರಂ ಪುರಾತನಂ ಎಂಬ ಸಾಹಿತ್ಯ ಇರುವ ಲಿರಿಕಲ್ ವೀಡಿಯೋ ಹಾಡಿಗೆ ಉತ್ತರ ಭಾರತದಿಂದ ಆಗಮಿಸಿದ ಮಹಾಮಂಡಲೇಶ್ವರ ಮಹಾರಾಜ್ ಶ್ರೀಗಳು ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ರಮೇಶ್ ರೆಡ್ಡಿ, 45 ಚಿತ್ರದ ಹಾಡನ್ನು ಬಿಡುಗಡೆ ಮಾಡಿಕೊಡಲು ಸ್ವಾಮೀಜಿಗಳಿಗೆ ನಾವು ಕೇಳಿದಾಗ ಒಂದೇ ಮಾತಿಗೆ ಅಷ್ಟು ದೂರದಿಂದ ಬಂದಿದ್ದಾರೆ. ಶಿವಣ್ಣ ಆರಂಭದಿಂದಲೂ ನಮಗೆ ಸಪೋರ್ಟ್ ಮಾಡುತ್ತಲೇ ಬಂದಿದ್ದಾರೆ. ವಿಜಯ ಪ್ರಕಾಶ್ ಕಂಠದಲ್ಲಿ ಅದ್ಭುತವಾಗಿ ಮೂಡಿಬಂದಿರುವ ಈ ಹಾಡಿಗೆ ನಾಗೇಂದ್ರಪ್ರಸಾದ್ ಅಷ್ಟೇ ಚೆನ್ನಾಗಿ ಲಿರಿಕ್ ಬರೆದಿದ್ದಾರೆ. ನಾನು ಈಗಾಗಲೇ 8 ಸಿನಿಮಾ ಮಾಡಿದ್ದೇನೆ. ಆ ಎಂಟು ಸಿನಿಮಾಕ್ಕೂ 45ಗೂ ಏನು ವ್ಯತ್ಯಾಸ ಅಂತ ನನಗೆ ಗೊತ್ತಿದೆ. ತುಂಬಾ ಕಷ್ಟಪಟ್ಟು, ಇಷ್ಟಪಟ್ಟು ಸಿನಿಮಾ ಮಾಡಿದ್ದೇವೆ. ದಯವಿಟ್ಟು ಸಪೋರ್ಟ್ ಮಾಡಿ ಎಂದು ಕನ್ನಡ ಜನತೆಯನ್ನು ಕೇಳಿಕೊಂಡರು.

ನಂತರ ನಟ ಶಿವರಾಜ್‌ಕುಮಾರ್ ಮಾತನಾಡುತ್ತಾ, ನಿರ್ಮಾಪಕರು ಹೇಳಿದ ಹಾಗೆ ಅರ್ಜುನ್ ಜನ್ಯ ಬರೀ ಕರ್ನಾಟಕದಲ್ಲಿ ಮಾತ್ರವಲ್ಲ, ಇಡೀ ದೇಶವೇ ತಿರುಗಿ ನೋಡುವಂಥ ಡೈರೆಕ್ಟರ್ ಆಗ್ತಾರೆ. ಈ ಹಾಡಲ್ಲಿ ಸಾಕಷ್ಟು ಅರ್ಥಗಳಿವೆ. ಇಂಥ ನಿರ್ಮಾಪಕರು ದೊಡ್ಡ ಮಟ್ಟದಲ್ಲಿ ಗೆಲ್ಲಬೇಕು. ನಾನು ಯಾವುದನ್ನೂ ಕೇಳಿಕೊಂಡು ಬಂದಿಲ್ಲ. ಎಲ್ಲಾ ಅದಾಗೇ ಆಗ್ತಾ ಇದೆ. ಭಕ್ತಿ ಅನ್ನೋದು ನಮ್ಮನ್ನು ಎಳೆದುಕೊಂಡು ಹೋಗುತ್ತದೆ. ಸಿನಿಮಾದಲ್ಲಿ ಈ ಹಾಡಿನ ದೃಶ್ಯ ನೋಡಿದಾಗ ನಿಮಗೆ ಇನ್ನೂ ಹೆಚ್ಚು ಇಷ್ಟವಾಗುತ್ತದೆ ಎಂದು ಹೇಳಿದರು.

ನಿರ್ದೇಶಕ ಅರ್ಜುನ್ ಜನ್ಯ ಮಾತನಾಡಿ, ಈ ಸಿನಿಮಾನೇ ಎಲ್ಲರನ್ನೂ ಕರೆದುಕೊಂಡು ಬರ್ತಾ ಇದೆ. ಭಾರತದ ದೊಡ್ಡ ಶಕ್ತಿ ಈ ಗುರೂಜಿ. ಅಂಥವರು ಬಂದು ಈ ಸಾಂಗ್ ರಿಲೀಸ್ ಮಾಡಿಕೊಟ್ಟಿದ್ದಾರೆ. ನನ್ನ ಹಾಡುಗಳಿಗೆ ಬಹುತೇಕ ಶಕ್ತಿ ತುಂಬಿರುವುದು ನಾಗೇಂದ್ರ ಪ್ರಸಾದ್ ಅವರ ಸಾಹಿತ್ಯ. ಈ ಸಿನಿಮಾಗೆ ರೆಡ್ಡಿ ಅವರು ಬರೀ ಪ್ರೊಡ್ಯೂಸರ್ ಅಲ್ಲ, ಆ ಶಿವನಂತೆ ದೊಡ್ಡ ಶಕ್ತಿಯಾಗಿ ನಿಂತಿದ್ದಾರೆ. ನಿಮ್ಮ ಮನೆಮಗ ನಾನು, ಎಲ್ಲರೂ ಪ್ರೀತಿಯಿಂದ ಹರಸಿ ಎಂದು ಹೇಳಿದರು, 45 ಚಿತ್ರಕ್ಕೆ ಅರ್ಜುನ್ ಜನ್ಯ ಅವರೇ ಕಥೆ, ಚಿತ್ರಕಥೆ ಬರೆದು ಸಂಗೀತ ಸಂಯೋಜನೆ ಮಾಡಿದ್ದಾರೆ.

ಬಿಲಿಗೆರೆಹುಂಡಿಯಲ್ಲಿ ನೂತನ ಪಿಎಸಿಎಸ್ ಕಚೇರಿ ಉದ್ಘಾಟನೆ

ಸಹಕಾರ ಸಂಘಗಳು ರೈತ ಸಮುದಾಯದ ಜೀವನಾಡಿ

ಎಂಎಲ್‌ಸಿ ಡಾ.ಯತೀಂದ್ರ ಅಭಿಪ್ರಾಯ

ತಿ.ನರಸೀಪುರ, ಮೇ 29– ರೈತ ಸಮುದಾಯದ ಆರ್ಥಿಕ ಭದ್ರತೆಗಾಗಿ ಸಹಕಾರ ಸಂಘಗಳ ಸ್ವಯಂ ಶಕ್ತಿ ಮತ್ತು ಸಾಧನೆ ಮುಖ್ಯ ಎಂದು ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ತಿಳಿಸಿದರು.

ತಾಲೂಕಿನ ಬಿಲಿಗೆರೆಹುಂಡಿಯಲ್ಲಿ ನೂತನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಕಚೇರಿ ಉದ್ಘಾಟಿಸಿ ಮಾತನಾಡಿದ ಅವರು, ಸಹಕಾರ ಸಂಘಗಳು ರೈತ ಸಮುದಾಯದ ಜೀವನಾಡಿ. ಸಹಕಾರಿ ಕ್ಷೇತ್ರ ಬಹಳಷ್ಟು ವಿಸ್ತಾರವಾಗಿ ಬೆಳೆದಿದ್ದು, ರೈತರ, ಕೂಲಿ ಕಾರ್ಮಿಕರ ಆರ್ಥಿಕ ಸ್ಥಿತಿ ಸುಧಾರಣೆಗೆ ಬೆನ್ನೆಲುಬಾಗಿ ನಿಂತಿವೆ. ಗ್ರಾಮೀಣ ಜನತೆಗೆ ಕೃಷಿ ಪತ್ತಿನ ಸಹಕಾರ ಸಂಘಗಳು ಅನುಕೂಲವಾಗಿವೆ. ಇವುಗಳಿಂದ ಸಾಲ ಪಡೆದು ರೈತರು ಕೃಷಿ ಚಟುವಟಿಕೆಗೆ ಸದ್ಬಳಕೆ ಮಾಡಿಕೊಂಡು ಆರ್ಥಿಕವಾಗಿ ಸಬಲರಾಗಬೇಕಿದೆ ಎಂದರು.

ಸರ್ಕಾರ ಸಹಕಾರ ಸಂಘದ ಮೂಲಕ ವ್ಯಾಪಾರಸ್ಥರಿಗೆ, ನೂರಾರು ರೈತರಿಗೆ ಕೋಟ್ಯಾಂತರ ರೂ. ಕೃಷಿ ಸಾಲ ನೀಡುತ್ತಿದ್ದು, ಸಹಕಾರ ಸಂಘದಿಂದ ರೈತರಿಗೆ ಹೆಚ್ಚಿನ ಅನುಕೂಲವಾಗಿದೆ. ಆರ್ಥಿಕವಾಗಿ ಸೋತವರಿಗೆ ಸಹಕಾರ ಸಂಘ ನೆರವಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಸಹಕಾರ ಸಂಘಗಳಿಗೆ ಹೆಚ್ಚಿನ ಆದ್ಯತೆ ನೀಡುವ ಮೂಲಕ ಗ್ರಾಮೀಣ ರೈತರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದರು.



ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಕಚೇರಿಯನ್ನು ಎಂಎಲ್‌ಸಿ ಡಾ.ಯತೀಂದ್ರ ಉದ್ಘಾಟಿಸಿದರು.

ಕನಕ ಭವನ ಕಾಮಗಾರಿ ಶೀಘ್ರ ಪೂರ್ಣ: ಗ್ರಾಮಸ್ಥರಿಂದ ಅಹವಾಲು ಸ್ವೀಕರಿಸುವ ವೇಳೆ ಗ್ರಾಮಸ್ಥರೊಬ್ಬರು ಗ್ರಾಮದಲ್ಲಿ ಅರ್ಧಕ್ಕೆ ನಿಂತಿರುವ ಕನಕ ಭವನ ಕಾಮಗಾರಿ ಪೂರ್ಣಗೊಳಿಸುವಂತೆ ಏರುಧ್ವನಿಯಲ್ಲಿ ಕೇಳಿದ ವೇಳೆ ಭವನ ಪರಿಶೀಲಿಸಿ ಪ್ರತಿಕ್ರಿಯಿಸಿದ ಡಾ.ಯತೀಂದ್ರ ನಮ್ಮ ಸರ್ಕಾರ ಕನಕ ಭವನ ಕಾಮಗಾರಿಗೆ 30ಲಕ್ಷ ಅನುದಾನ ಬಿಡುಗಡೆ ಮಾಡಿದೆ. ಅಧಿಕಾರಿಗಳು ಸಮರ್ಪಕವಾಗಿ ಕೆಲಸ ಮಾಡದ ಹಿನ್ನೆಲೆಯಲ್ಲಿ ಕಾಮಗಾರಿ ಸ್ಥಗಿತಗೊಂಡಿದೆ. ಈ ವರ್ಷ ಭವನ ಕಾಮಗಾರಿ ಪೂರ್ಣಗೊಳಿಸಲಾಗುವುದು ಎಂದು ಭರವಸೆ ನೀಡಿದರು.

ಈ ವೇಳೆ ಮಳೆಯಿಂದಾಗಿ ಮನೆ ಕುಸಿತಗೊಂಡು 3 ವರ್ಷ ಕಳೆದರೂ ಪುನರ್ವಸತಿ ಕಲ್ಪಿಸಲು ಅಧಿಕಾರಿಗಳು ಮುಂದಾಗಿಲ್ಲ ಎಂದು ಆರೋಪಿಸಿ ಗ್ರಾಮಸ್ಥರೊಬ್ಬರು ಕುಸಿದು ಬಿದ್ದ ಮನೆಯನ್ನು ತೋರಿಸಿದ ವೇಳೆ ಶೀಘ್ರ ಮನೆ ಕಟ್ಟಿಕೊಳ್ಳಲು ವ್ಯವಸ್ಥೆ ಮಾಡಲಾಗುತ್ತದೆ ಎಂದು ಯತೀಂದ್ರ ಭರವಸೆ ನೀಡಿದರು.

ಈ ವೇಳೆ ಉಪ ನಿಬಂಧಕ ಬೀರೇಶ್, ಸಹಾಯಕ ನಿಬಂಧಕ ಮನೋಜ್ ಕುಮಾರ್, ಉಪ ನಿಬಂಧಕ ಇನ್ಸ್‌ಪೆಕ್ಟರ್ ರಾಜು, ಮುಖ್ಯ ಕಾರ್ಯದರ್ಶಿ ಬಿ.ಸಿದ್ದ ರಾಜು, ಸಂಘದ ಉಪಾಧ್ಯಕ್ಷ ಪಿ.ಚಿನ್ನಬುದ್ದಿ, ನಿರ್ದೇಶಕರಾದ ಎಂ.ವೆಂಕಟೇಶ್, ಡಣಾಯಕನಪುರ ವಸಂತ, ಬಿಲಿಗೆರೆಹುಂಡಿ ಗೌರಮ್ಮಣಿ, ಮಹದೇವ, ಕೆ.ಎಂ.ದೇವರಾಜು, ಎಸ್.ರಾಜಮ್ಮ ಎನ್.ಅಶ್ವಿನ್, ಎಸ್.ಬಸವಣ್ಣ ನಂಜುಂಡೇಗೌಡ, ಚಿನ್ನಸ್ವಾಮಿ, ಎಪಿಎಂಸಿ ಮಾಜಿ ಅಧ್ಯಕ್ಷ ಅನಿಲ್ ಕುಮಾರ್, ಕಿರಗಸೂರು ಆರ್.ಮಹದೇವ, ಕಿರಗಸೂರು ಗ್ರಾಪಂ ಅಧ್ಯಕ್ಷ ನಿಂಗರಾಜು, ಅಭಿವೃದ್ಧಿ ಅಧಿಕಾರಿ ಧರಣೇಶ್, ಮಾಜಿ ಅಧ್ಯಕ್ಷೆ ಚಂದ್ರಮ್ಮ, ಮಾಜಿ ಉಪಾಧ್ಯಕ್ಷ ಹುಣಸೂರು ನಾಗರಾಜು, ಪುರಸಭಾ ಸದಸ್ಯರಾದ ಬಾದಾಮಿ ಮಂಜು, ಆರ್.ಚೇತನ್, ಕೆಗಣೇಶ್, ಯೂತ್ ಕಾಂಗ್ರೆಸ್ ಉಪಾಧ್ಯಕ್ಷ ಪುರಿ ನಟೇಶ್, ಅಮಾಸೆಗೌಡ, ಎಂ.ಮಿಥುನ್, ಮಹದೇವಸ್ವಾಮಿ, ಡೈರಿ ಅಧ್ಯಕ್ಷ ಮಹದೇವಸ್ವಾಮಿ, ಉಪಾಧ್ಯಕ್ಷ ಏಳುಮಲೆ ಮಂಜು, ಗುತ್ತಿಗೆದಾರ ಕೆಂಪಯ್ಯನಹುಂಡಿ ಮಾಧು ಸೇರಿದಂತೆ ಮತ್ತಿತರರಿದ್ದರು.

> ರೈತರು ತಮ್ಮ ಕೆಲಸ ಕಾರ್ಯ ಬಿಟ್ಟು ದಿನಪೂರ್ತಿ ತಿ.ನರಸೀಪುರ ಕಸಬಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಜೊತೆ ವ್ಯವಹರಿಸಬೇಕಾಗಿದ್ದರಿಂದ ಸುತ್ತಮುತ್ತಲ ಗ್ರಾಮಸ್ಥರಿಗೆ ಅನುಕೂಲವಾಗಲೆಂದು ಬಿಲಿಗೆರೆಹುಂಡಿಯಲ್ಲಿ ಸಂಘ ತೆರೆದು ಅನುಕೂಲ ಕಲ್ಪಿಸಿಕೊಡಲಾಗಿದೆ. ಕಿರಗಸೂರು, ಮನ್ನೇಹುಂಡಿ, ಡಣಾಯಕನಪುರ, ಕೂಡ್ಲೂರು ಹಾಗೂ ಹುಣಸೂರು ಗ್ರಾಮದ ರೈತರು ಇನ್ನು ಮುಂದೆ ಗ್ರಾಮದ ಸಹಕಾರ ಸಂಘದಲ್ಲಿ ವ್ಯವಹರಿಸುವ ಮೂಲಕ ಸಂಘದ ಬಲವರ್ಧನೆಗೆ ಸಹಕಾರ ನೀಡಬೇಕು.
> –ಎಂ.ಶೇಖರ್, ಅಧ್ಯಕ್ಷರು, ಬಿಲಿಗೆರೆಹುಂಡಿ ಪ್ರಾಕೃ.ಪ.ಸ.

ಅಂಕನಹಳ್ಳಿ ಡೇರಿ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆ

ಜನಾರ್ಧನ್ ಅಧ್ಯಕ್ಷ, ಹರೀಶ್ ಉಪಾಧ್ಯಕ್ಷ



ಅಧ್ಯಕ್ಷ ಜನಾರ್ಧನ್, ಉಪಾಧ್ಯಕ್ಷ ಹರೀಶ್ ಅವರನ್ನು ಸನ್ಮಾನಿಸಲಾಯಿತು.

ಸಾಲಿಗ್ರಾಮ, ಮೇ 29– ತಾಲೂಕಿನ ಅಂಕನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ಎ.ಎಸ್.ಜನಾರ್ಧನ್ ಹಾಗೂ ಉಪಾಧ್ಯಕ್ಷರಾಗಿ ಹರೀಶ್ ಅವಿರೋಧವಾಗಿ ಆಯ್ಕೆ ಯಾಗಿದ್ದಾರೆ.

ಸಂಘದ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಎ.ಎಸ್. ಜನಾರ್ಧನ್, ಉಪಾಧ್ಯಕ್ಷ ಸ್ಥಾನಕ್ಕೆ ಹರೀಶ್ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಗಿರೀಶ್ ಘೋಷಿಸಿದರು.

ಚುನಾವಣಾ ಪ್ರಕ್ರಿಯೆಯಲ್ಲಿ ನಿರ್ದೇಶಕರಾದ ಎ.ಟಿ.ಸೋಮಶೇಖರ್, ದೇವೇಂದ್ರ, ಆರ್.ರವಿಕುಮಾರ್, ಎ.ಆರ್. ಹರೀಶ್, ಅನಿಲ್ ಕುಮಾರ್, ಚಂದ್ರಿಕಾ, ಸುಭದ್ರಮ್ಮ, ವಿಸ್ತರಣಾಧಿಕಾರಿ ನಾಗರಾಜು, ಕಾರ್ಯದರ್ಶಿ ರಂಗಪ್ಪ ಹಾಜರಿದ್ದರು.

ನೂತನ ಅಧ್ಯಕ್ಷ ಎ.ಎಸ್.ಜನಾರ್ಧನ್ ಮಾತನಾಡಿ, ಒಕ್ಕೂಟದಿಂದ ಬರುವ ಅನುದಾನ ಹಾಗೂ ಆದಾಯದಲ್ಲಿ ಸಂಘದ ಅಭಿವೃದ್ಧಿಗೆ ಶ್ರಮಿಸುತ್ತೇನೆ. ಎಲ್ಲರೂ ಸಲಹೆ, ಸಹಕಾರ ನೀಡುವಂತೆ ಮನವಿ ಮಾಡಿದರು. ಈ ವೇಳೆ ಕೆ.ಬಾಬು, ಮಾಜಿ ಅಧ್ಯಕ್ಷ ತಮ್ಮೇಗೌಡ, ಧನಂಜಯ, ಸತೀಶ್, ರಂಗ ಸೇರಿದಂತೆ ಮತ್ತಿತರರಿದ್ದರು.

ಬೈಕ್‌ಗೆ ಕ್ಯಾಂಟರ್ ಡಿಕ್ಕಿ: ಇಬ್ಬರು ಯುವಕರ ಸಾವು





ಬೆಟ್ಟದಪುರ, ಮೇ 29– ಬೈಕ್‌ಗೆ ಕ್ಯಾಂಟರ್ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಯುವಕರು ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಪಿರಿಯಾಪಟ್ಟಣ ತಾಲೂಕಿನ ಗೊರಹಳ್ಳಿ ಗ್ರಾಮದ ಚೆನ್ನಪ್ಪಯ್ಯನ ಕೆರೆ ಏರಿ ಬಳಿ ಗುರುವಾರ ನಡೆದಿದೆ.

ತಾಲೂಕಿನ ಹಿಟ್ನೆ ಹೆಬ್ಬಾಗಿಲು ಗ್ರಾಮದ ಶಂಕರ್ (30), ಶೇಖರ್(22) ಸಾವನ್ನಪ್ಪಿದವರು. ಇವರು ಬೆಳಗ್ಗೆ 11 ಗಂಟೆ ವೇಳೆಗೆ ಕಾರ್ಯ ನಿಮಿತ್ತ ಹಾಸನ ಜಿಲ್ಲೆ ಅರಕಲಗೂಡು ತಾಲೂಕಿನ ಕೊಣನೂರು ಗ್ರಾಮಕ್ಕೆ ತೆರಳುತ್ತಿದ್ದರು. ಈ ವೇಳೆ ಗೊರಹಳ್ಳಿ ಗ್ರಾಮದ ಚೆನ್ನಪ್ಪಯ್ಯನ ಕೆರೆ ತಿರುವಿನಲ್ಲಿ ಎದುರಿನಿಂದ ಬಂದ ಕ್ಯಾಂಟರ್ ಬೈಕ್‌ಗೆ ಡಿಕ್ಕಿ ಹೊಡೆದ ರಭಸಕ್ಕೆ ಶಂಕರ್ ತಲೆ ಹಾರಿಹೋಗಿದ್ದರೆ, ಶೇಖರ್ ತೀವ್ರಗಾಯಗೊಂಡು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಬೆಟ್ಟದಪುರ ಠಾಣೆ ಪೊಲೀಸರು ಪರಿಶೀಲನೆ ನಡೆಸಿ ಶವಗಳನ್ನು ಪಿರಿಯಾಪಟ್ಟಣ ಸಾರ್ವಜನಿಕ ಆಸ್ಪತ್ರೆಗೆ ರವಾನಿಸಿ ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಹಸ್ತಾಂ ತರಿಸಿದರು. ಈ ಸಂಬಂಧ ಬೆಟ್ಟದಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಾಪತ್ತೆಯಾಗಿದ್ದ ಯುವಕ ಶವವಾಗಿ ಪತ್ತೆ



ಹುಣಸೂರು, ಮೇ 29– ಕೆಲ ದಿನಗಳ ಹಿಂದೆ ನಾಪತ್ತೆಯಾಗಿದ್ದ ಯುವಕನ ಶವ ಕೆ.ಆರ್.ಪೇಟೆ ತಾಲೂಕು ಪೂವನಹಳ್ಳಿ ಗ್ರಾಮದ ಬಳಿಯ ಹೇಮಾವತಿ ನದಿ ಹಿನ್ನೀರಿನಲ್ಲಿ ಪತ್ತೆಯಾಗಿದೆ.

ನಗರದ ಸೇತುವೆ ಬಳಿಯ ರೆಹಮತ್ ಮೊಹಲ್ಲಾ ನಿವಾಸಿ ಖಲೀಲ್ ಅವರ ಪುತ್ರ ಸನಾವುಲ್ಲಾ (30) ಸಾವನ್ನಪ್ಪಿದವರು. ಈತ ಕೆಲ ದಿನಗಳ ಹಿಂದೆ ಮನೆಯಿಂದ ಹೊರ ಹೋದವನು ಹಿಂತಿರುಗಿರಲಿಲ್ಲ. ಈ ಸಂಬಂಧ ಪೋಷಕರು ತಮ್ಮ ಪುತ್ರನನ್ನು ಹುಡುಕಿ ಕೊಡುವಂತೆ ಪಟ್ಟಣ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಆದರೆ ಸನಾವುಲ್ಲಾ ಕೆ.ಆರ್.ಪೇಟೆ ತಾಲೂಕು ಪೂವನಹಳ್ಳಿ ಗ್ರಾಮದ ಬಳಿಯ ಹೇಮಾವತಿ ನದಿ ಹಿನ್ನೀರಿನಲ್ಲಿ ಶವವಾಗಿ ಪತ್ತೆಯಾಗಿದ್ದಾನೆ. ಈತ ಪತ್ನಿ, ಮಗುವನ್ನು ಅಗಲಿದ್ದು, ನಗರದ ಬಜಾರ್ ರಸ್ತೆಯಲ್ಲಿರುವ ಬಿ.ಜೆ.ಪ್ರಾವಿಜನ್ ಸ್ಟೋರ್‌ನಲ್ಲಿ ಕೆಲಸ ಮಾಡುತ್ತಿದ್ದ ಎನ್ನಲಾಗಿದೆ. ನಗರದ ರಹಮತ್ ಮೊಹಲ್ಲಾದ ಖಬರಸ್ಥಾನದಲ್ಲಿ ಅಂತ್ಯಕ್ರಿಯೆ ನಡೆಯಿತು. ಈ ಸಂಬಂಧ ಕೆ.ಆರ್.ಪೇಟೆ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಶಾಲೆ ಪುನಾರಂಭ: ಮಕ್ಕಳನ್ನು ಸ್ವಾಗತಿಸಿದ ಶಿಕ್ಷಕರು

ಸರಗೂರು, ಮೇ 29– ಇಂದಿನಿಂದ ಶಾಲೆ ಪುನರಾರಂಭಗೊಂಡ ಹಿನ್ನೆಲೆಯಲ್ಲಿ ತಾಲೂಕಿನ ಆಗತ್ತೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳನ್ನು ಶಿಕ್ಷಕರು ಸ್ವಾಗತಿಸಿದರು.

ಈ ವೇಳೆ ಮಾತನಾಡಿದ ಮುಖ್ಯಶಿಕ್ಷಕ ಸಿದ್ದರಾಜು, ಶಾಲಾ ಶಿಕ್ಷಣ ಇಲಾಖೆ ಪ್ರಸಕ್ತ ಸಾಲಿನ ಶೈಕ್ಷಣಿಕ ವೇಳಾಪಟ್ಟಿ ಪ್ರಕಟಿಸಿದ್ದು, ಅದರಂತೆ ಮೇ 29ರಿಂದ ಶಾಲೆಗಳು ಪ್ರಾರಂಭವಾಗಿವೆ. ಇದುವರೆಗೂ ಬೇಸಿಗೆ ರಜೆ ಮಜಾ ಅನುಭವಿಸಿದ್ದ ಮಕ್ಕಳು ಇಂದು ಶಾಲೆಗೆ ಆಗಮಿಸಿದ್ದು, ಶಾಲೆಯ ಶಿಕ್ಷಕರೆಲ್ಲರೂ ಸೇರಿ ಸ್ವಾಗತಿಸಿದ್ದೇವೆ ಎಂದರು.

ಪೋಷಕರು ಸರ್ಕಾರಿ ಶಾಲೆಗಳಿಗೆ ತಮ್ಮ ಮಕ್ಕಳನ್ನು ಸೇರಿಸಲು ಮುಂದಾಗಬೇಕು. ಆ ಮೂಲಕ ಶಾಲೆಯಲ್ಲಿ ಸಿಗುವ ಗುಣಮಟ್ಟದ ಶಿಕ್ಷಣ ಸೇರಿದಂತೆ ಹಲವು ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಮನವಿ ಮಾಡಿದರು.

ಪುರಸಭೆ ನಾಮ ನಿರ್ದೇಶನ ಸದಸ್ಯರಿಗೆ ಸನ್ಮಾನ

ತಿ.ನರಸೀಪುರ, ಮೇ 29– ಇತ್ತೀಚೆಗೆ ಪಟ್ಟಣದ ಪುರಸಭೆ ನಾಮ ನಿರ್ದೇಶನ ಸದಸ್ಯರಾಗಿ ಆಯ್ಕೆಯಾದ ತಿರುಮಕೂಡಲಿನ ಚೇತನ್ ಕುಮಾರ್ ಹಾಗೂ ಕಸಬಾ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಉಪಾಧ್ಯಕ್ಷರಾಗಿ ಆಯ್ಕೆಯಾದ ಟಿ.ಸಿ. ಫಣೀಶ್ ಕುಮಾರ್ ಅವರನ್ನು ಗ್ರಾಮಸ್ಥರು ಬುಧವಾರ ರಾತ್ರಿ ಹಳೇ ತಿರುಮಕೂಡಲಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಅಭಿನಂದಿಸಿದರು.

ಇದೇ ವೇಳೆ ಒಕ್ಕಲಿಗ ಸಮುದಾಯಕ್ಕೆ 2 ಬಾರಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಉಪಾಧ್ಯಕ್ಷ ಸ್ಥಾನ ದೊರಕಿಸಿಕೊಡಲು ಕಾರಣರಾದ ಸೊಸೈಟಿ ಅಧ್ಯಕ್ಷ ಡಣಾಯಕನಪುರ ಮಲ್ಲಣ್ಣ ಅವರನ್ನು ಗ್ರಾಮಸ್ಥರು ಸನ್ಮಾನಿಸಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಡಣಾಯಕನಪುರ ಮಲ್ಲಣ್ಣ, ಒಕ್ಕಲಿಗ ಸಮುದಾಯದೊಂದಿಗೆ ಕಳೆದ 15 ವರ್ಷಗಳಿಂದಲೂ ಭಾಂದವ್ಯ ಹೊಂದಿದ್ದೇನೆ. ಸಮುದಾಯ ಸಹ ನನಗೆ ಸಹಕಾರ ನೀಡುತ್ತಾ ಬಂದಿದೆ. ಮುಂದೆಯೂ ಸಮುದಾಯಕ್ಕೆ ಹಾಗೂ ಗ್ರಾಮಕ್ಕೆ ಬೇಕಾದ ಕೆಲಸ ಮಾಡಿಕೊಡಲು ಸಿದ್ಧನಾಗಿದ್ದೇನೆ. ಗ್ರಾಮಸ್ಥರ ಅಭಿಮಾನಕ್ಕೆ ನಾನು ಋಣಿಯಾಗಿದ್ದು, ಗ್ರಾಮಕ್ಕೆ ಮತ್ತಷ್ಟು ರಾಜಕೀಯ ಸ್ಥಾನಮಾನ ದೊರಕುವಂತಾಗಲಿ ಎಂದು ಆಶಿಸಿದರು.



ಪುರಸಭೆಗೆ ನಾಮ ನಿರ್ದೇಶಿತ ಸದಸ್ಯ ಚೇತನ್ ಕುಮಾರ್, ಪಿಎಸಿಎಸ್ ಉಪಾಧ್ಯಕ್ಷ ಟಿ.ಸಿ.ಫಣೀಶ್ ಕುಮಾರ್ ಹಾಗೂ ಅಧ್ಯಕ್ಷ ಮಲ್ಲಣ್ಣನವರನ್ನು ಸನ್ಮಾನಿಸಲಾಯಿತು.

ಪುರಸಭೆ ನೂತನ ನಾಮ ನಿರ್ದೇಶಿತ ಸದಸ್ಯ ಚೇತನ್ ಕುಮಾರ್ ಮಾತನಾಡಿ, ಕಸಬಾ ಸಹಕಾರ ಸಂಘದಲ್ಲಿ ಒಕ್ಕಲಿಗರಿಗೆ ಕಳೆದ 2 ಅವಧಿಯಿಂದ ಪ್ರಾತಿನಿಧ್ಯ ನೀಡಲಾಗುತ್ತಿದೆ. ಕಳೆದ ಬಾರಿ ನಾಗಮ್ಮ ಹಾಗೂ ಈ ಬಾರಿ ಫಣೀಶ್ ಕುಮಾರ್ ಅವರಿಗೆ ಉಪಾಧ್ಯಕ್ಷ ಸ್ಥಾನ ನೀಡಲಾಗಿದೆ. ಹಾಗಾಗಿ ಅಧ್ಯಕ್ಷ ಮಲ್ಲಣ್ಣರಿಗೆ ಗ್ರಾಮ ಕೃತಜ್ಞತೆ ಸಲ್ಲಿಸುತ್ತದೆ ಎಂದರು.

ಈ ವೇಳೆ ಮುಖಂಡರಾದ ಸೋಮಶೇಖರ್, ರಜನೀಶ್, ಟಿ.ಎಂ.ನಾಗಣ್ಣ, ರಾಮು, ಶ್ರೀನಿವಾಸ್ ಮಿಲ್ಟ್ರಿ, ಉಮೇಶ್, ಸಿದ್ದೇಗೌಡ, ಎನ್.ಕುಮಾರ, ಬಸ್ ಏಜೆಂಟ್ ಮಂಜುನಾಥ್, ಟಿ.ಬಿ.ಸುರೇಶ್, ರವಿಪ್ರಸಾದ್, ದಿನೇಶ್, ಶಂಕರ್, ಮಹದೇವಣ್ಣ ನಾಗರಾಜು ಬಂಗ್ಲಿ, ಮುಕುಂದ, ಪ್ರತಾಪ್, ಮಣಿಕಂಠ, ವೇಣು, ನಟೇಶ್, ಸುಮಂತ್ ಜಯಂತ್, ಮಹೇಶ್, ಮೂರ್ತಿ, ಚಂದು, ಪ್ರವೀಣ, ಗುಂಡಣ್ಣ, ರಾಜೇಶ, ಗುಂಡ, ಕಾರ್ತಿಕ್, ನವೀನ್, ಶಿವು, ರಾಜೇಶ್ ಮತ್ತಿತರರಿದ್ದರು.

ರೌಡಿಶೀಟರ್‌ಗಳಿಗೆ ಗಡಿಪಾರು ಎಚ್ಚರಿಕೆ



ಹುಣಸೂರಲ್ಲಿ ಪೊಲೀಸರು ರೌಡಿಶೀಟರ್‌ಗಳ ಪೆರೇಡ್ ನಡೆಸಿದರು.

ಹುಣಸೂರು, ಮೇ 29– ರೌಡಿಶೀಟರ್‌ಗಳು ಮತ್ತೆ ಕ್ರಿಮಿನಲ್ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳಬೇಡಿ. ಕುಟುಂಬಕ್ಕೆ ಹೊರೆಯಾಗಬೇಡಿ. ಇನ್ನಾದರೂ ಉತ್ತಮ ಜೀವನ ನಡೆಸಿ, ಯಾವುದೇ ಶಾಂತಿ ಭಂಗ ಪ್ರಕರಣದಲ್ಲಿ ಭಾಗಿಯಾದಲ್ಲಿ ಗಡಿಪಾರು ಮಾಡುವುದಾಗಿ ಅಡಿಷನಲ್ ಎಸ್‌ಪಿ ಮಲ್ಲಿಕ್ ಎಚ್ಚರಿಕೆ ನೀಡಿದರು.

ನಗರದ ಡಿವೈಎಸ್‌ಪಿ ಕಚೇರಿ ಆವರಣದಲ್ಲಿ ನಗರ, ಗ್ರಾಮಾಂತರ ಹಾಗೂ ಬಿಳಿಕೆರೆ ಠಾಣಾ ವ್ಯಾಪ್ತಿಯ ರೌಡಿಶೀಟರ್‌ಗಳ ಪೆರೇಡ್ ನಡೆಸಿದ ಅವರು ಪ್ರತಿಯೊಬ್ಬರ ಮಾಹಿತಿ ಪಡೆದು ರೌಡಿಶೀಟರ್‌ಗಳಾಗಿರುವವರಿಗೆ ಸಾರ್ವಜನಿಕ ವಲಯದಲ್ಲಿ ಕೆಲಸವೂ ಸಿಗುವುದಿಲ್ಲ. ಇದರಿಂದ ಕುಟುಂಬ ನಿರ್ವಹಣೆ ಕಷ್ಟವಾಗಲಿದೆ. ವಯಸ್ಸಾದ ತಂದೆ–ತಾಯಿ, ಹೆಂಡತಿ, ಮಕ್ಕಳನ್ನು ಸಹ ಸಮಾಜ ದೂರಲಿದೆ. ಇದರಿಂದ ನೀವು ಜೀವನದಲ್ಲಿ ಸಂಕಷ್ಟ ಎದುರಿಸುತ್ತಿದ್ದೀರಾ, ಮತ್ತೆ ಮತ್ತೆ ಕ್ರಿಮಿನಲ್ ಪ್ರಕರಣ, ಕಾನೂನು ಸುವ್ಯವಸ್ಥೆಗೆ ಭಂಗತರುವ ಕೆಲಸ ಮಾಡಬೇಡಿರೆಂದು ಎಚ್ಚರಿಸಿ. ಯಾವುದೇ ಪ್ರಕರಣಗಳಲ್ಲಿ ಭಾಗಿಯಾಗದೆ ಸನ್ನಡತೆ ತೋರುವವರಿಗೆ ರೌಡಿಶೀಟರ್ ಪಟ್ಟಿಯಿಂದ ಕೈಬಿಡಲಾಗುವುದೆಂದು ತಿಳಿಸಿದರು.

54 ಮಂದಿ ಕೈಬಿಡಲು ವರದಿ: ತಾಲೂಕಿನ 3 ಠಾಣಾ ವ್ಯಾಪ್ತಿಯಿಂದ 220 ರೌಡಿಶೀಟರ್‌ಗಳಿದ್ದು, ಈ ಪೈಕಿ 125 ಮಂದಿ ಪೆರೇಡ್‌ಗೆ ಹಾಜರಾಗಿದ್ದರು. ಕಳೆದ 10 ವರ್ಷಗಳಿಂದ ಯಾವುದೇ ಪ್ರಕರಣಗಳಲ್ಲಿ ಭಾಗಿಯಾಗದ 54 ಮಂದಿ ಹೆಸರನ್ನು ರೌಡಿಶೀಟರ್ ಪಟ್ಟಿಯಿಂದ ಕೈಬಿಡಲು ಜಿಲ್ಲಾ ಪೊಲೀಸ್ ಮುಖ್ಯಾಧಿಕಾರಿಯವರಿಗೆ ವರದಿ ನೀಡಲಾಗಿದೆ ಎಂದು ಡಿವೈಎಸ್‌ಪಿ ಗೋಪಾಲಕೃಷ್ಣ ತಿಳಿಸಿದರು. ನಿರೀಕ್ಷಕ ಸಂತೋಷ್ ಕಶ್ಯಪ್, ಲೋಲಾಕ್ಷಿ, ಮುನಿಯಪ್ಪ ಇದ್ದರು.

ಸಾರ್ವಜನಿಕರ ಆಸ್ತಿಪಾಸ್ತಿಗಳ ರಕ್ಷಣೆಗೆ ಮುಂದಾಗಿ

ಅಧಿಕಾರಿಗಳಿಗೆ ತಹಸೀಲ್ದಾರ್ ಮಂಜುನಾಥ್ ಸೂಚನೆ

ಹುಣಸೂರು, ಮೇ 29– ಸತತ ಮಳೆಯಿಂದಾಗಿ ಜನ ಜಾನುವಾರು ಮತ್ತು ಸಾರ್ವಜನಿಕರ ಆಸ್ತಿಪಾಸ್ತಿಗಳ ರಕ್ಷಣೆಗೆ ಆದ್ಯತೆ ಮೇಲೆ ಸಮರೋಪಾದಿಯಲ್ಲಿ ಕರ್ತವ್ಯ ನಿರ್ವಹಿಸಬೇಕು ಎಂದು ತಹಸೀಲ್ದಾರ್ ಜೆ.ಮಂಜುನಾಥ್ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ತಾಲೂಕು ಕಚೇರಿ ಸಭಾಂಗಣದಲ್ಲಿ ಮಳೆಹಾನಿ ಕುರಿತಂತೆ ಪ್ರಕೃತಿ ವಿಕೋಪ ನಿರ್ವಹಣಾ ಕಾರ್ಯಕ್ರಮದಡಿ ಆಯೋಜಿಸಿದ್ದ ಮಂಜಾಗ್ರತಾ ಸಭೆಯಲ್ಲಿ ಮಾತನಾಡಿದ ಅವರು, ತಾಲೂಕಿನಲ್ಲಿ ವಾರದಿಂದ ಸತತವಾಗಿ ಮಳೆ ಸುರಿಯುತ್ತಿದೆ. ಕೊಡಗಿನ ಕಾವೇರಿ ಜಲಾನಯನ ಪ್ರದೇಶದಲ್ಲಿ ಮಳೆಯಿಂದಾಗಿ ತಾಲೂಕಿನಲ್ಲಿ ಹರಿಯುವ ಕಾವೇರಿ ಉಪನದಿ ಲಕ್ಷ್ಮಣತೀರ್ಥ ಮೈದುಂಬಿ ಹರಿಯುತ್ತಿದೆ. ಈ ನಡುವೆ ತಾಲೂಕಿನಲ್ಲಿ ಸತತ ಮಳೆಯಿಂದಾಗಿ ಬೆಳೆಹಾನಿ, ಮನೆಹಾನಿಯಂತಹ ಪ್ರಕರಣ ಕಂಡು ಬಂದಿದೆ. ಮುಂದಿನ ದಿನಗಳಲ್ಲೂ ಮಳೆ ಮುಂದುವರಿಯುವ ಸಂಭವವನ್ನು ಹವಾಮಾನ ಇಲಾಖೆ ತಿಳಿಸಿದ್ದು, ಅಧಿಕಾರಿಗಳು ಈಗಿನಿಂದಲೇ ಮುಂಜಾಗ್ರತೆ ವಹಿಸಬೇಕೆಂದು ಸೂಚಿಸಿದರು.



ಮಳೆಹಾನಿ ಮುಂಜಾಗ್ರತಾ ಸಭೆಯಲ್ಲಿ ತಹಸೀಲ್ದಾರ್ ಮಂಜುನಾಥ್ ಮಾತನಾಡಿದರು.

ಬೆಳೆ, ಮನೆಹಾನಿ ಗಮನಿಸಿ: ತಾಲೂಕಿನ ಪ್ರತಿ ಗ್ರಾಪಂ ವ್ಯಾಪ್ತಿಯಲ್ಲಿ ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ಕೃಷಿ ಮಾಡಿದ್ದ ಬೆಳೆಗಳು ಹಾನಿಗೊಳಗಾದಲ್ಲಿ ಆಯಾ ಗ್ರಾಪಂ ಪಿಡಿಓ, ಆರ್‌ಐ ಮತ್ತು ಇನ್ನಿತರ ಇಲಾಖೆ ಅಧಿಕಾರಿಗಳು ಕೂಡಲೇ ಸಮೀಕ್ಷೆ ನಡೆಸಿ ವರದಿ ಅಪ್ಲೋಡ್ ಮಾಡಬೇಕು. ಪರಿಹಾರ ಪಡೆಯಲು ಜೂ.5ರವರೆಗೆ ಕಾಲಾವಕಾಶವಿದ್ದು, ಅಧಿಕಾರಿಗಳು ವರದಿ ಅಪ್‌ಲೋಡ್ ಪ್ರಕ್ರಿಯೆಗಳನ್ನು ಚುರುಕಾಗಿ ನಡೆಸಬೇಕು. ಕೃಷಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ ಸಹಾಯಕ ನಿರ್ದೇಶಕರು ಈ ಕುರಿತು ಗಮನ ಹರಿಸಬೇಕು. ಮಳೆಯಿಂದಾಗಿ ಮನೆ ಆಸ್ತಿ ಪಾಸ್ತಿ ಹಾನಿಯಾಗಿದ್ದರೆ ಪಿಡಿಓ ಮತ್ತು ಕಂದಾಯ ಅಧಿಕಾರಿಗಳು ವರದಿಯನ್ನು ಆಯಾ ದಿನವೇ ಕಂದಾಯ ಇಲಾಖೆಗೆ ಸಲ್ಲಿಸಬೇಕು. ಜಾನುವಾರುಗಳು ದುರ್ಮರಣಗೊಂಡಲ್ಲಿ ಪಶು ಸಂಗೋಪನಾ ಮತ್ತು ಪಶುಪಾಲನ ಇಲಾಖೆ ಅಧಿಕಾರಿಗಳು ಮರಣೋತ್ತರ ಪರೀಕ್ಷೆ ಕೈಗೊಂಡು ವರದಿ ಸಲ್ಲಿಸುವ ಮೂಲಕ ರೈತರಿಗೆ ಪರಿಹಾರ ಧನ ಪಡೆಯಲು ಅನುವು ಮಾಡಿಕೊಡಬೇಕು ಎಂದು ಸೂಚಿಸಿದರು.

ಶಾಲಾ ಕಟ್ಟಡಗಳ ದುಸ್ಥಿತಿ ಗಮನಿಸಿ: ಇನ್ನೆರಡು ದಿನಗಳಲ್ಲಿ ಶಾಲಾ, ಕಾಲೇಜುಗಳು ಆರಂಭಗೊಳ್ಳಲಿದ್ದು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯಿಂದ ತಾಲೂಕಿನಲ್ಲಿ ಶಿಥಿಲಾವಸ್ಥೆಯಲ್ಲಿರುವ ಕಟ್ಟಡಗಳ ಕುರಿತು ಮಾಹಿತಿ ಕಲೆ ಹಾಕಬೇಕು. ಅಂಗನವಾಡಿ ಕೇಂದ್ರಗಳ ಪರಿಸ್ಥಿತಿ ಕುರಿತು ಮಾಹಿತಿ ನೀಡುವುದು ಅಗತ್ಯವೆಂದರು.

ಈ ಹಿಂದೆ ಮಳೆ ಹಾವಳಿಯಿಂದ ಸಂಕಷ್ಟಕ್ಕೀಡಾದ 6 ಗ್ರಾಮಗಳ ಬಗ್ಗೆ ಮುನ್ನೆಚ್ಚರಿಕೆ ವಹಿಸಲಾಗಿದೆ. ಹನಗೋಡು ಹೋಬಳಿ ವ್ಯಾಪ್ತಿಯ ಶಿಂಡೇನಹಳ್ಳಿ, ಬಿಲ್ಲೇನಹೊಸಳ್ಳಿ, ಕೋಣನ ಹೊಸಹಳ್ಳಿ, ಕಸಬಾ ಹೋಬಳಿ ವ್ಯಾಪ್ತಿಯ ನಿಲುವಾಗಿಲು, ರಾಮಪಟ್ಟಣ ಮತ್ತು ದೊಡ್ಡಹುಣಸೂರು ಗ್ರಾಮಗಳಲ್ಲಿ ಪ್ರವಾಹ ಸಂಕಷ್ಟಗಳನ್ನು ಎದುರಿಸಿದ್ದು, ಮುಂದಿನ ದಿನಗಳಲ್ಲಿ ಪ್ರವಾಹ ಪರಿಸ್ಥಿತಿ ಎದುರಾದರೆ ಸ್ಥಳಾಂತರಕ್ಕೆ ಅಗತ್ಯ ಕಾಳಜಿ ಕೇಂದ್ರಗಳನ್ನು ಗುರುತಿಸಲಾಗಿದೆ ಎಂದರು.

ಸಭೆಯಲ್ಲಿ ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಅನಿಲ್ ಕುಮಾರ್, ತೋಟಗಾರಿಕೆ ಎಡಿ ನಾಗರಾಜ್, ಬಿಇಓ ಎಸ್.ಪಿ.ಮಹದೇವ್, ಪೌರಾಯುಕ್ತ ಕೆ.ಮಾನಸ, ಪರಿಸರ ಇಂಜಿನಿಯರ್ ಸೌಮ್ಯ ಇದ್ದರು.

ಹೆಚ್.ಡಿ.ಕೋಟೆಯಲ್ಲಿ ಬೃಹತ್ ತಿರಂಗ ಯಾತ್ರೆ

ದೇಶದ ಸೈನಿಕರಿಗೆ ಗೌರವ ಸಲ್ಲಿಸಿದ ಬಿಜೆಪಿ, ಜೆಡಿಎಸ್ ಕಾರ್ಯಕರ್ತರು

ಹೆಚ್.ಡಿ.ಕೋಟೆ, ಮೇ 29– ಕಾಶ್ಮೀರದ ಪೆಹಲ್ಗಾಮ್‌ನಲ್ಲಿ 26 ಭಾರತೀಯರನ್ನು ಹತ್ಯೆಗೈದ ಉಗ್ರರ ಮಟ್ಟ ಹಾಕಿ, ಭಯೋತ್ಪಾದಕರ ಅಡಗು ತಾಣಗಳನ್ನು ನಾಶಪಡಿಸಿ ಪರಾಕ್ರಮ ಮೆರೆದ ದೇಶದ ಸೈನಿಕರಿಗೆ ಗೌರವ ಸಲ್ಲಿಸಲು ಪಟ್ಟಣದಲ್ಲಿ ಬೃಹತ್ ತಿರಂಗ ಯಾತ್ರೆ ನಡೆಸಲಾಗುತ್ತಿದೆ ಎಂದು ಬಿಜೆಪಿ ರಾಜ್ಯ ಎಸ್‌ಟಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಕೆ.ಎಂ.ಕೃಷ್ಣನಾಯಕ ತಿಳಿಸಿದರು.

ಪಟ್ಟಣದ ತಾಲೂಕು ಆಡಳಿತಸೌಧದ ಬಳಿ ಮಾತನಾಡಿದ ಅವರು, ಕಾಶ್ಮೀರದ ಪೆಹಲ್ಗಾಮ್‌ಗೆ ಪ್ರವಾಸಕ್ಕೆ ತೆರಳಿದ್ದ ಪ್ರವಾಸಿಗರನ್ನು ಉಗ್ರಗಾಮಿಗಳು ಧರ್ಮ ಕೇಳಿ ಗುಂಡಿಕ್ಕಿ 26 ಜನರನ್ನು ಬಲಿ ತೆಗೆದುಕೊಂಡಿದ್ದರು. ಈ ಕೃತ್ಯವನ್ನು ಇಡೀ ದೇಶದ ಜನತೆ ಖಂಡಿಸಿದ್ದರು. ಇದಕ್ಕೆ ಪ್ರತ್ಯುತ್ತರವಾಗಿ ಭಾರತದ ಸೈನಿಕರು ಆಪರೇಷನ್ ಸಿಂಧೂರದ ಮೂಲಕ ಗಡಿಯಿಂದ ಆಚೆಗೆ ತೆರಳಿ ಉಗ್ರಗಾಮಿಗಳ ಅಡಗು ತಾಣಗಳು ಮತ್ತು ಅವರಿಗೆ ತರಬೇತಿ ನೀಡುತ್ತಿದ್ದ ಕೇಂದ್ರಗಳನ್ನು ಧ್ವಂಸಗೊಳಿಸುವಲ್ಲಿ ಯಶಸ್ವಿಯಾದರು. ಹೀಗಾಗಿ ದೇಶದ ಸೈನಿಕರಿಗೆ ಧೈರ್ಯ ತುಂಬುವ ನಿಟ್ಟಿನಲ್ಲಿ ಇಡೀ ದೇಶದಲ್ಲಿ ತಿರಂಗ ಯಾತ್ರೆ ನಡೆಸಲಾಗುತ್ತಿದೆ. ಅದರಂತೆ ಪಟ್ಟಣದಲ್ಲೂ ಸಹ ತಿರಂಗ ಯಾತ್ರೆ ಹಮ್ಮಿಕೊಳ್ಳಲಾಗಿದೆ. ಪ್ರಧಾನಿ ಮೋದಿ ಸೂಕ್ತ ಕ್ರಮ ಕೈಗೊಳ್ಳುವ ಮೂಲಕ ಪಾಕಿಸ್ತಾನಕ್ಕೆ ಉತ್ತರ ನೀಡಿದ್ದಾರೆ ಎಂದರು.

ಪಡುವಲು ವಿರಕ್ತ ಮಠದ ಮಹದೇವ ಸ್ವಾಮೀಜಿ ಮಾತನಾಡಿ, ಪ್ರತಿ ಗ್ರಾಮ, ಮನೆಗಳಲ್ಲಿ ದೇಶಾಭಿಮಾನ ಬೆಳೆಸಲು ನಾವು ಮುಂದಾಗಬೇಕು. 26 ಅಮಾಯಕ ಭಾರತೀಯರನ್ನು ಭಯೋತ್ಪಾದಕರು ಹತ್ಯೆ ಮಾಡಿರುವುದು ನೋವಿನ ಸಂಗತಿ. ಇದರ ಪ್ರತಿಕಾರವಾಗಿ ದೇಶದ ಮೂರೂ ಸಶಸ್ತ್ರ ಪಡೆಯ ಸೈನಿಕರು ಹಗಲು, ರಾತ್ರಿ ಎನ್ನದೇ ದಿಟ್ಟ ಪ್ರತ್ಯುತ್ತರ ನೀಡಿರುವುದು ಶ್ಲಾಘಿಸಿದ ಅವರು ನಮ್ಮ ಸೇನೆ ನಮ್ಮ ಹೆಮ್ಮೆ. ದೇಶದ 145 ಕೋಟಿ ಜನತೆ ಭಾರತೀಯ ಸೈನಿಕರೊಂದಿಗೆ ಇದ್ದೇವೆ ಎಂಬ ಸಂದೇಶವನ್ನು ಈ ತಿರಂಗ ಯಾತ್ರೆ ಮೂಲಕ ತಿಳಿಸುತ್ತಿದ್ದೇವೆ ಎಂದರು.



ಹೆಚ್.ಡಿ.ಕೋಟೆಯಲ್ಲಿ ತಿರಂಗ ಯಾತ್ರೆ ನಡೆಯಿತು.

> ದೇಶದಲ್ಲಿ ನಾವು ನೆಮ್ಮದಿಯಿಂದ ಬದುಕುತ್ತಿದ್ದೇವೆ ಎಂದರೆ ಅದಕ್ಕೆ ಮುಖ್ಯ ಕಾರಣ ಸೈನಿಕರು. ಹಾಗಾಗಿ ಸೈನಿಕರ ಕಲ್ಯಾಣ ನಿಧಿಗೆ 1 ಲಕ್ಷ ರೂ. ದೇಣಿಗೆ ನೀಡುತ್ತಿದ್ದೇನೆ. ಸಾರ್ವಜನಿಕರು ಕೂಡ ದೇಣಿಗೆ ನೀಡಿ. – ಕೆ.ಎಂ.ಕೃಷ್ಣನಾಯಕ, ಬಿಜೆಪಿ ರಾಜ್ಯ ಎಸ್‌ಟಿ ಮೋರ್ಚಾ ಪ್ರಧಾನ ಕಾರ್ಯದರ್ಶಿ.

ಇದಕ್ಕೂ ಮುನ್ನಾ ಪಟ್ಟಣದ ಗದ್ದಿಗೆ ವೃತ್ತದಲ್ಲಿ ತಿರಂಗ ಯಾತ್ರೆಗೆ ಚಾಲನೆ ನೀಡಲಾಯಿತು. ಅಲ್ಲಿಂದ ತಾಲೂಕಿನ ಬಿಜೆಪಿ, ಜೆಡಿಎಸ್ ಮುಖಂಡರು, ಕಾರ್ಯಕರ್ತರು, ಕಾಲೇಜು ವಿದ್ಯಾರ್ಥಿಗಳು, ಸಾರ್ವಜನಿಕರು ರಾಷ್ಟ್ರಧ್ವಜಗಳನ್ನು ಹಿಡಿದು ಭಾರತ್ ಮಾತಾ ಕೀ ಜೈ, ಜೈ ಜವಾನ್ ಜೈ ಕಿಸಾನ್ ಎಂದು ಘೋಷಣೆ ಕೂಗುತ್ತಾ ಪಟ್ಟಣದ ಮುಖ್ಯರಸ್ತೆ ಮೂಲಕ ಮೆರವಣಿಗೆ ಹೊರಟು ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಮುಂಭಾಗದ ವೀರಯೋಧ ಮಹೇಶ್ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ, ನಂತರ ಮೆರವಣಿಗೆಯಲ್ಲಿ ತಾಲೂಕು ಕಚೇರಿ ತಲುಪಿದರು.

ಯಾತ್ರೆಯಲ್ಲಿ ಬಿಜೆಪಿ ತಾಲೂಕು ಅಧ್ಯಕ್ಷ ಶಂಭೇಗೌಡ, ಜೆಡಿಎಸ್ ಅಧ್ಯಕ್ಷ ರಾಜೇಂದ್ರ, ಜಿಪಂ ಮಾಜಿ ಸದಸ್ಯರಾದ ಹೆಚ್.ಸಿ.ಲಕ್ಷ್ಮಣ್, ವೆಂಕಟಸ್ವಾಮಿ, ಸರಗೂರು ಪಪಂ ಅಧ್ಯಕ್ಷೆ ರಾಧಿಕಾ, ಕಸಾಪ ಅಧ್ಯಕ್ಷ ಕನ್ನಡ ಪ್ರಮೋದ್, ರೈತ ಸಂಘದ ಜಿಲ್ಲಾ ಉಪಾಧ್ಯಕ್ಷ ಪಳನಿ ಸ್ವಾಮಿ, ಟಿಎಪಿಸಿಎಂಎಸ್ ಅಧ್ಯಕ್ಷ ಬಸವರಾಜಪ್ಪ, ವೀರಶೈವ ಸಮಾಜದ ತಾಲೂಕು ಅಧ್ಯಕ್ಷ ರುದ್ರಪ್ಪ, ಮುಖಂಡರಾದ ದೊಡ್ಡನಾಯಕ, ಸಿ.ವಿ.ನಾಗರಾಜು, ಮಾರುತಿ, ಗೋಪಾಲಸ್ವಾಮಿ, ಸೋಮೇಶ್, ಸತೀಶ್, ಸಿ.ಕೆ. ಗಿರೀಶ್, ಗುರುಸ್ವಾಮಿ, ರಾಜು, ಪ್ರಶಾಂತ್, ಬಸವರಾಜು ಚಂದ್ರಮೌಳಿ, ವಿವೇಕ್, ನಾರಾಯಣಗೌಡ, ಜಯಂತ್, ಶ್ರೀಕಾಂತ್, ಗಿರಿಜಾ, ಸುನಂದ, ಮಂಜುಳಬಾಯಿ, ಮಂಜುಳ, ನಟರಾಜು, ಗಣಪತಿ, ಟಿ. ವೆಂಕಟೇಶ್, ಪೃಥ್ವಿ, ಪ್ರಶಾಂತ್, ಗೋವಿಂದರಾಜು, ಜವರಯ್ಯ, ಸಿದಗದಯ್ಯ, ಸಂತೋಷ್, ಸುಧಾಕರ್, ಮಹದೇವಪ್ಪ, ಬಿ.ಟಿ.ನರಸಿಂಹಮೂರ್ತಿ, ಅಕ್ರಮ್ ಪಾಷ, ಚಂದ್ರಶೇಖರ್, ಮಹೇಶ್, ಶಿವರಾಜಪ್ಪ, ಜವರೆಗೌಡ, ರಘು, ರಂಗಪ್ಪ, ಪಪ್ಪು ಇನ್ನಿತರರಿದ್ದರು.

ಸಮಾಜದಲ್ಲಿ ಹೆಚ್ಚುತ್ತಿರುವ ಮೌಢ್ಯ, ಕಂದಾಚಾರ

ಇನ್ಸ್‌ಪೆಕ್ಟರ್ ಧನಂಜಯ ವಿಷಾದ

ತಿ.ನರಸೀಪುರ, ಮೇ 29– ಸಮಾಜದಲ್ಲಿ ವಿದ್ಯಾವಂತರು ಮತ್ತು ಶೈಕ್ಷಣಿಕ ಮಟ್ಟ ಹೆಚ್ಚಾದಂತೆ ಮೌಢ್ಯ, ಕಂದಾಚಾರ ಮತ್ತು ಧಾರ್ಮಿಕ ಆಚರಣೆ ಹೆಚ್ಚಾಗುತ್ತಿದೆ ಎಂದು ತಿ.ನರಸೀಪುರ ಠಾಣೆ ಇನ್ಸ್‌ಪೆಕ್ಟರ್ ಧನಂಜಯ ವಿಷಾದ ವ್ಯಕ್ತಪಡಿಸಿದರು.

ಪಟ್ಟಣದ ಎವಿಎಸ್‌ಎಸ್ ಕಚೇರಿ ಸಭಾಂಗಣದಲ್ಲಿ ಭಾರತೀಯ ಬೌದ್ಧ ಮಹಾಸಭೆ ತಾಲೂಕು ಘಟಕದ ವತಿಯಿಂದ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಗಳಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಮಾಜದಲ್ಲಿ ಸುಶಿಕ್ಷಿತರ ಸಂಖ್ಯೆ ಹೆಚ್ಚಾದಂತೆಲ್ಲ ಮೌಢ್ಯ, ಧಾರ್ಮಿಕ ಮತ್ತು ಕಂದಾಚಾರಗಳ ಆಚರಣೆ ಹೆಚ್ಚಾಗುತ್ತಿದ್ದು, ಪ್ರಸ್ತುತ ಕಾಲಘಟ್ಟದಲ್ಲಿ ವಿಜ್ಞಾನಿಗಳು ಮತ್ತು ಉನ್ನತ ಹುದ್ದೆ ಪಡೆದವರು ಕೂಡ ಮೌಢ್ಯ ಆಚರಣೆಯಲ್ಲಿ ತೊಡಗುತ್ತಿರುವುದು ದೊಡ್ಡ ದುರಂತ. ಹಾಗಾಗಿ ವಿದ್ಯಾರ್ಥಿಗಳು ಮೂಢನಂಬಿಕೆ, ಮೌಢ್ಯಗಳ ಮೇಲೆ ನಂಬಿಕೆ ಇರಿಸದೆ ವೈಜ್ಞಾನಿಕವಾಗಿ ತಮ್ಮ ಸ್ವಸಾಮರ್ಥ್ಯದ ಮೇಲೆ ನಂಬಿಕೆ ಇಟ್ಟು ಚೆನ್ನಾಗಿ ಓದಿ ಉನ್ನತ ಹುದ್ದೆ ಸಂಪಾದಿಸಬೇಕು ಎಂದು ಸಲಹೆ ನೀಡಿದರು.

ತಾಲೂಕು ಸಾರ್ವಜನಿಕ ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿ ಡಾ.ಅಭಿಲಾಷ್ ಅಧ್ಯಕ್ಷತೆ ವಹಿಸಿದ್ದರು. ಸಾನಿಧ್ಯವನ್ನು ಬೌದ್ಧ ವಿಹಾರದ ಬೋಧಿ ರತ್ನ ಬಂತೇಜಿ ವಹಿಸಿದ್ದರು. ಪುರಸಭೆ ಸದಸ್ಯೆ ಬೇಬಿ ಹೇಮಂತ್, ತಾಲೂಕು ಭಾರತೀಯ ಬೌದ್ಧ ಮಹಾಸಭಾ ಅಧ್ಯಕ್ಷ ಶಂಕರಯ್ಯ, ಕಾರ್ಯದರ್ಶಿ ಮುರಳೀಧರ್, ಉಪಾಧ್ಯಕ್ಷ ಸಿದ್ದರಾಜು, ಖಜಾಂಚಿ ರಾಜಪ್ಪ, ಸಂಘಟನಾ ಕಾರ್ಯದರ್ಶಿ ಮಹೇಶ್ ಮೂರ್ತಿ, ಮುಖಂಡರಾದ ಸಿ.ಮಹದೇವಸ್ವಾಮಿ ಸೋಸಲೆ ನಾಗೇಶ್, ಉತ್ತಂಬಳ್ಳಿ ನಾಗರಾಜು, ಕಲ್ಲುಣಿ ಸಿದ್ದರಾಜು, ನಾರಾಯಣ ಮೂರ್ತಿ, ನಾಗೇಂದ್ರ, ಪ್ರಸನ್ನ, ಪ್ರಕಾಶ, ಸೋಮಶೇಖರ, ಪಿ.ಕುಮಾರಸ್ವಾಮಿ, ಮಹದೇವಯ್ಯ, ನಾಗರಾಜು, ರುದ್ರಯ್ಯ, ಹೊಸಹಳ್ಳಿ ಸಿದ್ದರಾಜು, ಎಸ್.ಆರ್.ಗ್ರಾಫಿಕ್ಸ್ ಅನಿಲ್ ರಾಜು, ಇಂಡವಾಳು ಲಿಂಗರಾಜು, ತಲಕಾಡು ಮಂಜುನಾಥ್, ಸಿದ್ದರಾಜು ಇನ್ನಿತರರಿದ್ದರು.



ತಿ.ನರಸೀಪುರದಲ್ಲಿ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ನಡೆಯಿತು.

> ಮಕ್ಕಳ ಪ್ರತಿಭೆ ಕೇವಲ ಒಂದು ಕ್ಷೇತ್ರಕ್ಕೆ ಸೀಮಿತವಾಗಬಾರದು. ಮಕ್ಕಳು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಿ ಉತ್ತಮ ಸಾಧನೆ ಮಾಡಿ ಉನ್ನತ ಹುದ್ದೆಗಳನ್ನು ಅಲಂಕರಿಸಿ ಸಮಾಜಕ್ಕೆ ಉತ್ತಮ ಸೇವೆ ನೀಡುವ ಮುಖೇನ ಖ್ಯಾತಿ ಗಳಿಸಬೇಕು. – ಸಿ.ಪ್ರಕಾಶ್, ಪುರಸಭೆ ಸಾಮಾಜಿಕ ಸ್ಥಾಯಿ ಸಮಿತಿ ಅಧ್ಯಕ್ಷ.

ಪಿಎಚ್.ಡಿ ಪದವಿ



ಮೈಸೂರು, ಮೇ 29 – ಡಾ.ವಿಜಯಲಕ್ಷ್ಮಿ ಅವರ ಮಾರ್ಗದರ್ಶನದಲ್ಲಿ ಎನ್. ರಾಚಪ್ಪ ಅವರು ಜಾನಪದ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಬಂಟ್ವಾಳ ಅಬ್ದುಲ್ ಹತ್ಯೆ ಪ್ರಕರಣ: ನಾಲ್ವರ ಬಂಧನ

ಕರಾವಳಿ 'ಸೂಕ್ಷ್ಮ' ಎಂದು ಪರಿಗಣಿಸಿದ್ದೇವೆ; ಗೃಹ ಸಚಿವ ಪರಮೇಶ್ವರ್

ಬೆಂಗಳೂರು,ಮೇ 29– ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನಲ್ಲಿ 32 ವರ್ಷದ ಅಬ್ದುಲ್ ರಹೀಂ ಹತ್ಯೆಗೆ ಸಂಬಂಧಿಸಿದಂತೆ ನಾಲ್ವರನ್ನು ಬಂಧಿಸಲಾಗಿದ್ದು, ಅವರಿಂದ ಸಂಗ್ರಹಿಸಿದ ಮಾಹಿತಿಯ ಆಧಾರದ ಮೇಲೆ ಮುಲಾಜಿಲ್ಲದೇ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಗೃಹ ಸಚಿವ ಜಿ. ಪರಮೇಶ್ವರ್ ಗುರುವಾರ ಹೇಳಿದ್ದಾರೆ.

ರಾಜ್ಯ ಸರ್ಕಾರ ಈ ಹತ್ಯೆಯನ್ನು ಬಹಳ ಗಂಭೀರವಾಗಿ ಪರಿಗಣಿಸಿದೆ ಮತ್ತು ಅಂತಹ ಕೋಮು ಚಟುವಟಿಕೆಗಳು ಹಾಗೂ ಕೊಲೆಗಳನ್ನು ನಿಗ್ರಹಿಸುವವರೆಗೆ ತಾವು ವಿಶ್ರಾಂತಿ ಪಡೆಯುವುದಿಲ್ಲ ಎಂದು ಗೃಹ ಸಚಿವರು ತಿಳಿಸಿದ್ದಾರೆ.

ತಕ್ಷಣ ಜಾರಿಗೆ ಬರುವಂತೆ ಕೋಮು ವಿರೋಧಿ ಪಡೆ ರಚಿಸುವ ಬಗ್ಗೆ ಸರ್ಕಾರಿ ಆದೇಶ ಹೊರಡಿಸಲಾಗಿದೆ. ಕೊಲೆಯ ನಂತರ ನಾಲ್ವರನ್ನು ಬಂಧಿಸಲಾಗಿದೆ ಮತ್ತು



ಅವರ ಹೇಳಿಕೆಗಳ ಆಧಾರದ ಮೇಲೆ ನಮಗೆ ಕೆಲವು ಗಂಭೀರ ಮಾಹಿತಿ ಸಿಕ್ಕಿದೆ. ಅದನ್ನು ಬಳಸಿಕೊಂಡು ಮುಂದಿನ ತನಿಖೆ ಮತ್ತು ಕ್ರಮ ಕೈಗೊಳ್ಳಲಾಗುವುದು ಎಂದು ಪರಮೇಶ್ವರ ತಿಳಿಸಿದರು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆದ ಘಟನೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ಯಾರೇ ಆಗಿರಲಿ ಯಾವುದೇ ಮುಲಾಜಿಲ್ಲದೇ ನಾವು ನಿರ್ದಯವಾಗಿ ಕ್ರಮ ಕೈಗೊಳ್ಳುತ್ತೇವೆ. ಏಕೆಂದರೆ ಇಂತಹ ಘಟನೆಗಳು ಪ್ರತಿ ಬಾರಿಯೂ ನಡೆಯುತ್ತಿದ್ದರೆ, ನಾವು ಕಣ್ಣು ಮುಚ್ಚಿ ಸುಮ್ಮನಿರಲು ಸಾಧ್ಯವಿಲ್ಲ. ಯಾವುದೇ ಕರುಣೆಯಿಲ್ಲದೆ ನಾವು ಕಾನೂನನ್ನು ಕಠಿಣಗೊಳಿಸುತ್ತೇವೆ ಎಂದು ಪರಮೇಶ್ವರ ಎಚ್ಚರಿಸಿದರು.

ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಅವರನ್ನು ಭೇಟಿಯಾದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಗೃಹ ಸಚಿವರು, ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ ಮತ್ತು ಕೋಮು ಚಟುವಟಿಕೆಗಳು ನಡೆಯುವ ಇತರ ಸ್ಥಳಗಳನ್ನು ಒಳಗೊಂಡ ಕರಾವಳಿ ಪ್ರದೇಶವನ್ನು 'ಸೂಕ್ಷ್ಮ' ಎಂದು ಪರಿಗಣಿಸಲಾಗುತ್ತದೆ ಮತ್ತು ಅಂತಹ ಚಟುವಟಿಕೆಗಳಲ್ಲಿ ಭಾಗಿಯಾಗಿರುವವರ ವಿರುದ್ಧ ನಿರ್ದಯವಾಗಿ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಕರಾವಳಿಯಲ್ಲಿ ವಾತಾವರಣ ಹಾಳಾಗಿದೆ. ಒಂದು ಕಡೆ ಕೊಲೆ ಮಾಡಿದರೆ, ಇನ್ನೊಂದು ಕಡೆ ಪ್ರತೀಕಾರ ತೀರಿಸಿ ಕೊಳ್ಳುತ್ತಾರೆ. ಅಂಥ ವಿಷಯಗಳು ಪುನರಾವರ್ತನೆಯಾಗುತ್ತವೆ.



ಜಿ.ಪರಮೇಶ್ವರ್

ಇಂತಹ ದ್ವೇಷದ ಭಾವನೆ ಇದ್ದರೆ ಸಮಾಜ ಹೇಗೆ ಉಳಿಯುತ್ತದೆ. ಯಾರಾದರೂ ಜೀವನ ನಡೆಸಲು ಸಾಧ್ಯವೇ. ಸರ್ಕಾರ ಮೂಕ ಪ್ರೇಕ್ಷಕರಾಗಿ ಮೌನವಾಗಿ ಕುಳಿತು ಕೊಳ್ಳುವುದಿಲ್ಲ, ನಾವು ಅದನ್ನು ತಡೆಯುತ್ತೇವೆ ಎಂದು ಹೇಳಿದರು.

ಇಂತಹ ಘಟನೆಗಳನ್ನು ಎದುರಿಸಲು ಮೊದಲೇ ಘೋಷಿಸಲಾದ ಕೋಮು ವಿರೋಧಿ ಪಡೆಯ ರಚನೆಯ ಬಗ್ಗೆ ತಕ್ಷಣದಿಂದ ಜಾರಿಗೆ ಬರುವಂತೆ ಸರ್ಕಾರಿ ಆದೇಶ ಹೊರಡಿಸಲಾಗಿದೆ.

ಅದನ್ನು ಹೇಗೆ ರಚಿಸುವುದು, ಯಾರು ಅದರ ನೇತೃತ್ವ ವಹಿಸುತ್ತಾರೆ, ಅವರಿಗೆ ಯಾವ ಅಧಿಕಾರ ನೀಡಬೇಕು – ಆ ಎಲ್ಲಾ ವಿಷಯದ ಬಗ್ಗೆ ನಿರ್ಧಾರ ತೆಗೆದುಕೊಳ್ಳಲು ಸಮಯ ಹಿಡಿಯಿತು. ನಾವು ಅಂತಿಮವಾಗಿ ಆದೇಶ ಹೊರಡಿಸಿದ್ದೇವೆ. ನಾವು ನಕ್ಸಲ್ ವಿರೋಧಿ ಪಡೆಯನ್ನು ವಿಸರ್ಜಿಸಲು ಯೋಜಿಸಿದ್ದೇವೆ. ಆ ನಕ್ಸಲ್ ವಿರೋಧಿ ಪಡೆಯ ಅರ್ಧದಷ್ಟು ಭಾಗವನ್ನು ಕೋಮು ವಿರೋಧಿ ಪಡೆಯಾಗಿ ಪರಿವರ್ತಿಸಲಾಗಿದೆ. ಅಗತ್ಯವಿರುವ ಎಲ್ಲಾ ಅಧಿಕಾರ ಮತ್ತು ಸೌಲಭ್ಯಗಳನ್ನು ಅವರಿಗೆ ಒದಗಿಸಲಾಗುವುದು ಎಂದು ಗೃಹ ಸಚಿವರು ತಿಳಿಸಿದರು.

ಶಿವಮೊಗ್ಗ, ಉಡುಪಿ ಮತ್ತು ದಕ್ಷಿಣ ಕನ್ನಡ 3 ಜಿಲ್ಲೆಗಳಲ್ಲಿ ಹೆಚ್ಚಿನ ಗಮನ ಹರಿಸಿ ಅವು ಪ್ರಾರಂಭವಾಗಲಿವೆ ಎಂದರು.

ದಕ್ಷಿಣ ಕನ್ನಡದಲ್ಲಿ ಕೋಮು ಭಾವನೆಗಳನ್ನು ಪ್ರಚೋದಿಸುವ ಪ್ರಯತ್ನಗಳು ನಡೆಯುತ್ತಿವೆಯೇ ಎಂಬ ಪ್ರಶ್ನೆಗೆ, ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವುದರ ಜೊತೆಗೆ ಶಾಂತಿ ಮತ್ತು ಸಮುದಾಯ ಸಭೆಗಳನ್ನು ನಡೆಸಲು ಸೂಚನೆ ನೀಡಲಾಗಿದೆ ಎಂದು ಗೃಹ ಸಚಿವರು ತಿಳಿಸಿದರು.

ಇಂದು ಹಸಿಶುಂಠಿ ಖರೀದಿ ಕೇಂದ್ರ ಆರಂಭ



ಮೈಸೂರು, ಮೇ.29(ಎಂಟಿವೈ)– ರೈತರು ಬೆಳೆದ ಎಫ್‌ಎಕ್ಯೂ ಗುಣಮಟ್ಟದ ಹಸಿಶುಂಠಿಯನ್ನು ಖರೀದಿಸಲು ಕೃಷಿ ಇಲಾಖೆ ಮೈಸೂರು ಜಿಲ್ಲೆಯ ಆರು ತಾಲೂಕಿನಲ್ಲಿ ನಾಳೆ(ಮೇ 30)ಯಿಂದ ಶುಂಠಿ ಖರೀದಿ ಕೇಂದ್ರ ಆರಂಭಿಸಲಿದೆ.

ಕೃಷಿ ಇಲಾಖೆ, ತೋಟಗಾರಿಕಾ ಇಲಾಖೆಯ ಸಹಯೋಗದಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳವು ಮಾರುಕಟ್ಟೆ ಮಧ್ಯಪ್ರವೇಶ ಯೋಜನೆಯಡಿ ಮೈಸೂರು ಜಿಲ್ಲೆಯ ಸಂತೆಸರಗೂರು, ಹೆಚ್.ಡಿ.ಕೋಟೆ, ಹುಣಸೂರು, ಪಿರಿಯಾಪಟ್ಟಣ, ಕೆ.ಆರ್.ನಗರ, ನಂಜನಗೂಡಿನ ಟಿಎಪಿಸಿಎಂಎಸ್ ಆವರಣದಲ್ಲಿ ಎಫ್‌ಎಕ್ಯೂ ಗುಣಮಟ್ಟದ ಹಸಿಶುಂಠಿಯನ್ನು ಖರೀದಿಸಲು ಖರೀದಿ ಕೇಂದ್ರ ಸ್ಥಾಪಿಸಿದೆ. ಕೇಂದ್ರ ಸರ್ಕಾರ ಒಂದು ಕ್ವಿಂಟಾಲ್ ಹಸಿಶುಂಠಿಗೆ 2445 ರೂ ದರ ನಿಗದಿ ಮಾಡಿದ್ದು, ಖರೀದಿ ಕೇಂದ್ರದಲ್ಲೂ ಅದೇ ದರದಲ್ಲಿ ಹಸಿಶುಂಠಿ ಖರೀದಿಸಲಾಗುತ್ತದೆ.

ಬೆಂಬಲ ಬೆಲೆಗೆ ಹಸಿಶುಂಠಿಯನ್ನು ಖರೀದಿ ಕೇಂದ್ರದಲ್ಲಿ ಮಾರಾಟ ಮಾಡುವುದಕ್ಕೆ ರೈತರು ಪಹಣಿ, ಆರ್‌ಟಿಸಿ, ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಪುಸ್ತಕದ ಜೆರಾಕ್ಸ್ ಪ್ರತಿ ಹಾಗೂ ಭಾವಚಿತ್ರದೊಂದಿಗೆ 'ಫ್ರೂಟ್ಸ್' ತಂತ್ರಾಂಶದ ರೈತ ನೋಂದಣಿ ಸಂಖ್ಯೆ(ಎಫ್‌ಐಡಿ)ಯನ್ನು ನೀಡಬೇಕಾಗಿದೆ. ಎಫ್‌ಐಡಿ ಇಲ್ಲದ ರೈತರು ಹೋಬಳಿ ಅಥವಾ ತಾಲೂಕು ಕೃಷಿ ಇಲಾಖೆಯ ಕಚೇರಿ ಸಂಪರ್ಕಿಸಿ ಎಫ್‌ಐಡಿ ಮಾಡಿಸಿಕೊಂಡ ಬಳಿಕ ನೋಂದಣಿ ಮಾಡಿಕೊಂಡು ಹಸಿಶುಂಠಿ ಮಾರಾಟ ಮಾಡಬಹುದಾಗಿದೆ.

ಬೆಳೆ ಸಮೀಕ್ಷೆ ವೇಳೆ ಆರ್‌ಟಿಸಿಯಲ್ಲಿ ಹಸಿಶುಂಠಿ ಎಂದು ನಮೂದಿಸಿರುವ ರೈತರು ಮಾತ್ರ ಖರೀದಿ ಕೇಂದ್ರಕ್ಕೆ ಹಸಿಶುಂಠಿ ಮಾರಾಟ ಮಾಡಬಹುದಾಗಿದೆ. ಮಾರುಕಟ್ಟೆ ಮಧ್ಯಪ್ರವೇಶ ಯೋಜನೆಯಡಿ ಒಂದು ಎಕರೆಗೆ 30 ಕ್ವಿಂಟಾಲ್ ನಂತೆ ರೈತರೊಬ್ಬರು 60 ಕ್ವಿಂಟಾಲ್ ಎಫ್‌ಎಕ್ಯೂ ಗುಣಮಟ್ಟದ ಹಸಿಶುಂಠಿ ಮಾರಾಟ ಮಾಡಲು ಅವಕಾಶ ನೀಡಲಾಗಿದೆ. ಖರೀದಿ ಕೇಂದ್ರಕ್ಕೆ ಹಸಿಶುಂಠಿ ಮಾರಾಟ ಮಾಡಿದ ರೈತರಿಗೆ ಅವರ ಆಧಾರ್ ಕಾರ್ಡ್ ಜೋಡಣೆ ಮಾಡಿರುವ ಬ್ಯಾಂಕ್ ಖಾತೆಗೆ ಶುಂಠಿಯ ಹಣ ಜಮೆ ಮಾಡಲಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳ ನಿಯಮಿತದ ಶಾಖಾ ವ್ಯವಸ್ಥಾಪಕ 94498 64441 ಸಂಪರ್ಕಿಸಬಹುದಾಗಿದೆ.

ಪ್ರಸಕ್ತ ಶೈಕ್ಷಣಿಕ ಚಟುವಟಿಕೆಗೆ ಚಾಲನೆ



ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳ ದಿವ್ಯ ಸಾನ್ನಿಧ್ಯದಲ್ಲಿ ಸುತ್ತೂರು ಜೆಎಸ್‌ಎಸ್ ವಸತಿ ಶಾಲೆಯ 2025–26ನೇ ಸಾಲಿನ ಶೈಕ್ಷಣಿಕ ವರ್ಷದ ಪ್ರಾರಂಭಕ್ಕೆ ಚಾಲನೆ ನೀಡಲಾಯಿತು. ಚಿತ್ರದಲ್ಲಿ ಹರವೆ ಮಠದ ಶ್ರೀ ಸರ್ಪಭೂಷಣ ಸ್ವಾಮಿಗಳು, ತೋಟಗಾರಿಕೆ ಇಲಾಖೆಯ ಜಂಟಿ ನಿರ್ದೇಶಕ ಹೆಚ್.ಎಂ. ನಾಗರಾಜು, ವಿಶ್ರಾಂತ ಕುಲಪತಿ ಪ್ರೊ ಮಲ್ಲೇಪುರಂ ಜಿ. ವೆಂಕಟೇಶ್, ಮಲ್ಲಯ್ಯ ಸ್ವಾಮಿಗಳು, ಮಾಜಿ ಶಾಸಕ ಮಹಿಮ ಪಟೇಲ್, ಕರ್ನಾಟಕ ಸರ್ಕಾರದ ನಿವೃತ್ತ ಹೆಚ್ಚುವರಿ ಮುಖ್ಯಕಾರ್ಯದರ್ಶಿ ಎಂ. ಮದನ್ ಗೋಪಾಲ್, ಸುತ್ತೂರು ಜೆಎಸ್‌ಎಸ್ ಸಂಸ್ಥೆಗಳ ಆಡಳಿತಾಧಿಕಾರಿ ಎಸ್.ಪಿ. ಉದಯಶಂಕರ್, ಸಂಸ್ಥೆಯ ಮುಖ್ಯಸ್ಥರು ಹಾಗೂ ವಿದ್ಯಾರ್ಥಿಗಳಿದ್ದಾರೆ.

ಕೆಎಸ್‌ಆರ್‌ಟಿಸಿ ಡ್ರೈವರ್, ಕಂಡಕ್ಟರ್‌ಗಳಿಗೆ ರಸ್ತೆ ಸುರಕ್ಷತಾ ಜಾಗೃತಿ



ಮೈಸೂರು, ಮೇ 29(ಆರ್‌ಕೆ)– ಸಂಚಾರ ನಿಯಮ ಪಾಲನೆ ಮತ್ತು ರಸ್ತೆ ಸುರಕ್ಷತಾ ಕ್ರಮಗಳ ಕುರಿತು ಕೆಎಸ್‌ಆರ್‌ಟಿಸಿ ಬಸ್ ಚಾಲಕರು ಹಾಗೂ ನಿರ್ವಾಹಕರಿಗೆ ಇಂದು ಜಾಗೃತಿ ಮೂಡಿಸಲಾಯಿತು.

ಮೈಸೂರಿನ ಬನ್ನಿಮಂಟಪದಲ್ಲಿರುವ ಕೆಎಸ್‌ಆರ್‌ಟಿಸಿ ಬಸ್ ಡಿಪೋ ಸಭಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಎನ್.ಆರ್. ಸಂಚಾರ ಠಾಣೆ ಸಬ್ ಇನ್ಸ್‌ಪೆಕ್ಟರ್ ಸಿದ್ದೇಶ್ ಅವರು ಸಂಚಾರ ನಿಯಮಗಳ ಬಗ್ಗೆ ಉಪನ್ಯಾಸ ನೀಡಿದರು. ತಾವು ಚಾಲನೆ ಮಾಡುವ ವಾಹನಗಳು ರಸ್ತೆಯಲ್ಲಿ ಚಲಿಸಲು ಯೋಗ್ಯವಾಗಿವೆಯೇ ಎಂಬುದರ ಬಗ್ಗೆ ಫಿಟ್‌ನೆಸ್ ಸರ್ಟಿಫಿಕೇಟ್ ಹೊಂದಿದ್ದರೂ, ನಿತ್ಯ ಪರೀಕ್ಷಿಸಿಕೊಂಡು ಖಾತರಿಪಡಿಸಿಕೊಳ್ಳಬೇಕು. ಏಕೆಂದರೆ ಪ್ರಯಾಣಿಸುವ 50 ಮಂದಿಯ ಸುರಕ್ಷತೆ ಜವಾಬ್ದಾರಿ ನಿಮ್ಮದಾಗಿರುತ್ತದೆ ಎಂದರು.

ಅತೀ ವೇಗ, ಅಜಾಗರೂಕತೆ ಚಾಲನೆ, ಏಕಾಗ್ರತೆ ಇಲ್ಲದೇ ಚಂಚಲ ಮನಸ್ಸಿನಿಂದ ವಾಹನ ಚಾಲನೆ ಮಾಡುವುದು ಅಪಾಯಕಾರಿಯಾಗಿದ್ದು, ಅಪಘಾತಕ್ಕೆ ಕಾರಣವಾಗುತ್ತದೆಯಾದ್ದರಿಂದ ಬಸ್ ಚಾಲನೆ ಮಾಡುವಾಗ ಕಟ್ಟೆಚ್ಚರ ವಹಿಸುವುದು ಅತ್ಯಗತ್ಯ ಎಂದು ಅವರು ತಿಳಿಹೇಳಿದರು.

ಸಿಗ್ನಲ್ ಜಂಪ್, ಬಸ್ ಬೇ ಸ್ಥಳ ಬಿಟ್ಟು ಬೇರೆಡೆ ಬಸ್ ನಿಲ್ಲಿಸುವುದು, ಸಿಗ್ನಲ್ ಲೈಟ್ ಸಮೀಪವೇ ನಿಲ್ಲಿಸಿ ಪ್ರಯಾಣಿಕರನ್ನು ಇಳಿಸುವುದು, ಹತ್ತಿಸಿಕೊಳ್ಳುವುದು, ಹೈಬೀಮ್ ಲೈಟ್ ಅನಗತ್ಯ ಬಳಕೆ, ನಿರಂತರವಾಗಿ ಹಾರ್ನ್ ಮಾಡಿ ಕಿರಿಕಿರಿ ಉಂಟು ಮಾಡುವುದು, ವಾಹನ ದಟ್ಟಣೆ ಸ್ಥಳದಲ್ಲಿ ಬಸ್ ನಿಲ್ಲಿಸುವುದರಿಂದ ಇತರ ವಾಹನ ಸವಾರರು, ಚಾಲಕರಿಗೆ ತೊಂದರೆಯಾಗುತ್ತದೆ ಎಂಬುದು ನಿಮ್ಮ ಗಮನದಲ್ಲಿರಲಿ ಎಂದು ಸಿದ್ದೇಶ್ ಸಲಹೆ ನೀಡಿದರು.

ಅಪಘಾತ ರಹಿತ ಬಸ್ ಚಾಲನೆ ಮಾಡುವ ಜೊತೆಗೆ ಪ್ರಯಾಣಿಕರು ಹಾಗೂ ಸಾರ್ವಜನಿಕರೊಂದಿಗೂ ಸಮಯೋಚಿತವಾಗಿ ವರ್ತಿಸಬೇಕು ಹಾಗೂ ಅವರ ಸುರಕ್ಷತೆ ನಿಮ್ಮ ಜವಾಬ್ದಾರಿಯಾಗಿರುವುದರಿಂದ ಜಾಗರೂಕತೆಯಿಂದ ವಾಹನ ಚಾಲನೆ ಮಾಡಬೇಕೆಂದು ಇದೇ ಸಂದರ್ಭ ಅವರು ತಿಳಿಸಿದರು.

ಕೆಎಸ್‌ಆರ್‌ಟಿಸಿ ಗ್ರಾಮಾಂತರ ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿ ಶ್ರೀನಿವಾಸ್, ಡಿಟಿಓ ಗೀತಾ, ಕಾರ್ಮಿಕರ ಕಲ್ಯಾಣಾಧಿಕಾರಿ ವೇದಾವತಿ ಹಾಗೂ ಇತರರು ಈ ಸಂದರ್ಭ ಉಪಸ್ಥಿತರಿದ್ದರು.

ಸಮರ್ಥನಂ ಬುದ್ಧಿ ವಿಕಲಚೇತನ ಮಕ್ಕಳ ಶಾಲಾ ಪ್ರಾರಂಭೋತ್ಸವ



ಮೈಸೂರು, ಮೇ 29– ಮೈಸೂರು ನಗರದ ವಿಜಯನಗರ 2ನೇ ಹಂತದಲ್ಲಿರುವ ಸಮರ್ಥನಂ ಬುದ್ಧಿ ವಿಕಲಚೇತನರ ಶಾಲೆಯಲ್ಲಿ 2025–26ನೇ ಸಾಲಿನ ಶಾಲಾ ಪ್ರಾರಂಭೋತ್ಸವ ಕಾರ್ಯಕ್ರಮ ನಡೆಯಿತು.

ಮಕ್ಕಳನ್ನು ಸ್ವಾಗತಿಸುವ ಸಲುವಾಗಿ ಬ್ಯಾನರ್, ಬಂಟಿಂಗ್ಸ್, ತೋರಣ ಹಾಗೂ ಆಕರ್ಷಕ ಭಿತ್ತಿ ಫಲಕಗಳನ್ನು ಪ್ರದರ್ಶಿಸಲಾಗಿತ್ತು. ಜೊತೆಗೆ ಶಾಲೆಯ ವಿಶೇಷ ಮಕ್ಕಳಿಗೆ ಹೂ ಮತ್ತು ಚಾಕೊಲೇಟ್ ನೀಡುವ ಮೂಲಕ ಶಾಲೆಯ ಶಿಕ್ಷಕರು ಮತ್ತು ಸಿಬ್ಬಂದಿ ಹೃತ್ಪೂರ್ವಕವಾಗಿ ಸ್ವಾಗತ ಕೋರಿದರು.


ಸಮರ್ಥನಂ ಸಂಸ್ಥೆಯ ಮೈಸೂರು ವಿಭಾಗೀಯ ಸಂಯೋಜಕ ಶಿವರಾಜು ಮಾತನಾಡಿ, ವಿಶೇಷ ಶಾಲೆಯ ಮಕ್ಕಳಿಗೆ ಸದರಿ ಶೈಕ್ಷಣಿಕ ಸಾಲಿನಲ್ಲಿ ವಿವಿಧ ಹೊಸ ಚಟುವಟಿಕೆಗಳನ್ನು ತರಲಾಗಿದೆ. ವಿಶೇಷ ಚೇತನ ವೃತ್ತಿಪರ ವಿದ್ಯಾರ್ಥಿಗಳಿಗೆ ಸ್ವಂತ ಉದ್ಯಮಕ್ಕೆ ಪೂರಕವಾದ ಚಟುವಟಿಕೆ ಅಲ್ಲದೆ ಈ ವರ್ಷದಿಂದ ಶಾಲೆಯಲ್ಲಿ ಫಿಸಿಯೋಥೆರಪಿ ಘಟಕವನ್ನು ಸ್ಥಾಪಿಸಲಾಗಿದೆ. ಇದರಿಂದ ಭೌತಿಕ ಹಾಗೂ ದೈಹಿಕ ನ್ಯೂನತೆ ಇರುವ ವಿಶೇಷ ಮಕ್ಕಳಿಗೆ ಅನುಕೂಲ ಆಗುತ್ತದೆ ಎಂದು ಹೇಳಿದರು.

ಮುಖ್ಯೋಪಾಧ್ಯಾಯಿನಿ ಭ್ರಮರಂಭ, ವಿಶೇಷ ಶಿಕ್ಷಕರಾದ ಪದ್ಮ, ಉನ್ನತ ಶಿಕ್ಷಣ ವಿಭಾಗದ ಸಂಯೋಜಕಿ ಚೈತ್ರಕುಮಾರಿ, ಸಿಬ್ಬಂದಿಯಾದ ಮಂಜುಳಾ, ಮಹದೇವ ಮತ್ತಿತರರು ಉಪಸ್ಥಿತರಿದ್ದರು.

ಕೊರೊನಾ ಪಾಸಿಟಿವಿಟಿ ರೇಟ್ ಮತ್ತೆ ಹೆಚ್ಚಳ: ಬೆಳಗಾವಿಯಲ್ಲಿ ಸೋಂಕಿಗೆ 72 ವರ್ಷದ ವ್ಯಕ್ತಿ ಸಾವು

ಬೆಳಗಾವಿ, ಮೇ 29– ಕೊರೊನಾ ಮಹಾಮಾರಿಗೆ ಬೆಳಗಾವಿಯಲ್ಲಿ ಮೊದಲ ಬಲಿಯಾಗಿದ್ದು, ಬೆಳಗಾವಿ ಬೀಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ 70 ವರ್ಷದ ವೃದ್ಧ ಬಲಿಯಾಗಿದ್ದಾರೆ.

ಬುಧವಾರದಂದು ಕೋವಿಡ್ ಪಾಸಿಟಿವ್ ಎಂದು ತಪಾಸಣೆಯಲ್ಲಿ ಕಂಡುಬಂದಿತ್ತು. ತಡರಾತ್ರಿ ಚಿಕಿತ್ಸೆ ಫಲಿಸದೆ ವೃದ್ಧ ಮೃತಪಟ್ಟಿದ್ದಾರೆ. ಬೆಳಗಾವಿ ತಾಲೂಕಿನ ಬೆನಕನಹಳ್ಳಿ ಗ್ರಾಮದ ನಿವಾಸಿ ಎಂದು ಗುರುತಿಸಲಾಗಿತ್ತು. ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ವೃದ್ಧನಿಗೆ ಚಿಕಿತ್ಸೆಗೆ ಅಂತಾ ಬೀಮ್ಸ್ ಆಸ್ಪತ್ರೆಯಲ್ಲಿ ದಾಖಲು ಮಾಡಿದ್ದಾರೆ.



ಕೋವಿಡ್ ತಪಾಸಣೆ ಮಾಡಿದಾಗ ಪಾಸಿಟಿವ್ ಎಂದು ಗೊತ್ತಾದ ತಕ್ಷಣವೇ ಕೋವಿಡ್ ವಾರ್ಡ್‌ಗೆ ಶಿಫ್ಟ್ ಮಾಡಲಾಗಿತ್ತು. ಚಿಕಿತ್ಸೆ ಫಲಿಸದ ಕಾರಣ 70 ವರ್ಷದ ವೃದ್ಧ ಮೃತಪಟ್ಟಿದ್ದಾರೆ. ಕೋವಿಡ್ ನಿಯಮಾವಳಿ ಪ್ರಕಾರವೇ ರಾತ್ರಿಯೇ ಕುಟುಂಬಸ್ಥರು ಅಂತ್ಯಕ್ರಿಯೆ ನೆರವೇರಿಸಿದ್ದಾರೆ.

ರಾಜ್ಯದ ಹಲವು ಜಿಲ್ಲೆಗಳಲ್ಲಿ ಕೊವಿಡ್–19 ಸೋಂಕು ಕಂಡು ಬಂದಿದ್ದು, ಸೈಲೆಂಟ್ ಆಗಿಯೇ ಮತ್ತೆ ರಾಜ್ಯದಲ್ಲಿ ತನ್ನ ಅಧಿಪತ್ಯ ಸಾಧಿಸುತ್ತಿದೆ. ನಿನ್ನೆ ಬೆಳಗ್ಗೆವರೆಗೂ ಒಟ್ಟು 100 ಮಂದಿಯಲ್ಲಿ ಕೋವಿಡ್ ಸೋಂಕು ದೃಢವಾಗಿತ್ತು.

ಸಂಜೆಯೊಳಗೆ ಮತ್ತಷ್ಟು ಪ್ರಕರಣಗಳು ಪತ್ತೆಯಾಗಿವೆ. ಆದರೆ ಕೊರೊನಾ ಮಹಾಮಾರಿಗೆ ಬೆಳಗಾವಿಯಲ್ಲಿ ಮೊದಲ ಬಲಿಯಾಗಿದೆ.

ಮಕ್ಕಳಲ್ಲಿ ಸದ್ಗುಣಗಳ ಬೆಳೆಸುವುದರಲ್ಲಿ ಶಿಕ್ಷಕರ ಪಾತ್ರ ಹಿರಿದು: ಪೇಜಾವರ ಶ್ರೀಗಳು

ಮೈಸೂರು, ಮೇ 29(ಎಸ್‌ಬಿಡಿ)– ಮಕ್ಕಳಲ್ಲಿ ಪರಸ್ಪರ ಗೌರವಿಸುವ ಗುಣವನ್ನು ಬೆಳೆಸಬೇಕು ಎಂದು ಉಡುಪಿ ಪೇಜಾವರ ಮಠಾಧೀಶರಾದ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದಂಗಳವರು ನುಡಿದರು.

ಮೈಸೂರಿನ ಬಿಎಸ್‌ಎಸ್ ವಿದ್ಯೋದಯ ಶಾಲೆಯಲ್ಲಿ ಇತ್ತೀಚೆಗೆ ನಡೆದ ಪೇಜಾವರ ಶಿಕ್ಷಣ ಸಂಸ್ಥೆಗಳ ಶೈಕ್ಷಣಿಕ ಸಮ್ಮೇಳನದಲ್ಲಿ ಪಾಲ್ಗೊಂಡು ಮಾತನಾಡಿದ ಶ್ರೀಗಳು, ಮಕ್ಕಳಲ್ಲಿ ಉತ್ತಮ ಆಚಾರ–ವಿಚಾರ, ನಡೆ–ನುಡಿ, ಭ್ರಾತೃತ್ವ ಭಾವ, ಸಂಸ್ಕಾರವನ್ನು ಬೆಳೆಸುವ ಶಿಕ್ಷಣ ನೀಡಬೇಕು. ಪರಸ್ಪರ ಗೌರವಿಸುವ ಉತ್ತಮ ಪ್ರಜೆಗಳನ್ನಾಗಿ ರೂಪಿಸಬೇಕು. ಈ ನಿಟ್ಟಿನಲ್ಲಿ ಶಿಕ್ಷಕರಿಗೆ ಹೆಚ್ಚಿನ ಜವಾಬ್ದಾರಿ ಇದೆ ಎಂದರು.



ಮೈಸೂರಿನ ಬಿಎಸ್‌ಎಸ್ ವಿದ್ಯೋದಯ ಶಾಲೆಯಲ್ಲಿ ನಡೆದ ಪೇಜಾವರ ಶಿಕ್ಷಣ ಸಂಸ್ಥೆಗಳ ಶೈಕ್ಷಣಿಕ ಸಮ್ಮೇಳನವನ್ನು ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಉದ್ಘಾಟಿಸಿದರು.

ನಾವು ಭಗವಂತನನ್ನು ಎಲ್ಲೆಡೆ ಕಾಣಬೇಕು. ಮಾತೃ ದೇವೋಭವ, ಪಿತೃ ದೇವೋಭವ, ಅತಿಥಿ ದೇವೋಭವದ ಜೊತೆಗೆ ರಾಷ್ಟ್ರ ದೇವೋಭವ ಎಂಬ ಭಾವನೆಯನ್ನು ಮಕ್ಕಳಲ್ಲಿ ಬೆಳೆಸಬೇಕು. ಶಿಕ್ಷಕರು ಪಠ್ಯ ಬೋಧನೆಯೊಂದಿಗೆ ಮಕ್ಕಳಲ್ಲಿ ರಾಷ್ಟ್ರಪ್ರೇಮ ತುಂಬಬೇಕು. ಅದೂ ಕೂಡ ರಾಷ್ಟ್ರಸೇವೆಯೇ ಆಗಿದೆ. ರಾಷ್ಟ್ರಭಕ್ತಿ ಬೆಳೆಸುವುದರ ಜೊತೆಗೆ ದೇಶದ್ರೋಹ ಭಾವನೆ ಬಿತ್ತದಂತೆ ನಿಗಾ ವಹಿಸುವುದು ಬಹಳ ಮುಖ್ಯ ಎಂದು ಕಿವಿಮಾತು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಖ್ಯಾತ ಉದ್ಯಮಿ ಜಗನ್ನಾಥ ಶೆಣೈ ಮಾತನಾಡಿ, ಈಗಿನ ಪರಿಸ್ಥಿತಿಯಲ್ಲಿ ಮಕ್ಕಳಿಗೆ ಭಾರತದ ಪರಂಪರೆ, ಇತಿಹಾಸದ ಬಗ್ಗೆ ಮನದಟ್ಟು ಮಾಡುವ ಮೂಲಕ ರಾಷ್ಟ್ರಪ್ರೇಮ ಬೆಳೆಸುವುದು ಅತ್ಯವಶ್ಯ. ಐಕ್ಯತೆ ಕಾಯ್ದುಕೊಂಡು ದೇಶದ ಅಭಿವೃದ್ಧಿಗೆ ಶ್ರಮಿಸುವ ಉತ್ತಮ ಪ್ರಜೆಗಳನ್ನಾಗಿ ರೂಪಿಸುವ ಮಹತ್ತರ ಜವಾಬ್ದಾರಿ ಶಿಕ್ಷಕರದ್ದಾಗಿದೆ ಎಂದರು.

ವಿಜಯ ವಿಠಲ ವಿದ್ಯಾಸಂಸ್ಥೆಯ ಗೌರವಾಧ್ಯಕ್ಷರೂ ಆದ ಬಿಎಸ್‌ಎಸ್ ವಿದ್ಯೋದಯದ ಗೌರವ ಕಾರ್ಯದರ್ಶಿ ಆರ್.ವಾಸುದೇವ್ ಭಟ್ ಮಾತನಾಡಿ, ರಾಜ್ಯದೆಲ್ಲೆಡೆ ಇರುವ ಪೇಜಾವರ ಶಿಕ್ಷಣ ಸಂಸ್ಥೆಗಳ ಶಿಕ್ಷಣ ಕ್ರಮದಲ್ಲಿ ಏಕತಾನತೆ ಸಾಧಿಸುವ ಉದ್ದೇಶದಿಂದ ಸಂವರ್ಧನ ಕಾರ್ಯಕ್ರಮ ಆಯೋಜಿಸಿದ್ದಾಗಿ ತಿಳಿಸಿದರು. ವಿಜಯ ವಿಠಲ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಸಿ.ಎ.ವಿಶ್ವನಾಥ್ ಮಾತನಾಡಿದರು.

ಇದೇ ವೇಳೆ ಬಿಎಸ್‌ಎಸ್ ವಿದ್ಯೋದಯಕ್ಕೆ ನೆರವು ನೀಡಿದ ದಾನಿಗಳನ್ನು ಶ್ರೀಗಳು ಅಭಿನಂದಿಸಿದರು. ಶ್ರೀ ರಾಮಕೃಷ್ಣ ಆಶ್ರಮದ ಸ್ವಾಮಿ ಯುಕ್ತೇಶಾನಂದ ಜಿ ಮಹಾರಾಜ್ ಅವರು 'ಆಧ್ಯಾತ್ಮಿಕ ಒಳನೋಟಗಳು' ಕುರಿತು, ಆರ್‌ಎಸ್‌ಎಸ್ ಹಿರಿಯ ಮುಖಂಡರಾದ ಸು.ರಾಮಣ್ಣ ಅವರು 'ರಾಷ್ಟ್ರೀಯತಾವಾದಿ ದೃಷ್ಟಿಕೋನಗಳು' ಕುರಿತು ಮಾತನಾಡಿದರು. ನಿವೃತ್ತ ಕ್ಯಾಪ್ಟನ್ ನವೀನ್ ಎ.ನಾಗಪ್ಪ 'ಆಪರೇಷನ್ ಸಿಂಧೂರ್' ಕಾರ್ಯಾಚರಣೆ ಕುರಿತು ಅಭಿಪ್ರಾಯ ಹಂಚಿಕೊಂಡರು. ದಿಶಾ ಸ್ವಯಂಸೇವಕರು ಸಂವಾದ ನಡೆಸಿದರು. ಖ್ಯಾತ ನೃತ್ಯ ಕಲಾವಿದ ಶ್ರೀಧರ್ ಜೈನ್ ಹಾಗೂ ತಂಡದ ಕಲಾವಿದರು 'ಹೆಜ್ಜೆ–ಗೆಜ್ಜೆ' ನೃತ್ಯ ಪ್ರದರ್ಶನ ನೀಡಿದರು.

ಎರಡನೇ ದಿನ ಸಂಪನ್ಮೂಲ ವ್ಯಕ್ತಿಗಳಾದ ದೀಪಿಕಾ ಪಾಂಡುರಂಗಿ, ಪ್ರೊ.ಎಂ.ಕೃಷ್ಣೇಗೌಡ, ವಿ.ಬಿ.ಆರತಿ, ಉಮೇಶ್ ಕುಮಾರ್, ತಾರಾ ಕೆ. ಆಚಾರಿ ಹಾಗೂ ಚೇತನ್ ವಿವಿಧ ವಿಷಯಗಳ ಕುರಿತು ಉಪನ್ಯಾಸ ನೀಡಿದರು. ಕಡೆಯಲ್ಲಿ ಶ್ರೀಗಳು ಮತ್ತೆ ಆಶೀರ್ವಚನ ನೀಡಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಭೈರವಂ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಏಸ್ (ತ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ರೆಟ್ರೋ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಹಿಟ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಟಕೀಲಾ (ಕ)	4 ಪ್ರದರ್ಶನಗಳು
ರಾಜಕಮಲ್	
ಜಿನ್ನ್ (ತ)	4 ಪ್ರದರ್ಶನಗಳು
ಸಂಗಂ	
ಮಂಡ್ಯ (ಕ)	4 ಪ್ರದರ್ಶನಗಳು
ಲಿಡೋ	
ಠಾಣೆ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ರೆಟ್ರೋ (ತ): ಬೆ.9.40ಕ್ಕೆ, ಮ.1ಕ್ಕೆ, ರಾ.7ಕ್ಕೆ, ಥಂಡರ್‌ಬೋಲ್ಟ್ಸ್ (3ಡಿ)(ಇಂ): ಸಂ.4.20ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ಥಂಡರ್‌ಬೋಲ್ಟ್ಸ್ (3ಡಿ)(ಇಂ): ಬೆ10.25ಕ್ಕೆ, ಯುದ್ಧಕಾಂಡ 2 (ಕ): ಮ.1.05ಕ್ಕೆ, ಸಂ.4.05ಕ್ಕೆ, ತುಡಾರಂ (ಮ): ರಾ.7ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 3	ಹಿಟ್ ದಿ ಥರ್ಡ್ ಕೇಸ್ (ತೆ): ಬೆ.10ಕ್ಕೆ, ಮ.3.55ಕ್ಕೆ, ರಾ.7.05ಕ್ಕೆ, ರಾ.10.15ಕ್ಕೆ, ಟೂರಿಸ್ಟ್ ಫ್ಯಾಮಿಲಿ (ತ): ಮ.1.10ಕ್ಕೆ.
ಸ್ಕ್ರೀನ್ 4	ಪಪ್ಪಿ (ಕ): ಬೆ10.30ಕ್ಕೆ, ರೈಡ್ 2 (ಹಿಂ): ಮ.1ಕ್ಕೆ, ರಾ.7.25ಕ್ಕೆ, ರಾ.10.25ಕ್ಕೆ, ರೆಟ್ರೋ (ತ): ಸಂ.4.05ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪ್ರೀತಿಯ ಹುಚ್ಚ (ಕ): ಬೆ.11ಕ್ಕೆ, ರಿಕ್ಷಾ ಚಾಲಕ (ಕ): ಮ.1.35ಕ್ಕೆ, ಕೋರ (ಕ): ಸಂ.6.35ಕ್ಕೆ, ಖದೀಮ (ಕ): ಸಂ.6.35ಕ್ಕೆ, ಟೆನ್ ಅವರ್ಸ್ (ತ): ರಾ.9.15ಕ್ಕೆ.
ಸ್ಕ್ರೀನ್ 2	ಯುದ್ಧಕಾಂಡ 2 (ಕ): ಮ.1ಕ್ಕೆ, ಸಂ.6.35ಕ್ಕೆ, ಒಡೆಲ್ಲಾ (ತೆ): ಮ.3.45ಕ್ಕೆ, ರಾ.9.20ಕ್ಕೆ.
ಸ್ಕ್ರೀನ್ 3	ವೀರ ಚಂದ್ರಹಾಸ (ಕ): ಮ.1ಕ್ಕೆ, ಮ.3.55ಕ್ಕೆ, ಗುಡ್ ಬ್ಯಾಡ್ ಅಗ್ಲಿ (ತ): ಸಂ.6.50ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಯುದ್ಧಕಾಂಡ 2 (ಕ): ಬೆ.10.50ಕ್ಕೆ, ವಾಮನ (ಕ): ಮ.1.35ಕ್ಕೆ, ಸಂ.4.10ಕ್ಕೆ, ಅರ್ಜುನ್ s/o ವೈಜಯಂತಿ (ತೆ): ಸಂ.6.45ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ಸಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ಬೇಸಿಗೆ ರೇಸ್



1ನೇ ದಿನ, ಶುಕ್ರವಾರ, 30–5–2025

ಇಂದಿನ ರೇಸ್‌ಗೆ ನಮ್ಮ ಆಯ್ಕೆ

ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ

I. ಬಿಲೌಡ್ ಪ್ರಿನ್ಸ್ ಪ್ಲೇಟ್–1100 ಮೀ. 3 ವರ್ಷದ (ಟರ್ಮ್ಸ್) ಮ.2.00ಕ್ಕೆ
1. ಮೈಸೂರ್ ಫರೋ 2. ಏರಿಯನ್ 3. ಮಿಸ್ಟಿಕ್ ವಾರಿಯರ್

II. ದುಬಾರೆ ಫಾರೆಸ್ಟ್ ಪ್ಲೇಟ್ ಡಿII–1200 ಮೀ. ರೇಟೆಡ್ 00 ರಿಂದ 25. ಮ.2.30ಕ್ಕೆ
1. ಧುರಂದರ್ 2. ಬುಂದೇಲ್ ಖಂಡ್ ಕ್ವೀನ್ 3. ಡಿ ಗೋಲ್ಡ್ ಕಪ್

III ಮೇಲುಕೋಟೆ ಪ್ಲೇಟ್–1400 ಮೀ. ರೇಟೆಡ್ 20 ರಿಂದ 45. ಮ.3.00ಕ್ಕೆ
1. ವಾಲ್ಬರ್ 2. ಸರ್ವೋತ್ತಮ್ 3. ಸರ್‌ದಾರ್

IV. ದುಬಾರೆ ಫಾರೆಸ್ಟ್ ಪ್ಲೇಟ್ ಡಿI–1200 ಮೀ. ರೇಟೆಡ್ 00 ರಿಂದ 25. ಮ.3.30ಕ್ಕೆ
1. ಅಂಕುಶ್ 2. ಜಂಟಲ್ ಮೆನ್ ವರ್ಡ್ 3. ಫೈರ್ ಬೋಲ್ಟ್

V. ವರಾಹಿ ಟ್ರೋಫಿ–1200 ಮೀ. ರೇಟೆಡ್ 60 ಮತ್ತು ಮೇಲ್ವರ್ಗ. ಸಂ.4.00ಕ್ಕೆ
1. ವಿಂಟರ್ ಅಜೆಂಡಾ 2. ಕನ್‌ಸ್ಟೆಂಟ್ ವಾರಿಯರ್ 3. ಸ್ವಾಗ್ಸ್ ಲೀಪ್

VI. ಟ್ರೋಂ ಬೇ ಪ್ಲೇಟ್–1400 ಮೀ. ರೇಟೆಡ್ 40 ರಿಂದ 65. ಸಂ.4.30ಕ್ಕೆ
1. ಶೆರೋಕ್ 2. ಸ್ವಾಗತಂ 3. ಹಿರೋಯಿಸಮ್

VII. ಕುಶಾಲನಗರ ಪ್ಲೇಟ್–1200 ಮೀ. ರೇಟೆಡ್ 20 ರಿಂದ 45. ಸಂ.5.00ಕ್ಕೆ
1. ಟು ಹಾಟ್ ಟು ಟಚ್ 2. ಬಯೋಮೆಟ್ರಿಕ್ 3. ಅರಿಕಟ್ಟು

ದಿನದ ಅತ್ಯುತ್ತಮ........ :	ವಿಂಟರ್ ಅಜೆಂಡಾ
ಡಬ್ಬಲ್........ :	ವಾಲ್ಬರ್, ಶೆರೋಕ್
ಜಾಕ್‌ಪಾಟ್........ :	3, 4, 5, 6 ಮತ್ತು 7
ಮಿನಿ ಜಾಕ್‌ಪಾಟ್........ :	4, 5, 6 ಮತ್ತು 7
I ಟ್ರಿಬಲ್........ :	2, 3 ಮತ್ತು 4
II ಟ್ರಿಬಲ್........ :	5, 6, ಮತ್ತು 7
ಎಕ್ಸ್‌ಆಕ್ಟ್........ :	1 ರಿಂದ 7

ಟಿಪ್‌ಸ್ಟರ್ ಪಿಜೆಸಿ

ಅಪರಿಚಿತ ಶವ ಪತ್ತೆ

ಮೈಸೂರು, ಮೇ 29– ಮೇ 29ರಂದು ಅಶೋಕಪುರಂ–ಕಡಕೊಳ ರೈಲು ನಿಲ್ದಾಣಗಳ ನಡುವೆ ರೈಲ್ವೆ ಕಿ.ಮೀ. ನಂಬರ್ 08/100–08/100ರಲ್ಲಿ ಸುಮಾರು 45ರಿಂದ 50 ವರ್ಷದ ವ್ಯಕ್ತಿ ರೈಲುಗಾಡಿಗೆ ಸಿಲುಕಿ ಮೃತಪಟ್ಟಿದ್ದು, ಮೃತದೇಹವು ಮೈಸೂರಿನ ಕೆ.ಆರ್. ಆಸ್ಪತ್ರೆಯ ಶವಾಗಾರದಲ್ಲಿರುತ್ತದೆ. ಎತ್ತರ–5.5 ಅಡಿ ಎತ್ತರ, ದೃಢಕಾಯ ಶರೀರ, ಕೋಲು ಮುಖ, ದಪ್ಪ ಮೂಗು, ಅರ್ಧ ಇಂಚು ಬಿಳಿ ಗಡ್ಡ ಮೀಸೆ, ಮೃತನ ಎಡಗೈಯಲ್ಲಿ ಲಿಖಿತ ಮುತ್ತು ಎಂಬ ಹಸಿರು ಹಚ್ಚೆ ಗುರುತು ಇರುತ್ತದೆ. ಮೃತನ ವಾರಸುದಾರರ ಬಗ್ಗೆ ಮಾಹಿತಿ ಕಂಡುಬಂದಲ್ಲಿ ಮೈಸೂರು ರೈಲ್ವೆ ಪೊಲೀಸ್ ಠಾಣೆಯ ದೂ.ಸಂ: 0821–2516579 ಅನ್ನು ಸಂಪರ್ಕಿಸಬಹುದು ಎಂದು ಮೈಸೂರು ರೈಲ್ವೆ ಪೊಲೀಸ್ ಠಾಣೆಯ ಠಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಂಜಿನಿಯರ್‌ಗಳ ವರ್ಗಾವಣೆ; ಸಿಎಂ–ಡಿಸಿಎಂ ನಡುವೆ ಸಂಘರ್ಷ

ಸಿದ್ದರಾಮಯ್ಯ ಹಸ್ತಕ್ಷೇಪಕ್ಕೆ ಕೆರಳಿದ ಡಿಕೆಶಿ; ಮುಖ್ಯ ಕಾರ್ಯದರ್ಶಿಗೆ ಪತ್ರ



ಬೆಂಗಳೂರು, ಮೇ 29– ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ವ್ಯಾಪ್ತಿಯ ಡಿಪಿಎಆರ್ ಮೂಲಕ ತನ್ನ ಇಲಾಖೆಯ ವ್ಯವಹಾರದಲ್ಲಿ ಹಸ್ತಕ್ಷೇಪ ಮಾಡಿರುವುದಕ್ಕೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವ ಕುಮಾರ್ ಕೆರಳಿದ್ದು, ಬಹಿರಂಗವಾಗಿಯೇ ಅಸಮಾಧಾನ ವ್ಯಕ್ತಪಡಿಸಿ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿದ್ದಾರೆ.

ಜಲಸಂಪನ್ಮೂಲ ಇಲಾಖೆಯಲ್ಲಿ ಅಧಿ ಕಾರಿಗಳ ವರ್ಗಾವಣೆ ಮಾಡಿರುವುದಕ್ಕೆ ಸಿಟ್ಟಾದ ಡಿಕೆಶಿ ಮೇ 13ರಂದು ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿದ್ದಾರೆ. ಪತ್ರದಲ್ಲಿ ಐವರು ಎಂಜಿನಿಯರ್‌ಗಳ ವರ್ಗಾವಣೆ ಹಿಂದಕ್ಕೆ ಪಡೆಯಿರಿ ಎಂದು ಆಗ್ರಹಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧೀನದಲ್ಲಿ ಡಿಪಿಎಆರ್ ಕಾರ್ಯನಿರ್ವ ಹಿಸುತ್ತಿದೆ. ಮುಖ್ಯ ಎಂಜಿನಿಯರ್‌ಗಳ ವರ್ಗಾವಣೆ ಮತ್ತು ಸ್ಥಳ ನಿಯುಕ್ತಿಗೆ ಸಂಬಂಧಿಸಿದ ಕಡತವನ್ನು ಮುಖ್ಯಮಂತ್ರಿಗೆ ಡಿಪಿಎಆರ್ ಕಳುಹಿಸಿತ್ತು. ಮುಖ್ಯಮಂತ್ರಿ ಅನುಮೋದನೆ ನೀಡಿದ ಬಳಿಕ ಐವರು ಮುಖ್ಯ ಎಂಜಿನಿಯರ್‌ಗಳನ್ನು ಮೇ 9ರಂದು ವರ್ಗಾವಣೆ ಮಾಡಲಾಗಿತ್ತು.

ನನ್ನ ಇಲಾಖೆಗೆ ಸಂಬಂಧಿಸಿದಂತೆ ವರ್ಗಾವಣೆ, ನೇಮಕಾತಿ ಮುಂತಾದ ವಿಚಾರಗಳ ಬಗ್ಗೆ ಆದೇಶ ಹೊರಡಿಸುವ ಮೊದಲು ನನ್ನ ಪೂರ್ವಾನುಮತಿ ಪಡೆ ಯಲೇಬೇಕು ಎಂದು ಸರ್ಕಾರ ಅಸ್ತಿತ್ವಕ್ಕೆ ಬಂದ ಆರಂಭದಲ್ಲಿಯೇ ಟಿಪ್ಪಣಿಯ ಮೂಲಕ ಮುಖ್ಯ ಕಾರ್ಯದರ್ಶಿಗೆ ಡಿ.ಕೆ.ಶಿವ ಕುಮಾರ್ ಸೂಚಿಸಿದ್ದರು. ಆ ಸೂಚನೆ ಯನ್ನು ಉಲ್ಲಂಘಿಸಿ ಈ ಆದೇಶ ಹೊರಡಿ ಸಿರುವುದು ಶಿವಕುಮಾರ್‌ರನ್ನು ಕೆರಳಿಸಿದೆ.

ಹಲವು ತಿಂಗಳುಗಳಿಂದ ಹುದ್ದೆ ನಿರೀಕ್ಷೆ ಯಲ್ಲಿದ್ದ ಲೋಕೋಪಯೋಗಿ ಇಲಾಖೆ ಯಲ್ಲಿ ಕರ್ತವ್ಯಕ್ಕೆ ಸೇರಿದ ಐವರು ಮುಖ್ಯ ಎಂಜಿನಿಯರ್ ವೃಂದದ ಅಧಿಕಾರಿ ಗಳನ್ನು ಆಡಳಿತಾತ್ಮಕ ಮತ್ತು ಸಾರ್ವ ಜನಿಕ ಹಿತದೃಷ್ಟಿಯಿಂದ ತಕ್ಷಣದಿಂದ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ಖಾಲಿ ಇದ್ದ ಹುದ್ದೆಗಳಿಗೆ ವರ್ಗಾವಣೆ ಮಾಡಿ ಮೇ 9ರಂದು ಡಿಪಿಎಆರ್ ಅಧಿಸೂಚನೆ ಹೊರಡಿಸಿತ್ತು. ಸ್ಥಳ ನಿಯುಕ್ತಿಗೊಳಿಸಿದ ಹುದ್ದೆಯಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡು, ಪ್ರಭಾರ ವರ್ಗಾವಣೆ ಪ್ರಮಾಣ ಪತ್ರವನ್ನು (ಸಿಟಿಸಿ) ಸಲ್ಲಿಸಬೇಕು ಎಂದೂ ಡಿಪಿಎಆರ್ ನಿರ್ದೇಶನ ನೀಡಿತ್ತು. ಅದರ ಅನ್ವಯ ಎಲ್ಲ ಐವರು ಎಂಜಿನಿಯರ್‌ಗಳು ಕರ್ತವ್ಯಕ್ಕೆ ವರದಿ ಮಾಡಿಕೊಂಡಿದ್ದರು.

ಅಂತರ ರಾಜ್ಯ ಜಲವಿವಾದ, ನೀರಾ ವರಿ ಯೋಜನೆಗಳ ವಲಯ, ಎತ್ತಿನ ಹೊಳೆ ಯೋಜನಾ ವಲಯ, ಕಾಡಾ ನೀರಾ ವರಿ ಯೋಜನೆಗಳ ವಲಯ ಮತ್ತು ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮದ ಮುಖ್ಯ ಎಂಜಿನಿಯರ್ ಹುದ್ದೆಗಳಿಗೆ ಈ ಐವರನ್ನು ಸ್ಥಳ ನಿಯುಕ್ತಿಗೊಳಿಸಲಾಗಿತ್ತು. ತನ್ನ ಅಧೀನ ದಲ್ಲಿರುವ ಇಲಾಖೆಯಲ್ಲಿ ಖಾಲಿ ಇರುವ ಈ ಕೆಲವು ವಿಭಾಗಗಳ 'ಮುಖ್ಯಸ್ಥ'ರ ಹುದ್ದೆಗಳಿಗೆ ಸ್ಥಳ ನಿಯುಕ್ತಿ ಗೊಳಿಸುವ ಸಂದರ್ಭದಲ್ಲಿ ಗಮನಕ್ಕೆ ತಾರದ ಡಿಪಿಎಆರ್‌ನ ಕ್ರಮಕ್ಕೆ ಡಿ.ಕೆ.ಶಿವಕುಮಾರ್ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ಸಂಬಂಧ ಪ್ರತಿಕ್ರಿಯಿಸಿರುವ ಡಿ.ಕೆ.ಶಿವ ಕುಮಾರ್, ನಮ್ಮ ಇಲಾಖೆಯಿಂದ ಪ್ರಮೋ ಷನ್ ತೆಗೆದುಕೊಂಡು ಬೇರೆ ಇಲಾಖೆಗಳಿಗೆ ಹೋಗುತ್ತಾರೆ, ನಮ್ಮ ಇಲಾಖೆಯಲ್ಲಿ ಇಂಜಿ ನಿಯರ್‌ಗಳ ಕೊರತೆಯಿದೆ. ಹೀಗಾಗಿ ಅವರನ್ನು ರಿಲೀವ್ ಮಾಡದಂತೆ ಮುಖ್ಯ ಕಾರ್ಯದರ್ಶಿಗಳಿಗೆ ಪತ್ರ ಬರೆದಿರುವುದಾಗಿ ಡಿಸಿಎಂ ತಿಳಿಸಿದ್ದಾರೆ.

ಅಂಗಡಿ ಮುಂದೆಯೇ ಮಳೆ ನೀರು ನಿಂತರೆ ವ್ಯಾಪಾರ ಮಾಡುವುದು ಹೇಗೆ?

ಚಿಕ್ಕಗಡಿಯಾರ ಬಳಿಯ ಮಳಿಗೆದಾರರ ಪ್ರಶ್ನೆ



ಅಂಗಡಿಯ ಮುಂದೆ ಮಳೆ ನೀರು ನಿಂತಿರುವುದು.

ಮೈಸೂರು, ಮೇ 29(ಎಂಕೆ)– ಅಂಗಡಿ ಮಳಿಗೆಗಳ ಎದುರು ನಿಲ್ಲುತ್ತಿರುವ ಮಳೆ ನೀರು ಸರಾಗ ವಾಗಿ ಹರಿಯಲು ಚರಂಡಿ ವ್ಯವಸ್ಥೆ ಸರಿಪಡಿಸುವಂತೆ ಸಂತೆಪೇಟೆ ಚಿಕ್ಕ ಗಡಿಯಾರ ಸಮೀಪದ ಮಳಿಗೆದಾರರು ನಗರಪಾಲಿಕೆ ವಲಯ ಕಚೇರಿ–6ರ ಆಯುಕ್ತರಿಗೆ ಮನವಿ ಸಲ್ಲಿಸಿದ್ದಾರೆ.

ಮೈಸೂರಿನಲ್ಲಿ ನಿರಂತರವಾಗಿ ಮಳೆಯಾಗುತ್ತಿದ್ದು, ಸಂತೆಪೇಟೆ ರಸ್ತೆ ಬದಿಯಲ್ಲಿ ಮಳಿಗೆಗಳ ಎದುರು ಮಳೆ ನೀರು ನಿಲ್ಲುತ್ತಿದೆ. ಈ ರಸ್ತೆಯಲ್ಲಿ ಜನ ಸಂದಣಿ ಜೊತೆಗೆ ವಾಹನ ಸಂಚಾರ ಹೆಚ್ಚಾಗಿದ್ದು, ಮಳೆ ಬಂದರೆ ತಿರುಗಾ ಡುವುದಕ್ಕೂ ಪರದಾಡುವ ದುಸ್ಥಿತಿ ನಿರ್ಮಾಣವಾಗಿದೆ. ಚರಂಡಿಗಳು ಬ್ಲಾಕ್ ಆಗಿರುವುದರಿಂದ ಮಳೆ ಬಂದರೆ ಸುಮಾರು ಒಂದು ಅಡಿಯಷ್ಟು ನೀರು ನಿಲ್ಲಲ್ಲಿದ್ದು, ನೀರು ಸರಾಗವಾಗಿ ಹರಿಯಲು ಸಾಧ್ಯವಾಗುತ್ತಿಲ್ಲ.

ಚರಂಡಿ ವ್ಯವಸ್ಥೆ ಸಂಪೂರ್ಣವಾಗಿ ಹಾಳಾಗಿದ್ದು, ಜೋರು ಮಳೆಯಾದರೆ ಮಳಿಗೆಗಳ ಒಳಕ್ಕೂ ಮಳೆ ನೀರು ಹರಿದು ಬರುತ್ತಿದೆ. ಲಕ್ಷಾಂತರ ರೂ. ಬಂಡವಾಳ ಹಾಕಿದ್ದು, ಗ್ರಾಹಕರು ಬರಲಾಗದೆ ವ್ಯಾಪಾರ ನಷ್ಟವಾಗುತ್ತಿದೆ. ಅಂಗಡಿ ಮುಂದೆಯೇ ಮಳೆ ನೀರು ನಿಂತರೆ ವ್ಯಾಪಾರ ಮಾಡುವುದು ಹೇಗೆ ಎಂದು ಪ್ರಶ್ನಿಸಿರುವ ಮಳಿಗೆದಾರರು, ಕೂಡಲೇ ಹಾಳಾಗಿರುವ ಚರಂಡಿ ವ್ಯವಸ್ಥೆ ದುರಸ್ಥಿ ಮಾಡುವಂತೆ ಅಕ್ಕಿ ವ್ಯಾಪಾರಿ ಎಂ.ಬಿ. ಸೀನಪ್ಪ ಸನ್ಸ್ ಮಾಲೀಕ ಸುರೇಶ್, ವರ್ತಕರಾದ ಆರ್.ಗಣೇಶ್, ಜಯಲಕ್ಷ್ಮಿ ಟ್ರೇಡರ್ಸ್‌ನ ಮಹೇಶ್, ಮಂಜುನಾಥ್, ಬಿ.ನಾಗರಾಜು ಸೇರಿದಂತೆ ಹಲವರು ನಗರಪಾಲಿಕೆ ವಲಯ ಕಚೇರಿ–6 ಆಯುಕ್ತರಿಗೆ ಮನವಿ ಸಲ್ಲಿಸಿದ್ದಾರೆ.

ನಟನದಲ್ಲಿ ಹಾಸ್ಯ ನಾಟಕ #36 ಸತಿ ಸಾವಿತ್ರಿ ನಿವಾಸ



ಮೈಸೂರು, ಮೇ 29– ಮೈಸೂರು ಮತ್ತು ಸುತ್ತಮುತ್ತಲಿನ ಸದಭಿರುಚಿಯ, ಸಹೃದಯ ರಂಗಾಸಕ್ತರಿಗಾಗಿ ನಟನವು ವಾರಾಂತ್ಯ ರಂಗ ಪ್ರದರ್ಶನಗಳನ್ನು ನಡೆಸುತ್ತಿದ್ದು, ಜೂನ್ 1ರಂದು ಸಂಜೆ 6.30ಕ್ಕೆ ಸರಿಯಾಗಿ ರಾಮಕೃಷ್ಣನಗರದಲ್ಲಿರುವ ನಟನ ರಂಗಶಾಲೆಯಲ್ಲಿ ಧೀಮಹಿ ಥಿಯೇಟರ್ ಬೆಂಗಳೂರು ಅಭಿನಯಿಸುವ ನಕ್ಕು ನಗಿಸುವ ಹಾಸ್ಯ ನಾಟಕ '#36 ಸತಿ ಸಾವಿತ್ರಿ ನಿವಾಸ' ಪ್ರದರ್ಶನ ಗೊಳ್ಳಲಿದೆ. ನಾಟಕದ ರಚನೆ, ಸಂಗೀತ, ನಿರ್ದೇಶನ ಕಾರ್ತಿಕ್ ಹೆಬ್ಬಾರ್ ಅವರದ್ದು ಹೆಚ್ಚಿನ ಮಾಹಿತಿಗೆ ಮೊ. 7259537777, 9480468327, 9845595505 ಸಂಪರ್ಕಿಸಬಹುದು.

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ನನ್ನ ಕಕ್ಷಿದಾರರಾದ ಮೈಸೂರು–571602, ಕೆ.ಆರ್.ನಗರ ಟೌನ್, ಮುಸ್ಲಿಂ ಬ್ಲಾಕ್, ವಾರ್ಡ್ ನಂ. 20, ಮನೆ ನಂ. 20/104 ರಲ್ಲಿ ವಾಸವಾಗಿರುವ ರಫಿ ಅಹ್ಮದ್ ಖಾನ್ ರವರ ಮಗನಾದ ಫೈಜ್ ಅಹಮದ್ ಖಾನ್ ರವರಿಗೆ ಸೇರಿದ ಸ್ವತ್ತಿನ ಮೂಲ ವಿಲ್ ಪತ್ರ, ರ ದಸ್ತಾವೇಜು ನಂ. 12 78–79 ದಿನಾಂಕ 05/08/1978 ರ ಮೂಲ ದಾಖಲಾತಿಗಳು ದಿನಾಂಕ 10/01/2025 ರಂದು ಕಳೆದು ಹೋಗಿರುತ್ತದೆ. ಇದರ ಸಂಬಂಧ ದಿನಾಂಕ 29/05/2025 ರಂದು ಮೈಸೂರಿನ ಎನ್.ಆರ್. ಪೊಲೀಸ್ ಠಾಣೆಗೆ ದೂರಿನ ಸಂಖ್ಯೆ 1646525230000520 ರಂತೆ ದೂರನ್ನು ದಾಖಲಿಸಿರುತ್ತಾರೆ. ಸದರಿ ಮೇಲೆ ಹೇಳಿರುವ ಮೂಲ ವಿಲ್ ಪತ್ರ ಯಾರಿಗಾದರೂ ದೊರಕಿ ದಲ್ಲಿ ಈ ಕೆಳಗೆ ನಮೂದಿಸಿರುವ ವಿಳಾಸಕ್ಕೆ ಸಾರ್ವಜನಿಕ ಪ್ರಕಟಣೆ ದಿನಾಂಕದಿಂದ 7 (ಏಳು) ದಿನಗಳ ಒಳಗಾಗಿ ತಲುಪಿಸತಕ್ಕದ್ದು. ಒಂದೊಮ್ಮೆ ಯಾವುದೇ ವ್ಯಕ್ತಿ/ವ್ಯಕ್ತಿಗಳು ಸದರಿ ಮೂಲ ವಿಲ್ ಪತ್ರ ದುರುಪಯೋಗ ಪಡಿಸಿಕೊಂಡಲ್ಲಿ ಸದರಿ ವ್ಯಕ್ತಿಗಳೇ ಹೊಣೆಗಾರರಾಗುತ್ತಾರೆ. ಹಾಗೂ ನಮ್ಮ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಸಹಿ/– ಟಿ.ಕೆ. ಪ್ರವೀಣ್, ಹಿಮ ಗೌರಿ ಅಸೋಸಿಯೇಟ್ಸ್ ನಂ. 134, ಸಿಹೆಚ್–46/6ಬಿ, 8ನೇ ಮೇನ್, 1ನೇ ಕ್ರಾಸ್, ಕೆ.ಹೆಚ್.ರಸ್ತೆ, ಸರಸ್ವತಿಪುರಂ –570009. ಮೊ. 9481965055
ದಿನಾಂಕ : 29/05/2025
ಸ್ಥಳ : ಮೈಸೂರು

ಪುರಸಭೆ ಕಾರ್ಯಾಲಯ, ವಿರಾಜಪೇಟೆ

ಕೊಡಗು ಜಿಲ್ಲೆ 571218
ದೂ: 08274-257332 | ಇ–ಮೇಲ್: itstaff_ulb_virajpet@yahoo.com ವೆಬ್ ಸೈಟ್: www.virajpettown.mrc.gov.in

ಕ್ರ.ಸಂ.ನಂ.ಪು.ವಿ/ಎಸ್.ಎಫ್.ಸಿ.ವಿ.ಅ. ಪು.ನಿ/ಟೆ–01/2025–26 ದಿನಾಂಕ: 28–05–2025

ಟೆಂಡರ್ ಪ್ರಕಟಣೆ

(ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ವಿರಾಜಪೇಟೆ ಪುರಸಭೆಯ 2023–24ನೇ ಸಾಲಿನ ಎಸ್.ಎಫ್.ಸಿ ವಿಶೇಷ ಅನುದಾನ, ಮತ್ತು ವಿರಾಜಪೇಟೆ ಪುರಸಭೆಯ 2025–26ನೇ ಸಾಲಿನ ಪುರಸಭೆ ನಿಧಿ ಅನುದಾನದಡಿಯಲ್ಲಿ ಸಿವಿಲ್ ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ನಿಯಮ 2000, ಹಾಗೂ ತಿದ್ದುಪಡಿ ನಿಯಮ 2001ಕ್ಕೆ ಒಳಪಟ್ಟು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಗುತ್ತಿಗೆದಾರರಿಂದ ಕೆ.ಡಬ್ಲ್ಯೂ 1ರ ನಿಯಮಗಳಿಗನುಸಾರ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಗುತ್ತಿಗೆದಾರರು ತಮಗೆ ಬೇಕಾದ ಟೆಂಡರ್ ವಿವರಗಳನ್ನು www.kppp.karnataka.gov.in ವೆಬ್‌ಸೈಟ್ ಮೂಲಕ ಪಡೆದುಕೊಂಡು ನಂತರ ಭರ್ತಿ ಮಾಡಿದ ಟೆಂಡರ್‌ಗಳನ್ನು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಬಹುದು.

1. ಟೆಂಡರ್ ಫಾರಂಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ : 29/05/2025 ರಿಂದ 12/06/2025 ಸಂಜೆ 17:30ಗಂಟೆಗೆ
2. ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ : 12/06/2025 ಸಂಜೆ 17:30 ಗಂಟೆವರೆಗೆ
3. ಟೆಂಡರ್ ತೆರೆಯುವ ದಿನಾಂಕ : 13/06/2025 ಬೆಳಿಗ್ಗೆ 11.30 ಗಂಟೆ ನಂತರ
4. ಟೆಂಡರುಗಳನ್ನು ತೆರೆಯುವ ಸ್ಥಳ : ವಿರಾಜಪೇಟೆ ಪುರಸಭೆ

ಕಾಮಗಾರಿಗಳ ವಿವರ, ಹಾಗೂ ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ವೆಬ್ ಸೈಟ್ www.virajpettown.mrc.gov.inನಲ್ಲಿ ಮತ್ತು ಕಛೇರಿಯ ಸೂಚನಾ ಫಲಕವನ್ನು ನೋಡಬಹುದಾಗಿದೆ.

ಸಹಿ/– (ಶ್ರೀಮತಿ. ಎಂ.ಕೆ ದೇಚಮ್ಮ) ಅಧ್ಯಕ್ಷರು, ಪುರಸಭೆ, ವಿರಾಜಪೇಟೆ.
ಸಹಿ/– (ಶ್ರೀಮತಿ. ಫಸಿಹಾ ತಬಸಮ್) ಉಪಾಧ್ಯಕ್ಷರು ಪುರಸಭೆ, ವಿರಾಜಪೇಟೆ.
ಸಹಿ/– (ಎಂ.ಕೆ.ಅಬ್ದುಲ್ ಜಲೀಲ್) ಸ್ಥಾಯಿ ಸಮಿತಿ ಅಧ್ಯಕ್ಷರು, ಪುರಸಭೆ, ವಿರಾಜಪೇಟೆ.
ಸಹಿ/– (ಶ್ರೀ ನಾಚಪ್ಪ ಪಿ.ಕೆ) ಮುಖ್ಯಾಧಿಕಾರಿ, ಪುರಸಭೆ, ವಿರಾಜಪೇಟೆ.